ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



'ರಾಯಣ್ಣ ಬ್ರಿಗೇಡ್' ಬಿಜೆಪಿ ಡಬ್ಬಲ್ ಗೇಮ್

ಸಂಪುಟ 10 | ಸಂಚಿಕೆ 34 ಪುಟ 16 | ಆಗಸ್ಟ್ 21, 2016 | ರೂ. 10/-

web: www.janashakthi.co.in e-mail : js_weekly@yahoo.com



ಚಾರಿತ್ರಿಕ 'ದಲಿತ ಅಸ್ಮಿತಾ ಯಾತ್ರಾ'



'ಕೂಪನ್ ಭಾಗ್ಯ' ವಿರುದ್ಧ ಆಕ್ರೋಶ

ಈ ಸ್ವಾತಂತ್ರ್ಯ ದಿನದ ಪ್ರತಿಜ್ಞೆ ಏನು? - ಕಾರಟ್

ಪೆಲೆಟ್ ಗುಂಡಿನ ದಾಳಿಯಿಂದ ಕಣ್ಣು ಕಳೆದುಕೊಂಡು ಕಾಶ್ಮೀರಿ ಯುವತಿ ಇನ್ಶಾ





ಮಹಾದಾಯಿ ಬಂಧಿತರ ಬಿಡುಗಡೆಗೆ ಯಮನೂರು ಚಲೋ

'ಫಿಲಂ ಡೈಲಾಗ್ ಒಣಮಂತ್ರ ಬಿಡಿ' - ಯೆಚೂರಿ



ಅಖಿಲ ಭಾರತ ಮುಷ್ಕರ ಏಕೆ?

ಸಿನಿಮೀಯ ಡೈಲಾಗ್‌ಗಳಿಂದ, ಒಣ ಮಂತ್ರಗಳಿಂದ ಪರಿಹಾರ ಸಾಧ್ಯವಿಲ್ಲ

ಕಳೆದ ಒಂದು ತಿಂಗಳಿಂದ ಪ್ರಜಾಪ್ರಭುತ್ವವಾದಿಗಳಲ್ಲಿ ತೀವ್ರ ಆತಂಕ ಮೂಡಿಸಿದ್ದ ಸ್ವಯಂನೇಮಿತ 'ಗೋರಕ್ಷಕ'ರ ಮತ್ತು ಕಾಶ್ಮೀರದಲ್ಲಿ ಪೆಲೆಟ್‌ಗನ್‌ಗಳ ಅವಾಂತರಗಳ ಬಗ್ಗೆ ಕೊನೆಗೂ ಪ್ರಧಾನ ಮಂತ್ರಿಗಳು ತಮ್ಮ ದಿವ್ಯಮೌನ ಮುರಿದಿದ್ದಾರೆ. ಇದರಿಂದ ಅವರ ಬೆಂಬಲಿಗರಿಗೂ ತುಸು ಹಾಯೆನಿಸಿದೆ. ಆದರೆ ಇಷ್ಟರಿಂದಲೇ ಸಮಸ್ಯೆಗಳಿಗೆ ಪರಿಹಾರ ಸಾಧ್ಯವೇ?

'ಗೋರಕ್ಷಕ'ರ ಬಗ್ಗೆ ಅವರು ಹೇಳಿದ್ದೇನು?

ಆಗಸ್ಟ್ 6ರಂದು ತನ್ನ ಸರಕಾರ ಎರಡು ವರ್ಷಗಳನ್ನು ಪೂರೈಸಿದ ಸಂದರ್ಭದ ಒಬಾಮರ 'ಟೌನ್‌ಹಾಲ್' ಮಾದರಿ ಸಂವಾದದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ 'ಗೋರಕ್ಷಣೆಯ ಹೆಸರಲ್ಲಿ ಅಂಗಡಿ ತೆರೆದಿರುವವರ ಬಗ್ಗೆ ನನಗೆ ಬಹಳ ಸಿಟ್ಟು ಬರುತ್ತದೆ' ಎಂದರು. ಈ ಗೋರಕ್ಷಕರು ಎಂದು ಹೇಳಿಕೊಳ್ಳುವವರಲ್ಲಿ 70–80 ಶೇಕಡಾ ರಾತ್ರಿ ಸಮಾಜ ಘಾತುಕ ಕೆಲಸಗಳನ್ನು ಮಾಡಿ ಹಗಲಲ್ಲಿ ಗೋರಕ್ಷಣೆಯ ನಟನೆ ಮಾಡಿ ತಮ್ಮ ಪಾಪವನ್ನು ಮುಚ್ಚಿಕೊಳ್ಳುವವರು ಎಂದರಂತೆ. ಹೆಚ್ಚಿನ ಹಸುಗಳು ಪ್ಲಾಸ್ಟಿಕ್, ಕಾಗದ ಇತ್ಯಾದಿ ತಿಂದು ಸಾಯುತ್ತಿವೆ, ಅದನ್ನು ತಪ್ಪಿಸಿದರೆ ಅಷ್ಟೇ ಸಾಕು ಅದೇ ದೊಡ್ಡ ಗೋಸೇವೆ ಆಗುತ್ತದೆ ಎಂದು ಸಂಘ ಪರಿವಾರ ಲೇವಡಿ ಮಾಡುವ 'ಖೋಟಾ ಜಾತ್ಯಾತೀತವಾದಿಗಳ' ಶೈಲಿಯಲ್ಲಿ ಮಾತಾಡಿದ್ದು ಆತಂಕಿತರಾಗಿದ್ದ ಪ್ರಧಾನಿಗಳ ಕಾರ್ಪೊರೇಟ್–ಬೌದ್ಧಿಕ ಅಭಿಮಾನಿಗಳಿಗೆ ತುಸು ಸಮಾಧಾನ ತಂದರೂ ಸಂಘ ಪರಿವಾರದ ವಿಶ್ವ ಹಿಂದೂ ಪರಿಷತ್, ಗೋರಕ್ಷಾ ದಳ ಮುಂತಾದವರಲ್ಲಿ ಆಕ್ರೋಶ ಉಂಟು ಮಾಡಿರುವುದೂ ಕಂಡು ಬಂದಿದೆ.

ವಿಶೇಷವೆಂದರೆ ಪ್ರಧಾನಿಗಳು ಇಲ್ಲಿಗೇ ನಿಲ್ಲಲಿಲ್ಲ. ಮರುದಿನ ಹೈದರಾಬಾದಿನಲ್ಲಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತ 'ನಿಮಗೆ ಕೊಲ್ಲಬೇಕೆಂದಿದ್ದರೆ ನನ್ನನ್ನು ಕೊಲ್ಲಿ' ಎಂದು ಭಾವಾವೇಶದಿಂದ ಹೇಳಿರುವುದಾಗಿ ವರದಿಯಾಗಿದೆ. ಆದರೆ ಅದೇಕೋ ಇದನ್ನು ಹೆಚ್ಚಿನವರು ಸಿನಿಕತನದಿಂದಲೇ ಸ್ವೀಕರಿಸಿರುವಂತೆ ಕಾಣುತ್ತದೆ. ಏಕೆಂದರೆ ದೇಶದ ಜನತೆ ಕಳೆದ ಎರಡು ವರ್ಷಗಳಲ್ಲಿ ಇಂತಹ ಭಾವಾವೇಶದ ಮಾತುಗಳನ್ನು ಬಹಳಷ್ಟು ಕೇಳಿದ್ದಾರೆ.

ಬಾಲಿವುಡ್ ಡೈಲಾಗ್

ರಾಜ್ಯಸಭೆಯಲ್ಲಿ ಹಸುವಿನ ಹೆಸರಲ್ಲಿ ಜನರನ್ನು ಸಾಯಿಸುವ ಗೋರಕ್ಷಕರು ನಿರ್ಮಿಸಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ನಡೆದ ವಿಶೇಷ ಚರ್ಚೆಯಲ್ಲಿ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು "ಅಂತೂ ಕೊನೆಗೂ ಪ್ರಧಾನ ಮಂತ್ರಿಗಳು ಏನೋ ಹೇಳಿದರು, ತಡವಾಗಿ ಹೇಳಿದರು, ಅವರು ಹೇಳಿದ್ದಾದರೂ ಏನು? 'ಸಾಯಿಸುವುದಿದ್ದರೆ ದಲಿತರನ್ನು ಸಾಯಿಸಬೇಡಿ, ನಮ್ಮನ್ನು ಸಾಯಿಸಿ'. ಇದು ಸುಮಾರಾಗಿ ಪ್ರತಿಯೊಂದು ಹಿಂದಿ ಸಿನೇಮಾದಲ್ಲಿ ಕೇಳುವ ಡೈಲಾಗ್. ತಾಯಿ ಹೇಳುತ್ತಾಳೆ–ಮಕ್ಕಳನ್ನು ಬಿಟ್ಟು ಬಿಡಿ, ನನ್ನನ್ನು ಸಾಯಿಸಿ. ಇಲ್ಲಿ ತಾಯಿ ಯಾರು, ಅಂದರೆ ನಟರು ಯಾರು, ನಮಗೆಲ್ಲರಿಗೂ ಗೊತ್ತು" ಎಂದು ಮಾರ್ಮಿಕವಾಗಿ ಹೇಳಿದರು.

ಮುಂದುವರೆಯುತ್ತ, ದಲಿತರನ್ನು ಕೊಲ್ಲಬೇಡಿ ಅಂದರೆ ದಲಿತೇತರರನ್ನು ಕೊಲ್ಲುವ ಲೈಸೆನ್ಸ್ ಇದೆ ಎಂದು ಅರ್ಥವೇ, ಅದು ನಮ್ಮ ಧಾರ್ಮಿಕ ಅಲ್ಪಸಂಖ್ಯಾತರನ್ನು ಕೊಲ್ಲುವ ಪರವಾನಿಗೆಯೇ ಎಂದು ಪ್ರಶ್ನಿಸಿದರು. ಇದು ಟೊಳ್ಳು ಪ್ರಶ್ನೆಯಲ್ಲ. ಏಕೆಂದರೆ ಈ ಗೋರಕ್ಷಣೆಯ 'ವ್ಯವಹಾರ'ದಲ್ಲಿ ಮೊದಲು ಸಾಯಿಸಿದ್ದು ಅಖ್ಲಾಕ್‌ನನ್ನು ಎಂದು ಅವರು ನೆನಪಿಸಿದರು.

ಸಂಸತ್ತಿನಲ್ಲಿ ಭರವಸೆ ನೀಡಿ

ಈಗೇನೋ ರಾಜ್ಯ ಸರಕಾರಗಳು ಹುಸಿ ಗೋರಕ್ಷಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಪ್ರಧಾನಿಗಳು ಪಕ್ಷದ ಕಾರ್ಯಕರ್ತರ ಮುಂದೆ ತಾಕೀತು ಮಾಡಿದ್ದಾರೆ. ಆದರೆ ಸೀತಾರಾಮ್ ಯೆಚೂರಿಯವರು ಎರಡು ವರ್ಷಗಳ ಹಿಂದಿನಿಂದಲೇ ಕೇಂದ್ರ ಸಂಪುಟದ ಮಂತ್ರಿಗಳು, ಆಳುವ ಪಕ್ಷದ ಸಂಸದರು, ಶಾಸಕರೂ ಸೇರಿದಂತೆ ಸಂಘ ಪರಿವಾರದವರು ದೇಶದ ಕಾನೂನುಗಳನ್ನು ಉಲ್ಲಂಘಿಸಿ ಹೇಳಿಕೆಗಳನ್ನು ನೀಡಲಾರಂಭಿಸಿದಾಗಲೇ, ಇಂತವರ ವಿರುದ್ಧ ದೇಶದ ಕಾನೂನಿನ ಪ್ರಕಾರ ಶಿಕ್ಷಿಸುವ ಭರವಸೆಯನ್ನು ಸಂಸತ್ತಿನಲ್ಲಿ ನೀಡಿ ಎಂದು ಪ್ರಧಾನ ಮಂತ್ರಿಗಳನ್ನು ಆಗ್ರಹಿಸುತ್ತ ಬಂದಿದ್ದಾರೆ. ಆದರೆ ಇದುವರೆಗೂ ಪ್ರಧಾನಿಗಳಿಂದ ಅಂತಹ ಹೇಳಿಕೆ ಬಂದಿಲ್ಲ ಎಂಬುದನ್ನು ಸೀತಾರಾಮ್ ಯೆಚೂರಿಯವರು ರಾಜ್ಯಸಭೆಯಲ್ಲಿ ಆಗಸ್ಟ್ 9ರಂದು ಮತ್ತೊಮ್ಮೆ ನೆನಪಿಸಿದರು.

ಚಾಣಕ್ಯ ತಂತ್ರ?

ಭಾರತದ ಚಾಣಕ್ಯನಂತಹ ಪಾಶ್ಚಿಮಾತ್ಯ ರಾಜ–ತಂತ್ರಜ್ಞ, ಮೆಕಿಯವೆಲಿ ತನ್ನ ಧಣಿ ರಾಜಕುಮಾರನಿಗೆ ನೀಡಿದ ಎನ್ನಲಾದ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ಸೀತಾರಾಮ್ ಯೆಚೂರಿ ನೆನಪಿಸಿದರು. "ಜನರ ಹೃದಯ ಗೆಲ್ಲುವುದು ಹೇಗೆ? ಮೊದಲು ನಿನ್ನ ಆಳ್ವಿಕೆಯಲ್ಲಿ ಎಷ್ಟೊಂದು ಘೋರವಾದ ಅನಿಷ್ಟ ಸಾಧ್ಯ ಎಂಬುದನ್ನು ತೋರಿಸು. ನಂತರ ಹಾಗೆ ಮಾಡಬಾರದೆಂದು ಸಹನೆ ಪ್ರದರ್ಶಿಸು. ಆಗ ಜನ ನಿಟ್ಟುಸಿರು ಬಿಡುತ್ತಾರೆ, ಎಂತಹ ಪ್ರಜಾಪೋಷಕ ಎಂದು ಜನ ನಿನ್ನನ್ನು ಹಾಡಿ ಹೊಗಳುತ್ತಾರೆ"!

ದೇಶದಲ್ಲಿ ನಡೆಯುತ್ತಿರುವುದಕ್ಕೂ ಪ್ರಧಾನ ಮಂತ್ರಿಗಳು ಹೇಳುತ್ತಿರುವುದಕ್ಕೂ ಸಂಬಂಧವೇ ಇಲ್ಲದಂತಾಗಿದೆ. ನಮಗೆ ಬೇಕಾಗಿರುವುದು ದೇಶದ ಕಾನೂನನ್ನು ಉಲ್ಲಂಘಿಸುವವರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂಬ ಸ್ಪಷ್ಟ ಭರವಸೆ. ಆ ಭರವಸೆ ಇನ್ನೂ ಸಿಕ್ಕಿಲ್ಲ. ಒಮ್ಮೆ ಪ್ರಧಾನ ಮಂತ್ರಿಗಳು ಸಂಸತ್ತಿಗೆ ಬಂದು ಈ ಭರವಸೆಯನ್ನು ಕೊಡಲಿ ಎಂದು ಸೀತಾರಾಮ್ ಯೆಚೂರಿಯವರು ಮತ್ತೊಮ್ಮೆ ಆಗ್ರಹಿಸಿದ್ದಾರೆ.

ಕಾಶ್ಮೀರದ ಬಗ್ಗೆ ಹೇಳಿದ್ದೇನು?

30 ದಿನಗಳ ಕರ್ಫ್ಯೂ, ಸುಮಾರು 60 ಜನರ ಸಾವು, ನೂರಕ್ಕೂ ಹೆಚ್ಚು ಮಂದಿ ಕಣ್ಣು ಕಳಕೊಂಡ, ಮತ್ತು ಸಾವಿರಾರು ಮಂದಿ ಗಾಯಗೊಂಡ ನಂತರ ಪ್ರಧಾನ ಮಂತ್ರಿಗಳು ಈ ಬಗ್ಗೆ ಮೊದಲ ಬಾರಿಗೆ ಪ್ರಸ್ತಾಪಿಸಿದರು– ಕಾಶ್ಮೀರದಲ್ಲಲ್ಲ, ಸಂಸತ್ತಿನಲ್ಲಲ್ಲ, ಮಧ್ಯಪ್ರದೇಶದ ಒಂದು ಸಾರ್ವಜನಿಕ ಸಭೆಯಲ್ಲಿ.

ಜಿಎಸ್‌ಟಿ ಬಗ್ಗೆ ಮಾತಾಡಲೆಂದೇ ಲೋಕಸಭೆಗೆ ಹೋದ ಪ್ರಧಾನಿಗಳು 'ಹುಸಿ ಗೋರಕ್ಷಕ'ರ ಬಗ್ಗೆಯಾಗಲೀ, ಕಾಶ್ಮೀರದ

ಪುಟ 8 ನೋಡಿ



"ಪ್ರತಿದಿನ 370ನೇ ಕಲಮನ್ನು ರದ್ದು ಮಾಡುತ್ತೇವೆ ಎನ್ನುತ್ತಿದ್ದರೆ ಕಾಶ್ಮೀರಿಗಳಲ್ಲಿ ವಿಶ್ವಾಸ ಮೂಡಿಸಬಲ್ಲಿರಾ? ಗೋರಕ್ಷಣೆಯ ಹೆಸರಿನಲ್ಲಿ ನಾನು ಕೊಲ್ಲುತ್ತೇನೆ ಎಂದು ಪ್ರತಿನಿತ್ಯ ಹೇಳುತ್ತಿದ್ದರೆ, ಸುಳ್ಳು ಆಪಾದನೆಯ ಮೇಲೆ ಝಾರ್ಖಂಡ್‌ನ ಲತೇಹಾರ್‌ನಲ್ಲಿ ಇಬ್ಬರು ಮುಸ್ಲಿಮರನ್ನು ನೇಣು ಹಾಕಿದರೆ, ದಾದ್ರಿಯಲ್ಲಿ ಅಖ್ಲಾಕ್‌ನನ್ನು ಸಾಯಿಸಿದರೆ ವಿಶ್ವಾಸ ಮೂಡುತ್ತದೆಯೇ? ಘರ್‌ವಾಪಸಿ, ಲವ್‌ಜಿಹಾದ್ ಇವೆಲ್ಲ ವಿಶ್ವಾಸವನ್ನು ಕೆಡಿಸುವಂತ ಕ್ರಮಗಳು. ಸರಕಾರ ಈ ಬಗ್ಗೆ ಗಂಭೀರ ಚಿಂತನೆ ನಡೆಸಬೇಕು. ವಿಶ್ವಾಸ ಮೂಡಿಸಲು ನೀವು ವಿಶ್ವಾಸಾರ್ಹರಾಗಿರಬೇಕಾಗುತ್ತದೆ, ಕೇವಲ ವಾಜಪೇಯಿಯವರು ಹೇಳಿದ್ದನ್ನು ಪುನರುಚ್ಚರಿಸುವುದರಿಂದ ಅದು ಸಾಧ್ಯವಿಲ್ಲ.**"**

ಸೀತಾರಾಮ್ ಯೆಚೂರಿ
ರಾಜ್ಯಸಭೆಯಲ್ಲಿ , ಆಗಸ್ಟ್ 10

'ಬೇಟೀ ಉಠಾವೋ' ಪ್ರಕರಣವನ್ನು ಬಯಲಿಗೆಳೆದವರ ಮೇಲೆ ಕ್ರಿಮಿನಲ್ ಕೇಸ್! ಜನವಾದಿ ಮಹಿಳಾ ಸಂಘಟನೆಯ ಖಂಡನೆ

ಅಸ್ಸಾಂನ ಕೋಕ್ರಾಜಾರ್‌ನಿಂದ ಬಡ ಆದಿವಾಸಿ ಕುಟುಂಬಗಳ 31 ಹೆಣ್ಣು ಮಕ್ಕಳ 'ಕಳ್ಳ ಸಾಗಣೆ' ಮಾಡಿದ ಪ್ರಕರಣವನ್ನು ಬಯಲಿಗೆಳೆದಿರುವ 'ಔಟ್‌ಲುಕ್' ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ವರದಿಗಾರ್ತಿ ನೇಹಾ ದೀಕ್ಷಿತ್ ಮೇಲೆ ಪೋಲೀಸರು ಸುಳ್ಳು ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದಾರೆ ಎಂಬ ವರದಿಯಿದೆ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ಒಂದೆಡೆ ಮೋದಿ ಸರಕಾರ 'ಬೇಟಿ ಬಚಾವೋ' ಎಂದು ಸಾರುತ್ತಿದ್ದರೆ, ಅದರ ಪರಿವಾರದವರು ಈ 'ಬೇಟಿ ಉಠಾವೋ' ಕೆಲಸದಲ್ಲಿ ತೊಡಗಿದ್ದಾರೆಂಬುದನ್ನು ಬಯಲಿಗೆಳೆದವರ ಬಗ್ಗೆ ಕುಪಿತರಾಗಿ ಈ ಕೆಲಸವನ್ನು ಪೋಲೀಸರಿಂದ ಮಾಡಿಸಿದ್ದಾರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣಕ್ಕೆ, ಮತ್ತು ಸಂಘ ಪರಿವಾರದ ಕೋಮುವಾದಿ ತಂತ್ರಗಳ ವಿರುದ್ಧ ದನಿಯೆತ್ತುವ ಮಾಧ್ಯಮ ವ್ಯಕ್ತಿಗಳ ಬೇಟೆಯಾಡಲು ಪೋಲೀಸರನ್ನು ಹೇಗೆ ಬಳಸಲಾಗುತ್ತಿದೆ ಎಂಬುದಕ್ಕೆ ಇದು ಇನ್ನೊಂದು ಸಾಕ್ಷಿ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈ ಕೇಸುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಮತ್ತು ಈ ಪ್ರಕರಣದಲ್ಲಿ ಇದ್ದಾರೆ ಎನ್ನಲಾದ ಪಂಜಾಬ್ ಮತ್ತು ಗುಜರಾತಿನ ಆರೆಸ್ಸೆಸ್ ಮಂದಿಯ ಮೇಲೆ ಕೇಸು ಹಾಕಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಅಘೋಷಿತ ಪತ್ರಿಕಾ ಸೆನ್ಸಾರ್‌ಶಿಪ್‌ನತ್ತ ಸಾಗುತ್ತಿದ್ದೇವೆಯೇ?–ದಿಲ್ಲಿ ಪತ್ರಕರ್ತರ ಸಂಘದ ಪ್ರಶ್ನೆ

ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ಕೂಡ ಕೆಲವು ಆರೆಸ್ಸೆಸ್ ಮುಖಂಡರ ಆದೇಶದಂತೆ ಔಟ್‌ಲುಕ್ ಸಂಪಾದಕರು, ಪ್ರಕಾಶಕರು ಮತ್ತು ಪತ್ರಕರ್ತರ ಮೇಲೆ ಕೇಸು ಹಾಕಲಾಗಿದೆ ಎಂದು ಖಂಡಿಸಿದೆ. ಎಷ್ಟು ತ್ವರಿತವಾಗಿ ಈಕೇಸು ಹಾಕಲಾಗಿದೆಯೆಂದರೆ ಇದು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ದಾಳಿ ಮಾತ್ರವೇ ಅಲ್ಲ, ಸಂದೇಶ ನೀಡುವವರ ಬಾಯಿ ಮುಚ್ಚಿಸುವ ಪ್ರಯತ್ನ ಕೂಡ ಎಂದು ಅದು ಹೇಳಿದೆ. ಈ ಪ್ರಕರಣವನ್ನು ಬಯಲಿಗೆಳೆದವರ ಮೇಲೆ ಗುರಿಯಿಡುವ ಬದಲು ಈ ಹಗರಣ ನಡೆಸಿದವರ ಮೇಲೆ ಕ್ರಮ ಕೈಗೊಳ್ಳಿ ಎಂದು ಡಿಯುಜೆ ಕೂಡ ಆಗ್ರಹಿಸಿದೆ.

ಪಶ್ಚಿಮ ಬಂಗಾಲದಲ್ಲಿ ಆಳುವ ಪಕ್ಷದ ಮುಖಂಡರ ಭ್ರಷ್ಟಾಚಾರಗಳನ್ನು ಕುಟುಕು ತನಿಖೆಗಳ ಮೂಲಕ ಬಯಲಿಗೆಳೆದಿರುವ 'ನಾರದ ನ್ಯೂಸ್'ನ ಮುಖ್ಯಸ್ಥ ಮ್ಯಾಥ್ಯೂ ಸ್ಯಾಮುವೆಲ್‌ರನ್ನು ಕೂಡ ದಿಲ್ಲಿಯಲ್ಲಿ ಬಂಧಿಸಿ, ನಂತರ ಹೈಕೋರ್ಟ್ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಬಿಡುಗಡೆ ಮಾಡಬೇಕಾಗಿ ಬಂದಿದೆ. ವಿರೋಧಿ ದನಿಗಳನ್ನು ಹತ್ತಿಕ್ಕಿ ಒಂದು ಅಘೋಷಿತ ಪತ್ರಿಕಾ ಸೆನ್ಸಾರ್‌ಶಿಪ್‌ನತ್ತ ಸಾಗುತ್ತಿದ್ದೇವೆಯೇ ಎಂದು ಡಿಯುಜೆ ಪ್ರಶ್ನಿಸಿದೆ.

ದಿಲ್ಲಿ: ಚುನಾಯಿತ ಸರಕಾರದ ನಿರ್ಣಯಗಳನ್ನು ಅಂತಿಮವಾಗಿ ನಿರ್ಧರಿಸುವುದು ನೇಮಿತ ಉಪರಾಜ್ಯಪಾಲ!

ದಿಲ್ಲಿ ರಾಷ್ಟ್ರೀಯ ರಾಜಧಾನಿ ಪ್ರದೇಶದ ಚುನಾಯಿತ ಸರಕಾರದ ನಿರ್ಣಯಗಳನ್ನು ಅಂತಿಮವಾಗಿ ನಿರ್ಧರಿಸುವ ಅಧಿಕಾರ ಇರುವುದು ಕೇಂದ್ರ ಸರಕಾರ ನೇಮಿಸಿರುವ ಉಪರಾಜ್ಯಪಾಲರಿಗೆ ಎಂಬ ದಿಲ್ಲಿ ಹೈಕೋರ್ಟಿನ ತೀರ್ಪಿನ ಬಗ್ಗೆ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಗಂಭೀರ ಆತಂಕ ವ್ಯಕ್ತಪಡಿಸಿದೆ. ಉಪರಾಜ್ಯಪಾಲರು ಕೇಂದ್ರ ಸರಕಾರದ ಮರ್ಜಿಯಂತೆ ಕೆಲಸ ಮಾಡುತ್ತಾರೆ ಎಂಬುದು ಅನುಭವಸಿದ್ಧ ಸಂಗತಿ. ಅಂದರೆ ಒಂದು ಜನರಿಂದ ಚುನಾಯಿತವಾದ ಸರಕಾರದ ನಿರ್ಣಯಗಳ ಹಣೆಬರಹವನ್ನು ಕೇಂದ್ರ ಸರಕಾರದ ಮರ್ಜಿ ನಿರ್ಧರಿಸುತ್ತದೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾದ ವಿಷಯ. ಇದು ಮತದಾರರಿಗೆ ನೀಡಿದ ವಚನಗಳನ್ನು ಈಡೇರಿಸುವಲ್ಲಿ ವಿಫಲತೆಗಳನ್ನು ಸಮರ್ಥಿಸಿಕೊಳ್ಳಲು ಒಂದು ನೆಪವನ್ನು ಕೊಡುವುದಲ್ಲದೆ, ವಚನಗಳನ್ನು ಈಡೇರಿಸುವಲ್ಲಿ ಒಂದು ಗಂಭೀರ ಅಡ್ಡಿಯಾಗುತ್ತದೆ ಎಂದು ಸಿಪಿಐ(ಎಂ) ಹೇಳಿದೆ.

ಈ ಸಮಸ್ಯೆಯ ಮೂಲ ಇರುವುದು ದಿಲ್ಲಿಗೆ ಕೊಟ್ಟ ರಾಜ್ಯದ ಸ್ಥಾನಮಾನದ ಅತ್ಯಂತ ಕೃಶವಾದ ಸ್ವರೂಪ. ಸಾರ್ವಜನಿಕ ವ್ಯವಸ್ಥೆ, ಪೋಲೀಸ್ ಮತ್ತು ದಿಲ್ಲಿಯ ಭೂಮಿ ಕೂಡ ರಾಜ್ಯ ಸರಕಾರದ ವ್ಯಾಪ್ತಿಗೆ ಬರುವುದಿಲ್ಲ, ಬದಲಿಗೆ ಕೇಂದ್ರ ಸರಕಾರದ ಅಡಿಗೆ ಬರುತ್ತದೆ. ಇದಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಕಾರಣ. ಏಕೆಂದರೆ ಈ ಎರಡೂ ಪಕ್ಷಗಳು ರಾಜ್ಯದಲ್ಲೂ ಆಳ್ವಿಕೆ ನಡೆಸಿವೆ, ಕೇಂದ್ರದಲ್ಲೂ. ಅವೆರಡೂ ದಿಲ್ಲಿಗೆ ಪೂರ್ಣ ರಾಜ್ಯದ ಭರವಸೆ ನೀಡುತ್ತ ಬಂದಿವೆ, ಮತ್ತು ವಂಚಿಸುತ್ತಲೇ ಬಂದಿವೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ನೆನಪಿಸಿದೆ.

ದುರದೃಷ್ಟವಶಾತ್, ಎಎಪಿ ಸರಕಾರ ಇದನ್ನು ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ವಿಷಯಗಳಲ್ಲಿನ ತನ್ನ ವಿಫಲತೆಯನ್ನು ಮರೆಮಾಚಲು ಬಳಸಿಕೊಳ್ಳುತ್ತಿದೆ ಎಂದು ಸಿಪಿಐ(ಎಂ) ಖೇದ ವ್ಯಕ್ತಪಡಿಸಿದೆ.


ದಿಲ್ಲಿಗೆ ಪೂರ್ಣ ರಾಜ್ಯದ ಸ್ಥಾನಮಾನ ಕೊಡಬೇಕು, ಸಂಸತ್ತು, ಕೇಂದ್ರ ಸರಕಾರದ ಕಚೇರಿಗಳು ಮತ್ತು ರಾಜತಾಂತ್ರಿಕ ಪ್ರದೇಶಗಳನ್ನು ಬಿಟ್ಟು ನವದೆಹಲಿ ಮಹಾಪಾಲಿಕೆಯ ಉಳಿದೆಲ್ಲ ಪ್ರದೇಶಗಳು ದಿಲ್ಲಿ ರಾಜ್ಯ ಸರಕಾರದ ಅಡಿಗೆ ಬರಬೇಕು, ಇತರ ಎಲ್ಲ ರಾಜ್ಯ ಸರಕಾರಗಳಂತೆ ಪೂರ್ಣ ಅಧಿಕಾರಗಳನ್ನು ಅದು ಹೊಂದಿರಬೇಕು, ಆ ಮೂಲಕ ನಿರ್ಣಾಯಕ ಅಧಿಕಾರ ಚುನಾಯಿತ ರಾಜ್ಯ ಸರಕಾರದ ಬಳಿಯಿರಬೇಕೇ ಹೊರತು ಕೇಂದ್ರ ಸರಕಾರ ನೇಮಿಸಿರುವ ರಾಜ್ಯಪಾಲರ ಬಳಿಯಲ್ಲ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಹೇಳಿದೆ.

ಅಸ್ಸಾಂ ಭಯೋತ್ಪಾದಕ ದಾಳಿ: ಸಿಪಿಐ(ಎಂ) ಖಂಡನೆ

ಅಸ್ಸಾಂನ ಕೋಕ್ರಾಜಾರ್ ಪಟ್ಟಣದ ಬಳಿಯಿರುವ ಬಲಜನ್ ತಿನಿಯಲಿ ಬಝಾರ್‌ನಲ್ಲಿ ಆಗಸ್ಟ್ 5ರಂದು ಅಪರಿಚಿತ ಬಂದೂಕುಧಾರಿಗಳು ನಡೆಸಿದ ಗೋಲೀಬಾರಿಗೆ 14 ಅಮಾಯಕ ಜನರು ಬಲಿಯಾದರು, 20 ಮಂದಿಗೆ ತೀವ್ರ ಗಾಯಗಳಾದವು. ಇದೊಂದು ಭಯೋತ್ಪಾದಕ ಕೃತ್ಯ ಎಂದು ಹೇಳಲಾಗಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ದಾಳಿಯನ್ನು ಬಲವಾಗಿ ಖಂಡಿಸಿದೆ. ಕೋಕ್ರಾಜಾರ್ ಬೋಡೋ ಪ್ರಾದೇಶಿಕ ಕ್ಷೇತ್ರ ಜಿಲ್ಲೆಯ ಆಡಳಿತದ ಮುಖ್ಯ ಕಚೇರಿಯಿರುವ ಸ್ಥಳ.

ಈ ಪ್ರದೇಶ ಬಹಳ ಕಾಲದಿಂದ ಭಯೋತ್ಪಾದಕ ಚಟುವಟಿಕೆಗಳಿಂದ ಪೀಡಿತವಾದ ಪ್ರದೇಶ. ಆದರೂ ಪೋಲೀಸ್ ಆಡಳಿತ ಮತ್ತು ಬಿಜೆಪಿ ರಾಜ್ಯಸರಕಾರ ಜನರ ಜೀವ ಮತ್ತು ಆಸ್ತಿಗಳನ್ನು ರಕ್ಷಿಸಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನಗಳ ರಕ್ಷಣೆಗೆ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಬೇಕು, ತಪ್ಪಿತಸ್ಥರನ್ನು ಗುರುತಿಸಲು ಮತ್ತು ಶಿಕ್ಷಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕು ಎಂದು ಆಗ್ರಹಿಸಿದೆ.

ಇAiAvÉAzAgÉEzAA



ಈ (ಸ್ವಾತಂತ್ರ್ಯ) ದಿನಾಚರಣೆ
ನಾವು ಕಾಣದ ಸ್ವಾತಂತ್ರ್ಯಕ್ಕಾಗಿ
ಹೋರಾಡುತ್ತಿದ್ದಾಗ ಸೂಕ್ತವಾಗಿತ್ತು.
ಈಗ! ನಾವು ಅದನ್ನು ಸ್ಪರ್ಶಿಸಿದ್ದೇವೆ,
ಭ್ರಮನಿರಸನವಾದಂತಿದೆ.
ನಿಮಗೆ ಆಗದಿದ್ದರೂ,
ಕನಿಷ್ಟ ನನಗಂತೂ ಆಗಿದೆ.

–ಮಹಾತ್ಮ ಗಾಂಧಿ, ಜನವರಿ 26, 1948

ಮಹಾದಾಯಿ ಬಂಧಿತರನ್ನು ಬಿಡುಗಡೆ ಮಾಡಿ

ಸಂಪಾದಕೀಯ

ಮಹಾದಾಯಿ ವಿವಾದವನ್ನು ಬಗೆಹರಿಸುವತ್ತ ಕ್ಷುಲ್ಲಕ ಪಕ್ಷ ರಾಜಕೀಯ ಬಿಟ್ಟು, ಪ್ರಾಮಾಣಿಕ ಪ್ರಯತ್ನ ಮಾಡದಿರುವುದು ಕಾಂಗ್ರೆಸ್ ಸರಕಾರದ ಪ್ರಮುಖ ವೈಫಲ್ಯಗಳಲ್ಲಿ ಒಂದು. ಸಾಲದೆಂಬಂತೆ ಕಳೆದ ಒಂದು ವರ್ಷದಲ್ಲಿ ಕುಡಿಯುವ ನೀರಿಗೆ, ಕಳಸಾ–ಬಂಡೂರಿ ಯೋಜನೆ ಜಾರಿಗೆ ಹೋರಾಟ ಮಾಡಿದ ಚಳುವಳಿಗಾರರು, ರೈತರು ಮತ್ತು ಜನತೆ ಮೇಲೆ ಪೋಲಿಸ್ ದೌರ್ಜನ್ಯ ಈ ಸರಕಾರದ ಅತಿರೇಕಗಳಲ್ಲಿ ಒಂದು. ಮಹಾದಾಯಿ ಮಧ್ಯಂತರ ವರದಿ ನಂತರದ ಇತ್ತೀಚಿನ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿಯಂತೂ ಈ ಸರಕಾರದ ಹಿಂದಿನ ಎಲ್ಲಾ ದರ್ಪ–ದಬ್ಬಾಳಿಕೆ, ದೌರ್ಜನ್ಯ ಹಾಗೂ ಉಡಾಫೆತನಗಳ ರೆಕಾರ್ಡನ್ನು ಮುರಿದಿದೆ.

ಕಳೆದ ಒಂದು ವರ್ಷದಲ್ಲೂ, ಅದರಲ್ಲೂ ವಿಶೇಷವಾಗಿ ಇತ್ತೀಚಿನ ಪ್ರಕರಣದಲ್ಲಿ ಹೆಚ್ಚಾಗಿ ಪೋಲಿಸರ ದೌರ್ಜನ್ಯ ಹಿಂಸೆಯಲ್ಲಿ ತೊಡಗಿದವರ ಮೇಲೆ ಆಗಿರಲಿಲ್ಲ. ಯಾವುದೇ ಚಳುವಳಿಯ ಸಂದರ್ಭದಲ್ಲಿ ಅದರೊಳಗೆ ನುಸುಳಿ ಹಿಂಸೆಯಲ್ಲಿ ತೊಡಗುವ ಕಿಡಿಗೇಡಿಗಳು ಮತ್ತು ಚಳುವಳಿಗಾರರ ನಡುವೆ ವ್ಯತ್ಯಾಸ ಕಾಣುವ, ಅವರ ಮೇಲಿನ ಕಾರ್ಯಾಚರಣೆ/ನಿರ್ವಹಣೆಗಳಲ್ಲಿ ವ್ಯತ್ಯಾಸ ತೋರಿಸುವ ಕ್ಷಮತೆ ವಿವೇಚನೆ ಮತ್ತು ಜವಾಬ್ದಾರಿ ಪೋಲಿಸರಿಗಿರಬೇಕು. ಇದು ಇರಲಿಲ್ಲ. ಮಾತ್ರವಲ್ಲ, ಪೋಲಿಸ್ ದೌರ್ಜನ್ಯ ಪ್ರಮುಖವಾಗಿ ಚಳುವಳಿಯಲ್ಲಿ ಭಾಗವಹಿಸಿದ ಮತ್ತು ಸಕ್ರಿಯವಾಗಿ ಭಾಗವಹಿಸದ ಸಾಮಾನ್ಯ ಜನತೆಯ ಮೇಲೆ ಇತ್ತು. ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಮೂರು (ಅರೆಕುರಹಟ್ಟಿ, ಆಳಗೋಡಿ, ಯಮನೂರು) ಹಳ್ಳಿಗಳನ್ನು ಭೇಟಿ ಮಾಡಿದ ನಿಯೋಗದ ವರದಿಯಿಂದ ಇದು ಸ್ಪಷ್ಟ. ಸ್ಕೂಲಿನಿಂದ ಹಿಂದೆ ಬರುತ್ತಿದ್ದ ವಿದ್ಯಾರ್ಥಿ, ಯು.ಪಿ.ಎಸ್.ಸಿ. ಪರೀಕ್ಷೆಗೆ ಓದಿಕೊಳ್ಳುತ್ತಿದ್ದ ಯುವಕ, ಮನೆಯಲ್ಲೇ ಇದ್ದ ಗರ್ಭಿಣಿ ಮಹಿಳೆ ಮುದುಕ–ಮುದುಕಿಯರ ಮೇಲೆ ಪೋಲಿಸರ ದೌರ್ಜನ್ಯ ನಡೆದಿದೆ.

ಇದು ಕೆಳ ಮಟ್ಟದ ಪೋಲಿಸ್ ಪೇದೆ ಅಥವಾ ಅಧಿಕಾರಿಗಳ ಬೇಕಾಬಿಟ್ಟಿ ಕಾಯಾಚರಣೆಯಾಗಿರಲಿಲ್ಲ. ಮೇಲಿನವರ ಆಣತಿಯ ಮೇಲೆ ಇದು ನಡೆದಿದೆ ಎಂಬ ತೀವ್ರ ಗುಮಾನಿ ಜನತೆಯಲ್ಲಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ವಿವಿಧ ಮೊಕದ್ದಮೆಗಳನ್ನು ವಾಪಸು ಪಡೆದು ಬಂಧಿತರ ಬಿಡುಗಡೆ ಮಾಡಲು ತೀವ್ರ ಒತ್ತಡ ಇದ್ದರೂ ಸರಕಾರ ಈ ಬಗ್ಗೆ ಮೀನ ಮೇಷ ಎಣಿಸುತ್ತಿರುವುದು ಗುಮಾನಿಯನ್ನು ಗಟ್ಟಿಗೊಳಿಸುತ್ತಿದೆ. ಒಟ್ಟು 24 ಪ್ರಕರಣಗಳಲ್ಲಿ 187 ಮಂದಿಯನ್ನು ಬಂಧಿಸಿ ಜೈಲಿಗೆ ಕಳಿಸಲಾಗಿದೆ. ಒತ್ತಡ ತೀವ್ರವಾದಾಗ ಸರಕಾರ ಮೀಸಲು ಪಡೆ–ಯ ಮಹಾನಿರ್ದೇಶಕ ಕಮಲ್ ಪಂತ ನಾಯಕತ್ವದಲ್ಲಿ ಪೋಲಿಸ್ ತಂಡ ರಚಿಸಿದೆ. ಈ ತಂಡ ಇತ್ತೀಚಿನ ಪ್ರಕರಣ ಸೇರಿದಂತೆ ಕಳೆದ ಒಂದು ವರ್ಷದ ಹಲವು ಘಟನೆಗಳಲ್ಲಿ ಬಗ್ಗೆ ದೌರ್ಜನ್ಯಕ್ಕೆ ಒಳಗಾದ ಜನರನ್ನೂ, ಈ ಪ್ರಕರಣಗಳಲ್ಲಿ ಭಾಗಿಯಾದ ಪೋಲಿಸ್ ಸಿಬ್ಬಂದಿಯ ಜತೆ ಮಾತನಾಡಿ ಮಾಹಿತಿ ಸಂಗ್ರಹ ಮಾಡುತ್ತಿದೆ. ಇದು ಮುಗಿದು ಸಮಗ್ರ ವರದಿ ಸಲ್ಲಿಸಲು ಒಂದು ತಿಂಗಳು ಬೇಕು ಎಂದು ಪಂತ್ ಹೇಳಿದ್ದಾರೆ. ಅಂದರೆ ಇನ್ನೂ ಕನಿಷ್ಟ ಒಂದು ತಿಂಗಳವರೆಗೆ ಮಹಾದಾಯಿ ಬಂಧಿತರು ಜೈಲಿನಲ್ಲೇ ಕೊಳೆಯಬೇಕಾಗುತ್ತದೆ.

ಚಳುವಳಿ, ಬಂದ್, ಪ್ರತಿಭಟನೆಗಳಲ್ಲಿ ಸಾರ್ವಜನಿಕ ಆಸ್ತಿಪಾಸ್ತಿ ಹಾನಿ, ಸರಕಾರಿ ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿ, ಸಣ್ಣಪುಟ್ಟ ಹಿಂಸಾಕೃತ್ಯಗಳು ಅಪರೂಪವೇನಲ್ಲ. ಇಂತಹ ಪ್ರಕರಣಗಳಲ್ಲಿ ಜನತೆಯ ಮೇಲೆ ಹೂಡಲಾದ (ಕೊಲೆ, ಕೊಲೆ ಯತ್ನದ ಪ್ರಕರಣಗಳನ್ನು ಬಿಟ್ಟು ಉಳಿದೆಲ್ಲಾ) ಮೊಕದ್ದಮೆಗಳನ್ನು ವಾಪಸು ಪಡೆಯಲು ಸರಕಾರಕ್ಕೆ ಪೂರ್ಣ ಅಧಿಕಾರ ಇದೆ. ಇದಕ್ಕೆ ಸಂಪುಟದ ಒಪ್ಪಿಗೆ ಬೇಕು. ಅದರ ನಂತರವೇ ಇತರ ಕಾನೂನು ಪ್ರಕ್ರಿಯೆ ನಡಸಲು ಸಾಧ್ಯ. ಈ ವರೆಗೆ ಇದನ್ನು ಮಾಡುವ ರಾಜಕೀಯ ಇಚ್ಛೆ, ಮುತ್ಸದಿತನವನ್ನು ಕಾಂಗ್ರೆಸ್ ಸರಕಾರ ತೋರಿಸಿಲ್ಲ. ಸಚಿವ ಸಂಪುಟ ಇಂತಹ ನಿರ್ಣಯ ಕೈಗೊಂಡು ಮಹಾದಾಯಿ ಬಂಧಿತರನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಆರಂಭಿಸಬೇಕು. ಹಾಗೆ ಮಾಡುವಂತೆ ಸರಕಾರದ ಮೇಲೆ ಒತ್ತಡ ತರಲು ಚಳುವಳಿಯ ಒತ್ತಡದ ಅಗತ್ಯವಿದೆ.

ಅನರ್ಹರು ಸಿರಿವಂತರಿಗೆ ಬಗರ್ ಹುಕುಂ ಜಮೀನು: ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು

1997ರಿಂದ 2004ರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ತಾಲೂಕಿನಲ್ಲಿ 79 (ನಿಯಮಗಳ ಪ್ರಕಾರ) ಅನರ್ಹರಿಗೆ ಮತ್ತು ಪ್ರಭಾವಿ ಸಿರಿವಂತರಿಗೆ 143 ಎಕರೆ ಬಗರ್ ಹುಕುಂ ಜಮೀನು ಮಂಜೂರಾಗಿದೆ. ಈ ಜಮೀನಿನ ಮಾರುಕಟ್ಟೆ ಮೌಲ್ಯ 1500 ಕೋಟಿ ರೂ. ಎಂದು ಈ ಬಗ್ಗೆ ತನಿಖೆ ನಡೆಸಿದ ದಕ್ಷಿಣ ವಿಭಾಗಾಧಿಕಾರಿ ಎಲ್.ಸಿ. ನಾಗರಾಜು ಅವರು ತನಿಖಾ ವರದಿ ಹೇಳಿದೆ. ಅರ್ಜಿದಾರ ಗ್ರಾಮದ ನಿವಾಸಿಯಾಗಿರಬೇಕು. ಬಡ ಕೃಷಿಕನಾಗಿರಬೇಕು. ಕುಟುಂಬದ ಒಬ್ಬನಿಗೆ ಮಾತ್ರ, ಕುಟುಂಬವೊಂದಕ್ಕೆ ಗರಿಷ್ಟ 4 ಎಕ್ರೆ 38 ಗುಂಟೆ ಭೂಮಿ ಮಾತ್ರ ಕೊಡಬಹುದು. ಜಮೀನು ನಗರ ಕೇಂದ್ರದಿಂದ 18 ಕಿ.ಮಿ. ದೂರದಲ್ಲಿರಬೇಕು ಮುಂತಾದ ಎಲ್ಲಾ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಈ ಅಪಾತ್ರ ದಾನ ಪಡೆದವರಲ್ಲಿ ಬಿ.ಬಿ.ಎಂ.ಪಿ. ಜಿಲ್ಲಾ ಪಂಚಾಯತ್ ಸದಸ್ಯರು, ಹಲವು ಪ್ರಭಾವಿ ಶ್ರೀಮಂತರು ಸೇರಿದ್ದಾರೆ. ಇದನ್ನು ಮಂಜೂರು ಮಾಡಿದ ಬಗರ್ ಹುಕುಂ ಸಮಿತಿಯ ಅಧ್ಯಕ್ಷರಾಗಿದ್ದವರು ಬಿಜೆಪಿಯ ಮಾಜಿ ಸಚಿವ ಆರ್. ಅಶೋಕ್ ಎಂಬುದು ಗಮನಾರ್ಹ.

ಎಲ್.ಸಿ. ನಾಗರಾಜು ಅವರು ಅಕ್ರಮವಾಗಿ ಮಂಜೂರಾದ ಭೂಮಿಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲು ಆಜ್ಞೆ ಮಾಡಿದಾಗ ಅವರನ್ನು ವರ್ಗಾವಣೆ ಮಾಡಲಾಗಿದೆ ಎಂದು ವರದಿಯಾಗಿದೆ. ಈ ವರದಿ ಆತಂಕಕಾರಿಯಾಗಿದೆ. ಆದರೆ ಸರಕಾರ–ಆಡಳಿತದ, ಇಡಿ ರಾಜಕಾರಣದ ಮೇಲೆ ಭೂಮಾಫಿಯಾದ ಹಿಡಿತ ಸಾರ್ವಜನಿಕ ಗುಟ್ಟು ಆಗಿರುವ ಈ ದಿನಗಳಲ್ಲಿ ಇದರಲ್ಲಿ ಆಶ್ಚರ್ಯವೇನಿಲ್ಲ. ಸರಕಾರಿ ಅಧಿಕಾರಿಯೊಬ್ಬರು ಪುರಾವೆ ಸಹಿತ ಇದನ್ನು ಬೆಳಕಿಗೆ ತಂದಿದ್ದಾರೆ ಎಂಬುದಷ್ಟೇ ಆಶ್ಚರ್ಯದ ಸಂಗತಿ. ಈ ಹಗರಣದಲ್ಲಿ ಅಕ್ರಮ ಮಂಜೂರಾತಿಯಲ್ಲಿ ಭಾಗವಹಿಸಿದ ಮತ್ತು ಅದರ ಪ್ರಯೋಜನ ಪಡೆದ ಎಲ್ಲರಿಗೂ ಶಿಕ್ಷೆ ಆಗಬೇಕು. ಮಾತ್ರವಲ್ಲ, ಅಕ್ರಮವಾಗಿ ಕೊಡಲಾದ ಭೂಮಿಯನನು ವಾಪಸು ಪಡೆಯಬೇಕು. ಈ ಹಗರಣ ಬಯಲಿಗೆ ಬಂದ ನಂತರ ಹಲವು ಜಿಲ್ಲೆಗಳಿಂದ ಇಂತಹ ವರದಿಗಳು ಬರುತ್ತಿವೆ. ಇವೆಲ್ಲವುಗಳ ಬಗ್ಗೆ ಸಮಗ್ರ ತನಿಖೆ ಆಗಬೇಕು.

ಇದರಷ್ಟೇ ಪ್ರಮುಖ ವಿಷಯ ಎಂದರೆ ದೀರ್ಘ ಕಾಲದಿಂದ ನೆನಗುದಿಗೆ ಬಿದ್ದಿರುವ ಅರ್ಹ ಬಡ ಕೃಷಿಕರಿಗೆ ಬಗರ್ ಹುಕುಂ ಭೂಮಿ ಮಂಜೂರು ಮಾಡುವುದು. ಅದೇ ವರದಿ ಈವರೆಗೆ ಮಂಜೂರು ಮಾಡಲಾದ 800 ಎಕರೆ ಭೂಮಿಯಲ್ಲಿ ಬಡವರಿಗೆ ಸಿಕ್ಕಿದ್ದು ಕೇವಲ 300 ಎಕರೆ ಮಾತ್ರ ಎಂದು ಹೇಳಿದ್ದು ಗಮನಾರ್ಹ. ಬಡ ಕೃಷಿಕರ ಬಗರ್ ಹುಕುಂ ಭೂಮಿ ಸಕ್ರಮಗೊಳಿಸುವ ಮಂಜೂರು ಮಾಡುವ ಹಕ್ಕೊತ್ತಾಯಕ್ಕೆ ಸಾವಿರ ಸಬೂಬು ಹೇಳುವ, ಅವರನ್ನು ಭೂಗಳ್ಳರ ಸಾಲಿಗೆ ಸೇರಿಸುವ ಸರಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಅದನ್ನು ಎಚ್ಚರಿಸಲು ತೀವ್ರ ಚಳುವಳಿ ಹೂಡಬೇಕು.

ರಾಯಣ್ಣ ಬ್ರಿಗೇಡ್: ಬಿಜೆಪಿ ಡಬ್ಬಲ್ ಗೇಮ್

ಎಸ್.ವೈ. ಗುರುಶಾಂತ

"ಎತ್ತು ಏರಿಗೆ, ಕೋಣ ನೀರಿಗೆ" ಎನ್ನುವಂತಹ ಸ್ಥಿತಿ ಬಿಜೆಪಿ ಪಕ್ಷದಲ್ಲಿದೆಯೇ? ಹೀಗೆ ಎಳೆದಾಡುವವರೇ 'ಅದೆಲ್ಲಾ ಸಹಜ! ಏನಿದ್ದರೂ ತಮ್ಮದು ಗಂಡ–ಹೆಂಡಿರ ಜಗಳದಂತೆ' ಎಂದು ಹೇಳಿ ಮುಷ್ಠಿಯುದ್ಧದ ಅಬ್ಬರವನ್ನು ಗಾಳಿಯಲ್ಲಿ ತೇಲಿಸಿ ಬಿಡುತ್ತಾರೆ. ಹೀಗೆ ಎರಡು ನಾಲಿಗೆಗಳನ್ನು ಇಷ್ಟು ಸುಲಲಿತವಾಗಿ ಆಡಿಸಬಲ್ಲ ನಿಷ್ಣತರು ಸಂಘಪರಿವಾರವನ್ನು ಬಿಟ್ಟರೆ ಬೇರೆಲ್ಲಿ ಕಾಣಲು ಸಾಧ್ಯ?

ಬಿಜೆಪಿಯಲ್ಲಿನ ಈ ವಾರದ ವಿದ್ಯಾಮಾನಗಳನ್ನು ಗಮನಿಸಿದರೆ, ಹೀಗನ್ನಿಸುವುದು ಸಹಜ. ಕರ್ನಾಟಕ ಬಿಜೆಪಿಯ ಅಧ್ಯಕ್ಷ ಬಿ.ಎಸ್.ಯಡಿಯೂರಪ್ಪ 'ತನ್ನ ಸವಾಧಿಕಾರಿತನವನ್ನು ಬಿಟ್ಟಿಲ್ಲ. ಉನ್ನತಾಧಿಕಾರದ ಕೋರ್ ಕಮಿಟಿಯನ್ನು ಸೇರಿಸಿಲ್ಲ. ಬಿಸಿ ಮುಟ್ಟಿಸಲೆಂದೇ ರಾಜ್ಯ ಪದಾಧಿಕಾರಿಗಳ ಸಭೆಗೆ ಗೈರು ಹಾಜರಾಗುತ್ತಿದ್ದೇವೆ' ಎಂದು ಬಹಿರಂಗವಾಗಿ ಹೇಳುವ ನಾಯಕರು, ಉಸಿರುಗಟ್ಟಿಸುವ ವಾತಾವರಣದಿಂದ ಬೇಸತ್ತು 'ಸಂಗೊಳ್ಳಿ ರಾಯಣ್ಣ ಬ್ರಿಗೇಡ್' ಬಲಪಡಿಸುವುದಾಗಿ ಘೋಷಿಸುವ ಕೆ.ಎಸ್.ಈಶ್ವರಪ್ಪನಂತಹ ನಾಯಕರು "ಏನಿದ್ದರೂ ಯಡಿಯೂರಪ್ಪನವರೇ ಮುಖ್ಯಮಂತ್ರಿಗಳು' ಎನ್ನುವುದು ಸಾರ್ವಜನಿಕವಾಗಿ ಗೊಂದಲಗಳನ್ನು ಹುಟ್ಟಿಸುತ್ತದೆ. ಮಾತ್ರವಲ್ಲ, ಮಾತು ಮತ್ತು ಕೃತಿಗಳ ಬಗ್ಗೆ ನಡುವಿನ ವಂಚಕತನದ ರಾಜಕೀಯ ಸ್ಕೀಮುಗಳ ಬಗ್ಗೆ ಸೂಚನೆಗಳನ್ನು ನೀಡುತ್ತದೆ.

ನಿಜ! ಮುಂದಿನ ಚುನಾವಣೆಯಲ್ಲಿ ತನಗೇ ಅಧಿಕಾರ ಎಂದು ಪ್ರತಿಪಾದಿಸುತ್ತಿರುವ ರಾಜ್ಯ ಬಿಜೆಪಿ ಪಕ್ಷದಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವುದು ಜಗಜ್ಜಾಹೀರು. ಪಕ್ಷದ ಅಧ್ಯಕ್ಷನ ಸ್ಥಾನಕ್ಕೆ ಪೈಪೋಟಿಯಾಯಿತು. ಮುಂದಿನ ಮುಖ್ಯಮಂತ್ರಿಯ ಪಟ್ಟಕ್ಕೀಗ ಸ್ಪರ್ಧೆ! ಹೀಗಾಗಿಯೇ ಪಕ್ಷದೊಳಗೆ, ಬಲಾಬಲಾದ ಪ್ರದರ್ಶನದ ಸಿದ್ಧತೆ, ಹೊರಗೂ ಅದರ ಪ್ರದರ್ಶನ.

ಮೊನ್ನೆ ಸ್ವಾತಂತ್ರೋತ್ಸವದ ಆಚರಣೆಯ ಸಿದ್ಧತೆಗೆಂದೇ ಯಡಿಯೂರಪ್ಪನವರು ಕರೆದಿದ್ದ ಸಭೆಗೆ ಈಶ್ವರಪ್ಪ, ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಷಿ, ಮಲ್ಕಾಪುರೆಯಂತಹ ನಾಯಕರು ಹೊರಗುಳಿದದ್ದು, ನಂತರ ಈಶ್ವರಪ್ಪ 'ಗುಡುಗಿದ್ದು' ಅದೇ ಓಘದಲ್ಲಿ 'ಅಹಿಂದ' ಶಕ್ತಿಗಳನ್ನು ಒಗ್ಗೂಡಿಸಲು 'ಆಪ್ತರೊಂದಿಗೆ' ಈಶ್ವರಪ್ಪ ಸಮಾಲೋಚಿಸಿ 'ರಾಯಣ್ಣ ಬ್ರಿಗೇಡ್'ನ್ನು ಕಟ್ಟಿ ಬೆಳೆಸುವ ಮೂಲಕ ಅಹಿಂದ ಚಳುವಳಿಯ ನಾಯಕನಾಗಿ ಬಲ ತೋರಿಸುವ ಪ್ರತಿಜ್ಞೆಯನ್ನು ಮಾಡಿದ್ದು ಒಂದು ದಿಢೀರ್ ಬೆಳವಣಿಗೆಯಂತೆ ಕಂಡಿತು. ಕಳೆದೆರಡು ತಿಂಗಳಲ್ಲಿ ಯಡಿಯೂರಪ್ಪನವರನ್ನು ಹಣಿದು, ಮಣಿಸಲು ಈಶ್ವರಪ್ಪ, ಅನಂತಕುಮಾರ್ ತಂಡಗಳು ಬಂಡಾಯ ಹೂಡಿ – ಒಂದು ರಾಜೀ ಸೂತ್ರ–ಕ್ಕೆ ಬಂದಿದ್ದವು. ಅದರಂತೆ ಅಧ್ಯಕ್ಷರು ಯಾವುದೇ ಪ್ರಮುಖ ತೀರ್ಮಾನ ಕೈಗೊಳ್ಳುವ ಮೊದಲು 'ಕೋರ್ ಕಮಿಟಿ'ಯಲ್ಲಿ ಚರ್ಚಿಸಲೇಬೇಕು ಎಂಬ ಶರತ್ತಿನೊಂದಿಗೆ ಸಮಿತಿಯೂ ರಚನೆಯಾಗಿತ್ತು. ಆ ಬಳಿಕ ಎಲ್ಲವೂ ಸುಸೂತ್ರವಾಗಲಿವೆಯೆಂದೇ ಹೇಳಲಾಗಿತ್ತು. ಹೀಗಿದ್ದರೂ ಈಶ್ವರಪ್ಪ ಮುಂತಾದವರು ಈ ಕಹಳೆ ಊದಿದ್ದೇಕೇ? ಬೇರೊಂದು 'ಶಕ್ತಿ ಕೇಂದ್ರವಾಗುವುದರತ್ತ ಕ್ರಮವಹಿಸಿದ್ದೇಕೆ? ಇಂತಹ ಭಿನ್ನಮತ ಸ್ಫೋಟಗಳು, ಬಹಿರಂಗ ವಾಗ್ಯುದ್ಧಗಳು, ಬಿಜೆಪಿಯ ಪ್ರಭಾವ, ಪ್ರತಿಷ್ಠೆಯನ್ನೂ ಹಾಳು ಮಾಡದೇ?

ಇವನ್ನೆಲ್ಲಾ ಗಮನಿಸಿದರೆ ಬಿಜೆಪಿ ಪಕ್ಷದಲ್ಲಿ ಒಡಕಿರುವುದನ್ನು ಪುನಃ ದೃಢಪಡಿಸುತ್ತದೆ. ಈ ವಿದ್ಯಾಮಾನಗಳು ಇದು ಹೊಸತೇನಲ್ಲ. ಆದ–ರೆ ಈಗಿನ ಪ್ರಹಸನದಲ್ಲಿ ಹೊಸ ತಿರುವು ಕೆ.ಎಸ್. ಈಶ್ವರಪ್ಪನವರೇ ಚಾಲನೆ ನೀಡಿದ 'ರಾಯಣ್ಣ ಬ್ರಿಗೇಡ್'ನ ಸ್ಥಾಪನೆ ಮತ್ತು ಅದನ್ನು ಬಲಪಡಿಸಲು ಕೈಗೊಳ್ಳಲಾಗುತ್ತಿರುವ ಸಂಘಟನಾತ್ಮಕ ಹೆಜ್ಜೆಗಳಲ್ಲಿ, ಹಿಂದೆ ಏನಿದ್ದರೂ ವಾದ–ವಿವಾದಗಳಲ್ಲಿ ವ್ಯಕ್ತವಾಗುತ್ತಿದ್ದ ಈ ಗುಂಪು ಬಡಿದಾಟ ಈಗ ಸಂಘಟನಾ ಸ್ವರೂಪ ಪಡೆಯುತ್ತಿರುವುದರ ಅರ್ಥವೇನು? ಈ ಪ್ರಕ್ರಿಯೆಯಲ್ಲಿ ಈಶ್ವರಪ್ಪ ಬಿಜೆಪಿ–ಸಂಘ ಪರಿವಾರ ಬಿಟ್ಟ ಸ್ವತಂತ್ರರಾಗುವುದೇ?"

ಈ ಪ್ರಶ್ನೆಗೆ ಈಶ್ವರಪ್ಪನವೇ ಉತ್ತರಿಸಿ ಜನರ ಊಹೆಗಳನ್ನು ಉಡಾಯಿಸಿದ್ದಾರೆ. 'ತಮ್ಮದು ಗಂಡ ಹೆಂಡಿರ ಜಗಳವಿದ್ದಂತೆ, ಪಕ್ಷದ ಹಿತಕ್ಕಾಗಿ ಎತ್ತುವ ದನಿಯನ್ನೂ ಭಿನ್ನಮತವೆಂದು ಕರೆಯಬಾರದು' ಎಂದು !

ಆದ್ದರಿಂದ ಈಶ್ವರಪ್ಪ ನಮಗೆ 'ಉಸಿರುಗಟ್ಟಿದರೂ' ಬಿಜೆಪಿಯನ್ನು ಬಿಡುವ ಪ್ರಶ್ನೆ ಇಲ್ಲ. ಬಿಜೆಪಿಯಲ್ಲಿದ್ದೇ ತಮ್ಮದೇ ಪ್ರತ್ಯೇಕ ಶಕ್ತಿ–ಅಸ್ತಿತ್ವವನ್ನೂ ಹೊಂದುವ ಇರಾದೆ ಇದೆ. ಆದರೆ ಶಿಸ್ತುಬದ್ಧ ಪಕ್ಷ, ಸಾಮೂಹಿಕ ನಾಯಕತ್ವ ಎಂದೆಲ್ಲಾ ಹೇಳುವ ಬಿಜೆಪಿಯಲ್ಲಿ ಹೇಳುವ ಬಿಜೆಪಿಯಲ್ಲಿ ಇಂತಹದ್ದಕ್ಕೆ ಅವಕಾಶ

ಪುಟ 4 ಕ್ಕೆ

ಯಮನೂರು ಚಲೋ :

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿನ ಕುಡಿಯುವ ನೀರಿನ ಮಹಾದಾಯಿ ಯೋಜನೆಗೆ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಬೇಕೆಂದು, ಯಮನೂರಿನಲ್ಲಿ ನಡೆದ ಗಲಭೆಯನ್ನು ಬಂಧಿಸಿರುವ ರೈತರನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ವತಿಯಿಂದ ಆಗಸ್ಟ್ 14–15ರಂದು ಹುಬ್ಬಳಿಯಿಂದ ಪಾದಯಾತ್ರೆ ಮೂಲಕ ಯಮನೂರು ಚಲೋ ಚಳುವಳಿ ಹಮ್ಮಿಕೊಳ್ಳಲಾಗಿದೆ.

ದಲಿತರ ಹೋರಾಟ ಬೆಂಬಲಿಸಿ ಧರಣಿ

ಗುಜರಾತ್ ರಾಜ್ಯದ ಊನಾ ಪ್ರದೇಶ ಹಾಗೂ ದೇಶದ ವಿವಿದೆಡೆ ನಿರಂತರವಾಗಿ ದಲಿತರ ಮೇಲಿನ ದೌರ್ಜನ್ಯಗಳು ನಡೆಯುತ್ತಿದ್ದು ಇದನ್ನು ಖಂಡಿಸಿ ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ವತಿಯಿಂದ ಬೆಂಗಳೂರಿನ ಟೌನ್‌ಹಾಲ್ ಮುಂಭಾಗ ಆಗಸ್ಟ್ 14ರಂದು ಸಂಜೆ 6 ರಿಂದ ರಾತ್ರಿ 12ರವರೆಗೆ ಧರಣಿ ಹಮ್ಮಿಕೊಳ್ಳಲಾಗಿದೆ. ದಲಿತ ನಾಯಕರು, ಪ್ರಗತಿಪರ ಸಾಹಿತಿಗಳು, ಸಂಘಟನೆಗಳು ಭಾಗವಹಿಸಲಿವೆ.

ಕಲಬುರಗಿ: ರೇಗಾ ಬಾಕಿ ಕೂಲಿ ಕೊಡಲು ಆಗ್ರಹ

ಉದ್ಯೋಗ ಖಾತ್ರಿ ಕೂಲಿಕಾರರಿಗೆ ಎರಡು ತಿಂಗಳಿನಿಂದ ಕೂಲಿ ಪಾವತಿಸದೆ ಇರುವ ಕೇಂದ್ರ ಸರ್ಕಾರದ ವಿರುದ್ಧ ಕಲಬುರಗಿ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯೂಯು) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಛೇರಿ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಕೆಪಿಆರ್‌ಎಸ್ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಮುಖಂಡರಾದ ಶರಣಬಸವ ಮಮಶೆಟ್ಟಿ ಮುಂತಾದ ಮುಖಂಡರು ಭಾಗವಹಿಸಿದ್ದರು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸ ಮತ್ತು ಬಾಕಿ ಕೂಲಿ ಹಣ ನೀಡಲು, ಶೌಚಾಲಯದ ಬಿಲ್ ಪಾವತಿಸಲು ಮತ್ತು ಮರಳು ನೀತಿ ರೂಪಿಸಿ ಜಾರಿಗೊಳಿಸಲು ಒತ್ತಾಯಿಸಲಾಯಿತು. ಬೆಳೆ ವಿಮಾ ಹಣ ಸರಿಯಾಗಿ ಬರುತ್ತಿಲ್ಲ. ಜಿಲ್ಲೆಯ ಎಲ್ಲಾ ರೈತರಿಗೆ ಹಣ ಬಿಡುಗಡೆ ಮಾಡಬೇಕು, ರೈತರಿಗೆ ಮೋಸ ಮಾಡುವವರ ವಿರುದ್ಧ ಕ್ರಮಕ್ಕಾಗಿ ಆಗ್ರಹಿಸಲಾಯಿತು.

ಈಗ ನಿಗದಿಪಡಿಸಿದ ಕೂಲಿಯು ದಿನಕ್ಕೆ 224 ರೂ. ಹಣದಲ್ಲಿ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ದಿನಕ್ಕೆ ರೂ.500 ಕ್ಕೆ ಕೂಲಿ ಹೆಚ್ಚಳ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

2006ರಲ್ಲಿ ಉದ್ಯೋಗ ಖಾತ್ರಿ ಕಾನೂನು ಜಾರಿ ಮಾಡಿ 10 ವರ್ಷಗಳು ಕಳೆದಿದೆ. ಹಿಂದೆ ಕೂಡ ಕಾಯ್ದೆಯನ್ನು ಉಲ್ಲಂಘಿಸಿ 2 ತಿಂಗಳಷ್ಟು ಕೂಲಿ ಹಣ ಕೊಡದೆ ಉಳಿಸಿ ಕೊಳ್ಳಲಾಗಿದೆ. ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡಿದ 15 ದಿನಗಳ ಒಳಗೇ ಕೂಲಿ ಕೊಡಬೇಕೆಂಬ ಕಾನೂನನ್ನು ಕೇಂದ್ರ ಸರ್ಕಾರವೇ ಉಲ್ಲಂಘನೆ ಮಾಡುತ್ತಿದೆ. ಜಿಲ್ಲೆಯಲ್ಲಿ ಸುಮಾರು ಲಕ್ಷಾಂತರ ಜನ ಕೂಲಿಕಾರರ ಕೆಲಸ ಮಾಡಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ 10 ಕೋಟಿ ರೂಪಾಯಿ ಬಾಕಿ ಹಣ ಬರಬೇಕಿದೆ.



ರಾಜ್ಯದಲ್ಲಿ ಸುಮಾರು 500 ಕೋಟಿಯಷ್ಟು ಬಾಕಿ ಉಳಿದಿದ್ದು ರೈತ ವಿರೋಧಿ, ಕಾರ್ಮಿಕ ವಿರೋಧಿ ಕೇಂದ್ರ ಸರ್ಕಾರದ ನೀತಿ ಖಂಡಿಸಿ ಇದೇ ಸಂದರ್ಭದಲ್ಲಿ ಬಸವರಾಜ ಪಾಟೀಲ ಸೇಡಂರವರ ಕಛೇರಿ ಮುಂದೆ ಧರಣಿ ನಡೆಸಲಾಯಿತು. ಅಧಿಕಾರಿಗಳ ಮೂಲಕ ಪ್ರಧಾನಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಕಛೇರಿ ಮುಂಭಾಗದ ರಸ್ತೆಯಲ್ಲಿ ಕುಳಿತ ರೈತ–ಕೂಲಿಕಾರರು ಉದ್ಯೋಗ ಖಾತ್ರಿ ಕೆಲಸ ಮಾಡಿದ ಬಾಕಿ ವೇತನ ಕೊಡಲು ಒತ್ತಾಯಿಸಿದರು.

ಬೆಂಗಳೂರು ವಿ.ವಿ. ಕುಲಸಚಿವರ ಅಮಾನತಿಗೆ ಆಗ್ರಹ

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ನೇತೃತ್ವದಲ್ಲಿ ಆಗಸ್ಟ್ 05ರಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿದ್ದ ಅಕಾಡೆಮಿಕ್ ಕೌನ್ಸಿಲ್ ಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಜ್ಞಾನಭಾರತಿ ಕ್ಯಾಂಪಸ್‌ನ ಆಡಳಿತ ವಿಭಾಗದ ಮುಂದೆ ಪ್ರತಿಭಟನೆ ನಡೆಸಿದ ನೂರಾರು ಕಾರ್ಯಕರ್ತರು ವಿ.ವಿಯು ಯು.ಜಿ.ಸಿಯ ನಿಯಮಾವಳಿಗಳನ್ನು ಪಾಲಿಸದಿರುವುದರ ಕುರಿತು ವ್ಯಾಪಕ ಆಕ್ರೋಶವನ್ನು ವ್ಯಕ್ತಪಡಿಸಿದರು. ಅಲ್ಲದೇ ಅಂಕಪಟ್ಟಿ ಲೋಪದೋಷ ಆಗಲು ನೇರ ಹೊಣೆಗಾರರಾಗಿರುವ ಹಿಂದಿನ ಮೌಲ್ಯಮಾಪನ ಕುಲಸಚಿವರಾದ ಶ್ರೀ ನಿಂಗೇಗೌಡರ ಮೇಲೆ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಸಿದರು.

ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯಾಧ್ಯಕ್ಷರಾದ ವಿ.ಅಂಬರೀಷ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ಉಪಾಧ್ಯಕ್ಷರಾದ ಚಿಕ್ಕರಾಜು.ಎಸ್, ಬಸವರಾಜ ಪೂಜಾರ, ಜಿಲ್ಲಾಧ್ಯಕ್ಷರಾದ ವೆಂಕಟೇಶ್.ಕೆ, ಕೆ.ಎಸ್. ಎಸ್‌ಎಫ್.ನ ಕುಮಾರಸ್ವಾಮಿ, ಡಿ.ಎಸ್.ಎಫ್‌ನ ರಾಜಗೋಪಾಲ್, ಮುಖಂಡರಾದ ಭೈರರಾಜು, ದಿಲೀಪ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಮಂಡ್ಯ ಕೃಷಿ ಕೂಲಿಕಾರರ ಪ್ರತಿಭಟನೆ

ಉದ್ಯೋಗ ಖಾತ್ರಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸ ಮತ್ತು ಬಾಕಿ ಕೂಲಿ ಹಣ ನೀಡಬೇಕೆಂದು, ಶೌಚಾಲಯದ ಬಿಲ್ ಪಾವತಿಸಲು ಮತ್ತು ಮರಳು ನೀತಿ ರೂಪಿಸಿ ಜಾರಿಗೊಳಿಸಬೇಕೆಂದು ಮಂಡ್ಯ ಜಿಲ್ಲೆಯ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಛೇರಿ ಮುಂಭಾಗ ಆಗಸ್ಟ್ 04 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷರಾದ ಎಂ. ಪುಟ್ಟಮಾದು, ಪ್ರಧಾನ ಕಾರ್ಯದರ್ಶಿ ಕೆ.ಬಸವರಾಜು, ಉಪಾಧ್ಯಕ್ಷರಾದ ಕೆ.ಹನುಮೇಗೌಡ, ಬಿ.ಎಂ. ಶಿವಮಲ್ಲಯ್ಯ, ಸಹ ಕಾರ್ಯದರ್ಶಿ ಕೆ.ಹೆಚ್.ಪುಟ್ಟಮಾದೇಗೌಡ, ವೈ.ಕೆ.ಪ್ರದೀಪ್‌ಕುಮಾರ್ ಸೇರಿದಂತೆ ವಿವಿಧ ತಾಲ್ಲೂಕುಗಳಿಂದ ನೂರಾರು ಕೂಲಿಕಾರರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮುಸ್ಲಿಂ ಚಿಂತಕರ ಚಾವಡಿಯಿಂದ ಸಾಚಾರ್ ವರದಿ ಬಗ್ಗೆ ಚರ್ಚೆ

ಮುಸ್ಲಿಂ ಚಿಂತಕರ ಚಾವಡಿ ವತಿಯಿಂದ ಆಗಸ್ಟ್ 07–08ರಂದು ಎರಡು ದಿನಗಳ ಕಾಲ ಸಭೆ ಹಾಗೂ ಸಾಚಾರ್ ವರದಿ ಕುರಿತ ರಾಜ್ಯ ಮಟ್ಟದ ಕಾರ್ಯಗಾರವನ್ನು ದಾವಣಗೆರೆ ಏರ್ಪಡಿಸಲಾಗಿತ್ತು. ಕಾರ್ಯಗಾರವನ್ನು ಡಾ.ಸಿ.ಎಸ್.ದ್ವಾರಕನಾಥ್ ಉದ್ಘಾಟಿಸಿದರು. ಡಾ.ರಹಮತ್ ತರಿಕೆರೆ, ರಂಜಾನ್ ದರ್ಗಾ, ಭಾನು ಮುಸ್ತಾಕ್, ಪ್ರೋ. ಮುಜಾಫರ್ ಅಸ್ಸಾದಿ, ಮುನೀರ್ ಕಾಟಿಪಳ್ಳ ಮುಂತಾದವರು ಭಾಗವಹಿಸಿದ್ದರು.



ಸಗಣಿಯ ಮುದ್ದೆಯನ್ನು ಗಂಜಳದಲ್ಲಿ ಅದ್ದಿಕೊಂಡು ಕುರಿ ಪಿಕ್ಕೆಗಳನ್ನು ನೆಂಜಿ–ಕೊಂಡು ತಿಂದರೆ ಸಾವಿರ ವರ್ಷ ಬದುಕಬಹುದು – ಭಕ್ತರಪ್ಪೋ ಭಕ್ತರು.

– ಬಿ.ಆರ್.ಭಾಸ್ಕರ ಪ್ರಸಾದ್

ಗರ್ಭಿಣಿಯರು ಸೆಗಣಿ ಹಾಗೂ ಗೋಮೂತ್ರದ ಪೇಸ್ಟ್ ತಿನ್ನುವುದರಿಂದ ನಾರ್ಮಲ್ ಡೆಲಿವರಿಯಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಗೋಸೇವಾ ಪ್ರಮುಖ್ ಶಂಕರ್ ಲಾಲ್ ಹೇಳಿಕೆಗೆ ಪ್ರತಿಕ್ರಿಯೆ

ನಾಳಿನ ಕಾರ್ಯಕ್ರಮಗಳು

ಆಗಸ್ಟ್ 14–15 : ಮಹಾದಾಯಿ ಗಲಭೆಯಲ್ಲಿ ಬಂಧಿಸಿರುವ ರೈತರ ಬಿಡುಗಡೆಗಾಗಿ ಯಮನೂರು ಚಲೋ, ಹುಬ್ಬಳ್ಳಿಯಿಂದ

ಆಗಸ್ಟ್ 14 : ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ದಲಿತ ಹಕ್ಕುಗಳ ಸಮಿತಿ, ಕರ್ನಾಟಕ ವತಿಯಿಂದ ಧರಣಿ ಸಂಜೆ 6 ರಿಂದ ರಾತ್ರ 12ರವರೆಗೆ

ಆಗಸ್ಟ್ 14 : ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ, ರಾಜಾಜಿನಗರ, ಬೆಂಗಳೂರು.

ಆಗಸ್ಟ್ 20–21 : ದುಡಿಯುವ ಮಹಿಳೆಯರ ಸಮನ್ವಯ ಸಮಿತಿ(ಸಿಐಟಿಯು) ರಾಜ್ಯ ಸಮಾವೇಶ, ಮೈಸೂರು.

ಆಗಸ್ಟ್ 24 : ಕಾಂ.ಎಸ್.ಸೂರ್ಯನಾರಾಯಣರಾವ್ ಜನ್ಮದಿನಾಚರಣೆ ಅಂಗವಾಗಿ ಮೌಢ್ಯಾಚರಣೆ ಪ್ರತಿಬಂಧಕ ಕಾಯ್ದೆ ಜಾರಿಗಾಗಿ ಕಾರ್ಯಕ್ರಮ, ಸಿಐಟಿಯು ವತಿಯಿಂದ ಕಾಂ. ಜ್ಯೋತಿಬಸು ಭವನ, ಬಸವನಗುಡಿ, ಬೆಂಗಳೂರು.

ಆಗಸ್ಟ್ 26: ಎಐಡಿಡಬ್ಲ್ಯೂಎ ರಾಜ್ಯ ಸಮ್ಮೇಳನ ಬಹಿರಂಗ ಸಭೆ, ಕಾಂ. ಬೃಂದ್‌ಕಾರಟ್ ಭಾಗವಹಿಸಲಿದ್ದಾರೆ. ಕೋಲಾರ

ಆಗಸ್ಟ್ 26–28 : ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ.

ಸೆಪ್ಟಂಬರ್ 02 : ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ರಾಯಣ್ಣ ಬ್ರಿಗೇಡ್: ಬಿಜೆಪಿ ಡಬ್ಬಲ್ ಗೇಮ್..... ಪುಟ 3 ರಿಂದ

ಇದೆಯೇ? ಈಗಲೂ ಏಳುವ ಪ್ರಶ್ನೆ ಈಶ್ವರಪ್ಪನವರ ಸ್ವತಂತ್ರ ತೀರ್ಮಾನವೇ?

ಈ ಎಲ್ಲಾ ಸಂಗತಿ ಹಾಗೂ ಸಂದರ್ಭಗಳನ್ನು ಗಮನಿಸಿದರೆ ಇದು ಈಶ್ವರಪ್ಪ, ಯಡಿಯೂರಪ್ಪನವರ ನಡುವಿನ ಕಲಹವಷ್ಟೇ ಅಲ್ಲ, ಅದನ್ನು ಮೀರಿದ ರಾಜಕೀಯ ತಂತ್ರಗಾರಿಕೆ ಇದ್ದೇ ಇದೆ ಎಂಬುದು ಸ್ಪಷ್ಟ. ಅದರಲ್ಲೂ ಈ ಎಲ್ಲವೂ ಇವರ ಮಾತೃ ಸಂಸ್ಥೆ ಕೇಶವ ಶಿಲ್ಪದ ಸಂಘದ ಸಮ್ಮತಿ ಇಲ್ಲದೇ ನಡೆದ ಆಕಸ್ಮಿಕ ಘಟನೆಯೂ ಅಲ್ಲ.

ಯಡಿಯೂರಪ್ಪನವರನ್ನೂ ರಾಜ್ಯ ಘಟಕ–ಕ್ಕೆ ಅಧ್ಯಕ್ಷರನ್ನಾಗಿ ನೇಮಿಸುವಾಗ ಲಿಂಗಾಯತ ಸಮುದಾಯವನ್ನುಬಿಜೆಪಿಯೊಂದಿಗೇಗಟ್ಟಿಗೊಳಿಸುವ ಗುರಿಯನ್ನು ಆರ್‌ಎಸ್‌ಎಸ್ ಇರಿಸಿತ್ತು. ಅದೇ ಹೊತ್ತಿನಲ್ಲಿ ಬಿಎಸ್‌ವೈ ತನ್ನದೇ ಶಕ್ತಿವೃಂದ ರಚಿಸಿ ಮೇಲುಗೈ ಪಡೆಯದಂತೆ ಭಿನ್ನಮತೀಯ ನಾಯಕರ ನಿಯಂತ್ರಣದ ಬ್ರೇಕ್‌ನ್ನು ಇರಿಸಿತು.

ಮೇಲ್ಜಾತಿ ನಾಯಕತ್ವ ಎಂಬ ಭಾವನೆ ಬಂದು ಹಿಂದುಳಿದ ಜಾತಿ–ಜನಾಂಗಗಳು ಕಾಂಗ್ರೆಸ್ ಹಿಂದೆಯೇ ಕ್ರೋಢೀಕರಣಗೊಳ್ಳದಂತೆ ಮಾಡಲು ಈಶ್ವರಪ್ಪನವರನ್ನೂ ಗದ್ದುಗೆಯ ಸಮಾನ ಸ್ಪರ್ಧಿ ಎಂಬಂತೆ ಬಿಂಬಿಸುವ ತಂತ್ರಕ್ಕೆ ಚಾಲನೆ ನೀಡಿ, ಅದಕ್ಕೆ ಸಾಂಸ್ಥಿಕ ರೂಪ ಕೊಡಲು ಹೊರಟಿದೆ. ಕಾಂಗ್ರೆಸ್ ಅದರಲ್ಲೂ ಸಿದ್ಧರಾಮಯ್ಯನವರ ಹಿಂದಿರುವ ಕುರುಬರನ್ನೂ ಒಳಗೊಂಡ ಅತೃಪ್ತ 'ಅಹಿಂದ' ಸಮುದಾಯಗಳು ಅಲ್ಲೇ ಉಳಿಯದಿರಲು ಅಥವಾ ಬೇರೊಂದು ರಾಜಕೀಯ ಪಕ್ಷಗಳತ್ತ ಸರಿಯದೇ ಬಿಜೆಪಿಯ ಓಟುಗಳಾಗಿ ಪರಿವರ್ತಿಸುವ ತಂತ್ರದಲ್ಲಿ 'ರಾಯಣ್ಣ ಬ್ರಿಗೇಡ್'ಗೆ ಚಾಲನೆ ಮತ್ತು ಈಶ್ವರಪ್ಪ ಅದರ ನಾಯಕನನ್ನಾಗಿಸಲಾಗುತ್ತಿರುವುದು.

ಈ ಪ್ರಕ್ರಿಯೆಗಳು ಕರ್ನಾಟಕದಲ್ಲಿ ಜಾತಿ ನೆಲೆಯಲ್ಲಿಯೇ ರಾಜಕೀಯ ಕ್ರೋಢೀಕರಣವನ್ನು ತರಲು ನಡೆಸಿದ ಪ್ರಯತ್ನವಾಗಿ ಮುಂದುವರಿಕೆಯಾಗಿದೆ. ಕೇಂದ್ರದ ಬಿಜೆಪಿ–ಎನ್‌ಡಿಎ, ರಾಜ್ಯದ ಕಾಂಗ್ರೆಸ್ ಪಕ್ಷಗಳ ಸರಕಾರಗಳು ತರುತ್ತಿರುವ ಆರ್ಥಿಕ ನೀತಿಗಳ ದಾಳಿಗಳ ವಿರುದ್ಧ ಶ್ರಮಜೀವಿ ವರ್ಗದ ಪರ್ಯಾಯ ರಾಜಕೀಯ ಶಕ್ತಿಗಳ ಬೆಳವಣಿಗೆಯ ಧ್ರುವೀಕರಣವಾಗದಂತೆ ತಡೆಯುವ ಹುನ್ನಾರವೂ ಇಲ್ಲಿದೆ. ದೇಶದಲ್ಲಿ ಇದೇ ಸಂಘಪರಿವಾರ ದಲಿತರು, ಆದಿವಾಸಿಗಳ ಮೇಲೆ ದೌರ್ಜನ್ಯ ಧಾಳಿ ನಡೆಸುತ್ತಿದ್ದರೆ, ವರ್ಷಾನುಗಟ್ಟಲೇ ಮೌನಿ ಬಾಬಾ ಆಗಿದ್ದ ಮೋದಿ ತನ್ನ ಮೇಲೆ ದಾಳಿ ಮಾಡಿ ಎಂದು 58 ಇಂಚಿನ ಎದೆಯೊಡ್ಡುವುದು, ಅದೇ ವೇಳೆ ದಾಳಿಗಳು ನಿಲ್ಲದೇ ಮುಂದುವರಿದು ಮೇಲ್ಜಾತಿಗಳಿಗೆ ಅಭಯ ನೀಡುವುದು, ಹಾದಿ ತಪ್ಪಿಸುವ ರಾಜಕಾರಣದ ಉದಾಹರಣೆಗಳು. ಈ ಎಲ್ಲಾ ಬಿರುಸಿನ ವಿದ್ಯಾಮಾನಗಳನ್ನು ಸೆಪ್ಟಂಬರ್ 2ರ ಕಾರ್ಮಿಕ ವರ್ಗದ ಮಹಾ ಮುಷ್ಕರದ ಭರದ ಸಿದ್ಧತೆಗಳ ಯಶಸ್ವಿ ಪ್ರತಿಕ್ರಿಯೆಗಳನ್ನು ತಡೆಯುವ ತಂತ್ರಗಳ ಭಾಗವಾಗಿಯೂ ನೋಡಬೇಕಿದೆ.

ವಿಚಿತ್ರವೆಂದರೆ, ಬಿಜೆಪಿ–ಪರಿವಾರ ಅಹಿಂದ ರಾಜಕಾರಣಕ್ಕೆ ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣನನ್ನು ಬಳಸುತ್ತಿರುವುದು ! ರಾಯಣ್ಣ ತಾನು ಕುರುಬ ಜಾತಿಗೆ ಸೇರಿದವನೆಂದಾಗಲೀ, 'ಅಹಿಂದ' ರಾಜಕಾರಣದ ಸಂಕೇತವಾಗಿ ಬ್ರಿಟೀಶರ ವಿರುದ್ಧ ಹೋರಾಟ ಮಾಡಿದವನಲ್ಲ. ಆತ ವಸಾಹತುಶಾಹಿ ವಿರೋಧಿ ಹೋರಾಟದ ಉಜ್ವಲ ಉದಾಹರಣೆ. ದುರಂತವೆಂದರೆ ಕಾಂಗ್ರೆಸ್–ಬಿಜೆಪಿ ಪಕ್ಷಗಳು ಜಾತಿಯ ನಾಯಕನ್ನಾಗಿಸಿ ತಮ್ಮ ಸಂಕುಚಿತ ರಾಜಕೀಯ ಹಿತಾಸಕ್ತಿಗೆ ಉದಾತ್ತ ಪರಂಪರೆಯ ಹುತಾತ್ಮನನ್ನು ದುರ್ಬಳಕೆ ಮಾಡುತ್ತಿರುವುದು. ಇದು ಖಂಡನೀಯ.

ಬಿಜೆಪಿಯು ಕೊಳೆತು ನಾರುತ್ತಿರುವ ತನ್ನ ದುರಾಡಳಿತದ ಹೊಲಸನ್ನು ಮರೆ ಮಾಚಿಕೊಳ್ಳಲು ಜನರಿಗೆ ಮಂಕುಬೂದಿ ಎರಚಲು ಎಲ್ಲಿಲ್ಲದ ಯತ್ನಗಳಲ್ಲಿ ತೊಡಗಿದೆ. ಜನ ಇದಕ್ಕೆಲ್ಲಾ ಮರುಳಾಗಬೇಕೆ?

ಹೊಸ ಶಿಕ್ಷಣ ನೀತಿ ಸಂವಾದ

ತ್ರಿಕರಣದಿಂದ ಕೂಡಿರುವ ಶಿಕ್ಷಣ ನೀತಿ ಅಪಾಯಕಾರಿ : ಬರಗೂರು

2016ರ ಹೊಸ ಶಿಕ್ಷಣ ನೀತಿಯ ಕರಡಿನಲ್ಲಿ ಯಾಂತ್ರಿಕರಣ, ಖಾಸಗೀಕರಣ, ವಿದೇಶಿಕರಣದ ತ್ರಿಕರಣಗಳಿಂದ ಕೂಡಿದ್ದು ಇವು ದೇಶದ ಶಿಕ್ಷಣ ವ್ಯವಸ್ಥೆಗೆ ಧಕ್ಕೆಯಾಗಲಿದೆ ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ವಿಷಾದ ವ್ಯಕ್ತಪಡಿಸಿದರು.

ಅವರು ಬೆಂಗಳೂರು ನಗರದ ಶಾಸಕರ ಭವನದಲ್ಲಿ ಆಗಸ್ಟ್ 9ರಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ರಾಜ್ಯ ಸಮಿತಿ ಆಯೋಜಿಸಿದ್ದ "ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ" ಸಾಧಕ ಬಾಧಕಗಳ ಕುರಿತು ಹಮ್ಮಿಕೊಂಡಿದ್ದ ರಾಜ್ಯ ಸಂವಾದ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಶಿಕ್ಷಣ ನೀತಿಯು ಕೌಶಲ್ಯದ ಹೆಸರನಲ್ಲಿ ಖಾಸಗೀಕರಣಕ್ಕೆದಾರಿ ಮಾಡಿಕೊಡುವ ನೀತಿಯಾಗಿದೆ. ಸಂಯುಕ್ತ ಶಾಲೆ ಯೋಜನೆ ಹೆಸರಲ್ಲಿ ಸರಕಾರಿ ಶಾಲೆಗಳನ್ನು ದುರ್ಬಲಗೊಳಿಸುವ ಲಕ್ಷಣಗಳಿವೆ. ಶಿಕ್ಷಣದ ರಾಷ್ಟ್ರೀಕರಣದ ಬಗ್ಗೆ ಮಾತನಾಡದೆ ವಿದೇಶಿ ವಿ.ವಿ ಮತ್ತು ಖಾಸಗಿ ವಿ.ವಿ ಗಳನ್ನು ಆರಂಭಿಸಲು ಒತ್ತು ನೀಡಿದೆ. ತಂತ್ರಜ್ಞಾನವನ್ನು ದೇಶದ ಶಿಕ್ಷಣಕ್ಕೆ ಅನುಕೂಲವಾಗುವಂತೆ ಬಳಸಬೇಕೆ ಹೊರತಾಗಿ ಯಾವುದೇ ಕಂಪನಿಗೆ ಲಾಭ ಮಾಡಿಕೊಡುವ ಕೆಲಸ ವಾಗಬಾರದೆಂದು ಆರೋಪಿಸಿದರು.

ಏಪ್ರಿಲ್– ಮೇ 2015 ರಿಂದ ಸೆಪ್ಟಂಬರ್ ವರೆಗೆ 6 ತಿಂಗಳುಗಳ ಕಾಲ ಗ್ರಾಮ, ನಗರ, ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ಪ್ರಾಂತೀಯ ಮಟ್ಟದಲ್ಲಿ ಚರ್ಚೆ



ನಡೆಸಿ ಹೊಸ ರಾಷ್ಟ್ರೀಯ ನೀತಿಯನ್ನು ಕುರಿತು ಅಕ್ಟೋಬರ್ 31, 2015 ರಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಕೇವಲ 6 ತಿಂಗಳಲ್ಲಿ ಅಂದರೆ 30 ಎಪ್ರಿಲ್ 2016 ಕ್ಕೆ ಕೇಂದ್ರ ಸರಕಾರಕ್ಕೆ ವರದಿಯನ್ನು ನೀಡಿದೆ. ಒಂದು ಶಿಕ್ಷಣ ನೀತಿಯನ್ನು ಜಾರಿ ಮಾಡಬೇಕಾದಾಗ, ಕೇವಲ ಆರು ತಿಂಗಳಲ್ಲಿ ಈ ರೀತಿಯ ವರದಿ ನೀಡಿದ್ದಾರೆ ಎಂದ–ರೆ ಅದು ಆರೋಗ್ಯದಿಂದ ಕೂಡಿರಲು ಸಾಧ್ಯವೇ ಇಲ್ಲ. ಕನಿಷ್ಟ 3 ವರ್ಷಗಳವರೆಗೆಯಾದರೂ ಅದರ ಕೆಲಸ ನಡೆಯಬೇಕೆಂದು ಹಲವಾರು ಶಿಕ್ಷಣ ತಜ್ಞರು ಹೇಳಿದ್ದಾರೆ.

ಆಕ್ಟೋಬರ್ 31 ರಂದು ರಚಿಸಲಾದ ಸಮಿತಿಗೆ ಅಧ್ಯಕ್ಷರನ್ನಾಗಿ ಟಿ.ಎಸ್.ಆರ್ ಸುಬ್ರಮಣ್ಯನ್ ಅವರನ್ನು ನೇಮಿಸಲಾಗುತ್ತದೆ. ಇವರು ಕೇಂದ್ರದ ಮಾಜಿ ಕ್ಯಾಬಿನೆಟ್ ಸೆಕ್ರಟರಿ. ಇವರೊಂದಿಗೆ ಇತರೆ ನಾಲ್ವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತೆ. ಅವರಲ್ಲಿ ಶೈಲಜಾ ಚಂದ್ರ ಇವರು ದೆಹಲಿಯ ಮಾಜಿ ಮುಖ್ಯಕಾರ್ಯದರ್ಶಿ, ಸೇವಾರಾಮ್ ಶರ್ಮಾ ಇವರು ದೆಹಲಿಯ ಮಾಜಿ ಗೃಹ ಕಾರ್ಯದರ್ಶಿ, ಸುಧೀರ್ ಮಂಕಡ್ ಇವರು ಗುಜರಾತ್ ನ ಮಾಜಿ ಕಾರ್ಯದರ್ಶಿ ಜೆ.ಎಸ್. ರಾಜಪುರೋಹಿತ್ ಇವರು ಎನ್.ಸಿ.ಆರ್.ಟಿ ಸಿ.ಯ ಮಾಜಿ ನಿರ್ದೇಶಕರು. ಈ ಸಮಿತಿಯಲ್ಲಿರುವ ಐದು ಜನರಲ್ಲಿ ಯಾರೂ ಶಿಕ್ಷಣ ತಜ್ಞರಿಲ್ಲ, ಶಿಕ್ಷಣ ಕೇತ್ರದಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುವ ಅಧಿಕಾರಿಗಳು ಯಾರೂ ಇಲ್ಲ.

ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ಮಾಡುವ ಹಿರಿಯ ಉಪನ್ಯಾಸಕರಿಲ್ಲ. ಇಲ್ಲಿರುವುದು ಎಲ್ಲರೂ ಮಾಜಿಗಳೇ, ಅದರಲ್ಲಿ ಇಬ್ಬರು ದೆಹಲಿ ಕೇಂದ್ರಾಡಳಿತದಲ್ಲಿ ಕೆಲಸ ಮಾಡಿದ ಅನುಭವವಿದ್ದರೆ. ಜೆ.ಎಸ್.ರಾಜಪುರೋಹಿತ್ ಆರ್.ಎಸ್.ಎಸ್ ಸಿದ್ಧಾಂತವನ್ನು ಸಮರ್ಥಿಸುತ್ತಾ ಬಂದವರು. ಇವರು ಮುರಳಿ ಮನೋಹರ ಜೋಷಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದಾಗ ಪಠ್ಯ ಪುಸ್ತಕಗಳನ್ನು ಕೇಸರಿಕರಣಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು. ಇವರಿಂದ ರಚನೆಯಾಗಿರುವ 2016 ರ ಶಿಕ್ಷಣ ನೀತಿ ಹೇಗಿರಬಹುದು ಎಂಬುದನ್ನು ನೀವೆ ಆಲೋಚಿಸಿ. ಈ ಸಮಿತಿಯು ಮೇ 27 ರಂದು ಕೇಂದ್ರಸರಕಾರಕ್ಕೆ ಹೊಸ ಶಿಕ್ಷಣ ನೀತಿಯ ಕರಡನ್ನು ನೀಡಿದೆ. ಆದರೆ ಕೇಂದ್ರ ಸರಕಾರ ಈ ಕುರಿತು ಎಲ್ಲಿಯೂ ಚರ್ಚೆಗಳನ್ನು ನಡೆಸುತ್ತಿಲ್ಲ.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜೆ.ಎನ್. ಯು. ಮಾಜಿ ವಿದ್ಯಾರ್ಥಿ ಚೇತನ್ ಸಿಂಗೈ ಮಾತನಾಡಿ "2009 ರಿಂದ 16 ಅವಧಿಯಲ್ಲಿ ದೇಶದಲ್ಲಿ 48% ಖಾಸಗಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿವೆ. ಇದನ್ನು ಇನ್ನಷ್ಟು ಈ ನೀತಿ ಗಟ್ಟಿಗೊಳಿಸುತ್ತದೆ. ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಈ ನೀತಿ ಕಸಿಯುತ್ತದೆ. ಸಾರ್ವಜನಿಕರ ಮಧ್ಯೆ ಚರ್ಚೆ ನಡೆಸದೆ ಜಾರಿ ಮಾಡುತ್ತಿರುವುದು ಶಿಕ್ಷಣದ ಮೇಲಿನ ದಾಳಿಯಾಗಿದೆ" ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಐಪಿಎಸ್ ನ ರಾಷ್ಟ್ರೀಯ ಮುಖಂಡರಾದ ಶುಭಾಂಕರ ಚಕ್ರಚರ್ತಿ ಮಾತನಾಡಿ ಈ ನೀತಿ ಶೋಷಿತರ ಶಿಕ್ಷಣವನ್ನು ಅಭಿವೃದ್ಧಿ ಪಡಿಸದೆ ಉಳ್ಳವರ ಸ್ವತ್ತಾಗಲಿದೆ. ದೇಶವ್ಯಾಪಿ ವಿದ್ಯಾರ್ಥಿ ಸಂಘಟನೆ, ಪೋಷಕರ ಸಂಘಟನೆ, ಶಿಕ್ಷಣ ತಜ್ಞರ ಜೊತೆ ಚರ್ಚಿಸದೇ ಏಕಮುಖವಾಗಿ ಜಾರಿ ಮಾಡಲು ಹೊರಟಿದೆ" ಎಂದು ಆರೋಪಿಸಿದರು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ರಾಜ್ಯಾಧ್ಯಕ್ಷ ವಿ.ಅಂಬರೀಶ ವಹಿಸಿದ್ದರು.

ಜಾವೇಡ್ಕರ್ ಗೆ ಎಸ್.ಎಂ.ಎಸ್. ರವಾನೆ:

ಶಿಕ್ಷಣ ಉಳಿಸಿ, ದೇಶ ರಕ್ಷಿಸಿ, ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವಂತೆ ಎಸ್. ಎಫ್.ಐ. ವತಿಯಿಂದ ದೇಶವ್ಯಾಪಿ **SMS** ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ಅಭಿಯಾನದಲ್ಲಿ ರಾಜ್ಯಾದ್ಯಂತ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದರ ಜೊತೆಯಲ್ಲಿ ವಿದ್ಯಾರ್ಥಿಗಳ ಸಹಿ ಸಂಗ್ರಹಿಸುವಂತೆ ಮತ್ತು ಈ ನೀತಿಗೆ ಆಕ್ಷಪಣೆ ಮತ್ತು ಸಲಹೆಗಳನ್ನು ಸಲ್ಲಿಸಲು ತೀರ್ಮಾನಿಸಲಾಯಿತು.



ಕಾಂ.ವೆಂಕಟರೆಡ್ಡಿ ನಿಧನ

ಮಾಜಿ ಗ್ರಾಮ ಪಂಚಾಯತಿ ಅ ಧ್ಯಕ್ಷರು, ಜೂಲಪಾಳ್ಯ, ಸಿಪಿಐ(ಎಂ) ಪಕ್ಷದ ಮುಖಂಡರು ಹಾಗೂ ಬಾಗೇಪಲ್ಲಿಯ ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಾದ ಕಾಂ.ಸನ್ನವಾರಪಲ್ಲಿ ವೆಂಕಟರೆಡ್ಡಿರವರು ಆಗಸ್ಟ್ 08ರಂದು ಬಾಗೇಪಲ್ಲಿಯಿಂದ ಬೆಂಗಳೂರಿಗೆ ಬರುವ ಸಂದರ್ಭದಲ್ಲಿ ದೇವನಹಳ್ಳಿ ಬಳಿ ರಸ್ತೆ ಅಪಘಾತದಲ್ಲಿ ನಿಧನರಾಗಿದ್ದಾರೆ. ಅವರಿಗೆ 50 ವರ್ಷವಾಗಿತ್ತು. ಕಾಂ.ವೆಂಕಟರೆಡ್ಡಿರವರು ಮಿಟ್ಟೆಮರಿ ಬಳಿಯ ಕಮ್ಮಸಂದ್ರದವರು. ಹಲವು ವರ್ಷಗಳಿಂದ ಪಕ್ಷದಲ್ಲಿ ದುಡಿದ ಸಂಗಾತಿಯ ಅಗಲಿಕೆಯಿಂದ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಅಪಾರ ಜನತೆ ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು.

ಸೌಜನ್ಯ ಪ್ರಕರಣದಲ್ಲಿ ಸಿಬಿಐ ತನಿಖೆಯಲ್ಲೂ ನ್ಯಾಯ ಸಿಗಲಿಲ್ಲ

2012 ಅಕ್ಟೋಬರ್ 9 ರಂದು ಕೊಲೆ, ಅತ್ಯಾಚಾರಕ್ಕೊಳಗಾಗಿದ್ದ ಸೌಜನ್ಯಳ ಪ್ರಕರಣದಲ್ಲಿ ನೈಜ ಆರೋಪಿಗಳ ಪತ್ತೆ ಹಚ್ಚಿ, ಸೌಜನ್ಯಳಿಗೆ ಅನ್ಯಾಯ ಮಾಡಿದವರಿಗೆ ಶಿಕ್ಷೆಯಾಗಬೇಕು, ಪವಿತ್ರ ಕ್ಷೇತ್ರ ಶ್ರೀಕ್ಷೇತ್ರ ಧರ್ಮಸ್ಥಳದ ಗೌರವ ಉಳಿಸಲು ಅಲ್ಲಿ ಆಗುತ್ತಿರುಯವ ಅಸಹಜ ಸಾವುಗಳ ತನಿಖೆಯಾಗಬೇಕು, ಅದಕ್ಕಾಗಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಿ 2012 ಅಕ್ಟೋಬರ್ 12 ನೇ ತಾರೀಕಿನಿಂದ ನಿರಂತರ 2 ವರ್ಷ ಹೋರಾಟ ನಡೆಸಿ ಸಿಬಿಐ ತನಿಖೆಗೆ ಆದೇಶ ಮಾಡಿಸುವಲ್ಲಿ ಸಫಲರಾದರೂ ನ್ಯಾಯ ಮಾತ್ರ ಮರೀಚಿಕೆಯಾಗಿದೆ ಎಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಢರೇಶನ್ (ಡಿ.ವೈ.ಎಫ್.ಐ) ಯ ಬೆಳ್ತಂಗಡಿ ತಾಲೂಕು ಅದ್ಯಕ್ಷ ಧನಂಜಯ ಗೌಡ, ಕಾರ್ಯದರ್ಶಿ ವಿಠಲ ಮಲೆಕುಡಿಯಾ, ಮುಖಂಡರುಗಳಾದ ಲಾರೆನ್ಸ್, ಯುವರಾಜ್, ಝಕಾರಿಯಾ ಮೊದಲಾದವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜನ ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಪ್ರಶ್ನಿಸುವಂತಾಗಿದೆ ಎಂದ ಅವರು ಬಿಜೆಪಿ ಸರಕಾರವಿದ್ದ ಸಮಯ ಆದ ಪ್ರಕರಣವನ್ನು, ಅಂದು ಮುಚ್ಚಿ ಹಾಕಲು ಪ್ರಯತ್ನಗಳಾಗಿ ಮುಂದೆ ಕಾಂಗ್ರೆಸ್ ಸರಕಾರವೂ ಹೋರಾಟ ತೀವ್ರಗೊಂಡಾಗಲಷ್ಟೇ ಸಿಬಿಐ ತನಿಖೆಗೊಪ್ಪಿಸಿತ್ತು ಎಂಬುದನ್ನು ನೆನಪಿಸಿದರು. ಇದೀಗ ಸಿಬಿಐ ವರದಿ ನೋಡುವಾಗ, ಸಿಬಿಐ ತನಿಖೆಯು ಸೌಜನ್ಯಳಿಗೆ ನ್ಯಾಯ ಕೊಡಿಸುವ ತನಿಖೆಯಾಗಿರದೆ, ಧರ್ಮಸ್ಥಳಕ್ಕೆ ಕ್ಲೀನ್ ಚಿಟ್ ಕೊಡಲು ನಡೆದ ತನಿಖೆ ಯಾಗಿದೆ ಎಂದ ಅವರುಗಳು, ಇದರ ವಿರುದ್ಧ ನಾವು ಉಗ್ರ ಹೋರಾಟ ನಡೆಸಲು ನಿರ್ಧರಿಸಿದ್ದೇವೆ ಎಂದರು. 9–10–2016 ರಂದು ಬೆಳ್ತಂಗಡಿ ತಾಲೂಕು ಕಚೇರಿ ಎದುರು ಸಿಬಿಐ ಸೌಜನ್ಯಳ ಪ್ರಕರಣದ ಸಿಬಿಐ ತನಿಖೆಗೆ ಒತ್ತಾಯಿಸಿ ಹೋರಾಟ ನಡೆಸಲಿದ್ದೇವೆ ಎಂದರು. ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಬಂದು ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಕಾರ್ಮಿಕ ಅಧಿಕಾರಿಯನ್ನು ನೇಮಕಗೊಳಿಸಲು ಸಿಐಟಿಯು ಆಗ್ರಹ

ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯು ಪಿ.ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ಸೇರಿ, ಉಡುಪಿ ಜಿಲ್ಲೆಯ ಕಾರ್ಮಿಕ ಅಧಿಕಾರಿರವರು ನಿವೃತ್ತಿಯಾಗಿ ಹೋದ ಬಳಿಕ, ಅವರ ಬದಲಿಗೆ ಹೊಸಬರ ನೇಮಕ ಕೂಡಲೇ ಸರಕಾರ ಮಾಡಬೇಕಾಗಿತ್ತು. ಕಾರ್ಮಿಕ ಮತ್ತು ಮಾಲಕರ ವಿವಾದಗಳು ಹೆಚ್ಚಿನವು ಬಾಕಿ ಇರುವುದರಿಂದ ಇತ್ಯರ್ಥಗೊಳಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಸರಕಾರದ ವಿಳಂಬಕ್ಕೆ ಸಿಐಟಿಯು ಖಂಡಿಸಿದೆ. ಕೂಡಲೇ ಜಿಲ್ಲಾ ಕಾರ್ಮಿಕ ಅಧಿಕಾರಿಯನ್ನು ನೇಮಕಗೊಳಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ ಎಂದು ಸಿಐಟಿಯುವಿನ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಯುತ ಕೆ. ಶಂಕರ್‌ರವರು ತಿಳಿಸಿದರು.


ಈ ವಾರ ಚರಿತ್ರೆಯಲ್ಲಿ

13 ಅಗಸ್ಟ್ 1926

ಫಿಡೆಲ್ ಕ್ಯಾಸ್ಟ್ರೋ ಜನ್ಮದಿನ



ಈ ಅಗಸ್ಟ್ 13ರಂದು ಜೀವಂತ ಇರುವ ಜಗತ್ತಿನ ಅಪ್ರತಿಮ ಕ್ರಾಂತಿಕಾರಿ ನಾಯಕ ಫಿಡೆಲ್ ಕ್ಯಾಸ್ಟ್ರೋ ಅವರ 90ನೇ ಜನ್ಮದಿನ. ಈ ದಿನ ಕ್ಯೂಬಾದ ಶ್ರೀಮಂತ ಕುಟುಂಬದಲ್ಲಿ ಜನಿಸಿ ವಿಶ್ವವಿದ್ಯಾಲಯ ಶಿಕ್ಷಣ ಪಡೆದ ಫಿಡೆಲ್ ಅಮೆರಿಕದ ಕೈಗೊಂಬೆಯಾದ ಅಧ್ಯಕ್ಷ ಬಾಟಿಸ್ಟಾನ ಸರ್ವಾಧಿಕಾರದ ವಿರುದ್ಧ ರಾಜಕೀಯ–ಕ್ಕೆ ಧುಮುಕಿದರು. ಒಂದು ಕಡೆ ಮಾರ್ಕ್ಸ್ ಎಂಗೆಲ್ಸ್, ಇನೊಂದು ಕಡೆ ಲ್ಯಾಟಿನ್ ಅಮೆರಿಕದ ಹೋರಾಟಗಾರ ಜೋಸ್ ಮಾರ್ತಿ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಫಿಡೆಲ್ ಪಶ್ಚಿಮ ಗೋಳಾರ್ಧದ ಮೊದಲ ಕಮ್ಯುನಿಸ್ಟ್ ಕ್ರಾಂತಿಯನ್ನು ಗೆರಿಲ್ಲಾ ಸಶಸ್ತ್ರ ಹೋರಾಟದ ಮೂಲಕ 1959ರಲ್ಲಿ ಸಾಧಿಸಿದರು. ಜಗತ್ತಿನ ಅತ್ಯಂತ ಪ್ರಬಲ ಸೂಪರ್ ಪವರ್ ಅಮೆರಿಕದ ದಿಗ್ಬಂಧನಕ್ಕೆ ಸೆಡ್ಡು ಹೊಡೆದು ಕ್ಯೂಬಾವನ್ನು ಸುಮಾರು 5 ದಶಕಗಳ ಕಾಲ ಸಮಾಜವಾದಿ ಹಾದಿಯಲ್ಲಿ ಮುನ್ನಡೆಸಿದರು. ಮಾತ್ರವಲ್ಲ ಲ್ಯಾಟಿನ್ ಅಮೆರಿಕದ ಮತ್ತು ಜಗತ್ತಿನ ದುಡಿಯುವ ಜನತೆಯ ವಿಮೋಚನಾ ಚಳುವಳಿಯ ನೆಚ್ಚಿನ ನೇತಾರರಾದರು.



ಪ್ರೊ. ರಾಜೇಂದ್ರ ಚೆನ್ನಿ

ಜಾಗತೀಕರಣದ ಬೆಳ್ಳಿಹಬ್ಬ

ಜಾಗತೀಕರಣದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಈ ಬೆಳ್ಳಿ ವರ್ಷಗಳಲ್ಲಿ ಭಾರತದ ಬನಿಯಾ ಬಂಡವಾಳಶಾಹಿಯು ನಮ್ಮ ಕಲ್ಪನೆಗೂ ಸಿಕ್ಕದಂತೆ ಬೆಳೆದಿದೆ. ವಿಶ್ವದ ಅತೀ ಹೆಚ್ಚು ಸಂಖ್ಯೆಯ ಕಡುಬಡವರು, ಅತೀ ಹೆಚ್ಚು ಸಂಖ್ಯೆಯ ಅಪೌಷ್ಠಿಕತೆಯಿಂದ ನರಳುವ ಹೆಂಗಸರು ಹಾಗೂ ಕಂದಮ್ಮಗಳು, ಅತೀ ಹೆಚ್ಚು ಸಂಖ್ಯೆಯ ಹಸಿವಿನಿಂದ ಮುಕ್ತಿ ಕಾಣದ ಜನರು ಹೆಚ್ಚುತ್ತಲೇ ಇದ್ದಾರೆ. ಆದರೆ ಅವರಾರಿಗೂ ಈ ಬೆಳ್ಳಿಹಬ್ಬದ "ಪಾರ್ಟಿ"ಗೆ ಆಮಂತ್ರಣವಿಲ್ಲ. ಪಾರ್ಟಿ ಮುಗಿದ ಮೇಲೆ ಎಂಜಲೆಲೆಗಳಿಗೆ ಕಾಯಬೇಕಷ್ಟೆ.

ಇತ್ತೀಚಿನ ದಿನಗಳಲ್ಲಿ ವಿಶೇಷವಾದ ಬೆಳ್ಳಿಹಬ್ಬವೊಂದನ್ನು ಮಾಧ್ಯಮಗಳಲ್ಲಿ ಚರ್ಚೆಯ ಮೂಲಕ, ಪತ್ರಿಕೆಗಳಲ್ಲಿ ಲೇಖನ ಹಾಗೂ ಸಂದರ್ಶನಗಳ ಮೂಲಕ ಆಚರಿಸಲಾಗುತ್ತಿದೆ. ಇದು ಪ್ರಧಾನಮಂತ್ರಿಯಾಗಿದ್ದ ಪಿ.ವಿ. ನರಸಿಂಹರಾವ್ ಹಾಗೂ ಹಣಕಾಸು ಮಂತ್ರಿಗಳಾಗಿದ್ದ ಮನಮೋಹನ್‌ಸಿಂಗ್ ಅವರು ಅನುಷ್ಠಾನಕ್ಕೆ ತಂದ ಆರ್ಥಿಕ ಉದಾರೀಕರಣದ ಬೆಳ್ಳಿಹಬ್ಬವಾಗಿದೆ. ಅಲ್ಲಲ್ಲಿ ಭಿನ್ನವಾದ ವಿಮರ್ಶಾತ್ಮಕ ದನಿಗಳು ಕೇಳಿಬಂದಿವೆಯಾದರೂ ಬಹುಪಾಲು ಚರ್ಚೆಗಳ ಒಮ್ಮತದ ಅಭಿಪ್ರಾಯವೆಂದರೆ

ಅ) ಅದು ಅಂದಿನ ಸಂದರ್ಭದಲ್ಲಿ ಅನಿವಾರ್ಯವಾಗಿತ್ತು. ಏಕೆಂದರೆ ನಮ್ಮ ಮೇಲೆ ಇದ್ದ ಸಾಲದ ಭಾರವು ಮಿತಿಮೀರಿಬಿಟ್ಟಿತ್ತು. ನಮ್ಮ ಅರ್ಥವ್ಯವಸ್ಥೆಯು ಮುಳುಗಿ ಹೋಗುವ ಸ್ಥಿತಿಯಲ್ಲಿತ್ತು.

ಆ) ಈ ಆರ್ಥಿಕ ಉದಾರೀಕರಣವು ಚಾರಿತ್ರಿಕವಾಗಿಯೂ ಅನಿವಾರ್ಯವೇ ಆಗಿತ್ತು ಹಾಗೂ ಆಗಿದೆ. ಚರಿತ್ರೆಯ ಗತಿಯನ್ನು ಬದಲಾಯಿಸುವುದು ಸಾಧ್ಯವಿಲ್ಲದ್ದರಿಂದ ಅದನ್ನು ಒಪ್ಪಿಕೊಂಡಿದ್ದು ಸರಿಯಾಗಿಯೇ ಇದೆ.

ಇ) ಇದು ಅನಿವಾರ್ಯ ಮಾತ್ರವಲ್ಲ; ಅದರಿಂದ ಪ್ರಯೋಜನಗಳೂ ಆಗಿವೆ. ಈಗ ಭಾರತದ ಆರ್ಥಿಕ ಪ್ರಗತಿ ಜಗತ್ತಿನಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಿದೆ. ಒಟ್ಟು ರಾಷ್ಟೀಯ ಉತ್ಪನ್ನದ ಸೂಚಕವು ಉತ್ತೇಜನಕಾರಿಯಾಗಿದೆ.

ಹೀಗೆ ಜಾಗತೀಕರಣದ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಯಾರೂ ಕೂಡ ಸಾಮಾಜಿಕ ನ್ಯಾಯದ ಬಗ್ಗೆ ಅಥವಾ ಆರ್ಥಿಕ ಉತ್ಪನ್ನದ ಫಲವನ್ನು ಸಮಾನವಾಗಿ ಹಂಚುವ ಬಗ್ಗೆ ಮಾತನಾಡುತ್ತಿಲ್ಲ. ಹೇಳದೇ ಇದ್ದರೂ ಗೃಹೀತವಾದ ನಂಬಿಕೆಯೆಂದರೆ ತನಗೇ ತಾನೇ, ಯಾವ ಪ್ರಯತ್ನವಿಲ್ಲದೆ ಆರ್ಥಿಕ ಪ್ರಗತಿಯ ಲಾಭಗಳು ಎಲ್ಲಾ ವರ್ಗಗಳಿಗೆ ತಲುಪುತ್ತದೆ ಎಂದು. ಇದು ಅತ್ಯಂತ ವಿಚಿತ್ರವಾದ ಸನ್ನಿವೇಶ. ಏಕೆಂದರೆ ಜಾಗತೀಕರಣವು ಹೇಗೆ ಹೊಸದಲ್ಲವೋ, ಅದರ ವಿಪರೀತ ಪರಿಣಾಮಗಳ ವಿಮರ್ಶೆಯೂ ಹೊಸದಲ್ಲ. ಜಗತ್ತಿನ ಅನೇಕ ದೇಶಗಳು ಜಾಗತೀಕರಣದ ಮೊದಲ ಹಂತದ ಸಂಭ್ರಮವನ್ನೂ, ಆನಂತರದ ದುರಂತಗಳನ್ನೂ ಅನುಭವಿಸಿದೆ. ನಾವೋಮಿ ಕ್ಲೇನ್ (Naomi Klein) ರ ಅದ್ಭುತ ಕೃತಿ The Shock Doctrine ಜಾಗತೀಕರಣದ ಕರಾಳ ಚರಿತ್ರೆಯ ಬೆಚ್ಚಿ ಬೀಳಿಸುವ ಕಥನವಾಗಿದೆ. ದಕ್ಷಿಣ ಅಮೇರಿಕಾ ಖಂಡದ ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಜಾಗತೀಕರಣದ ಪ್ರಯೋಗಗಳು ನಡೆದವು. ಅಲ್ಲಿಯೂ ಕೂಡ "ಅನಿವಾರ್ಯತೆ" "ಚಾರಿತ್ರಿಕ ಅನಿವಾರ್ಯತೆ" ಇವುಗಳ ಆ ಧಾರದ ಮೇಲೆ ಅಮೇರಿಕನ್ ಅರ್ಥಶಾಸ್ತ್ರಜ್ಞ ಮಿಲ್ಟನ್ ಸಿಂಗರ್ ಮತ್ತು ಅವನ ಶಿಷ್ಯರ ಪಡೆ ಈ ದೇಶಗಳ ಸರಕಾರಗಳಿಗೆ ಸಲಹೆಗಾರರಾಗಿ ದುಡಿದರು. ಈ ದೇಶಗಳ ಸರ್ವಾಧಿಕಾರಿಗಳು, ಮಿಲಿಟರಿ ಧುರೀಣರು, ಬಂಡವಾಳಶಾಹಿಗಳು ಜಾಗತೀಕರಣವನ್ನು ಆರಾಧಿಸಿದ್ದು ಮಾತ್ರವಲ್ಲ, ಬಲವಂತ ಹಾಗೂ ಹಿಂಸೆಯ ಮೂಲಕ ಹೇರಿದರು. ಪರಿಣಾಮವೆಂದರೆ ಮೊದಲ ಕೆಲವು ವರ್ಷಗಳಲ್ಲಿ ಈಗ ಭಾರತದಲ್ಲಿ



ಆದಂತೆ "ಆರ್ಥಿಕ ಪ್ರಗತಿಯ" ಭ್ರಮೆ ನಿಜವಾದಂತೆ ಕಂಡಿತು. ಅಲ್ಲಿಯ ಕೆಲವು ವರ್ಗಗಳಿಗೆ ಹಠಾತ್ತನೇ ಸವಲತ್ತುಗಳು, ಶ್ರೀಮಂತಿಕೆ, ಐಷಾರಾಮು... ಇವೆಲ್ಲ ಬಂದವು. ಹೀಗಾಗಿ ಜಾಗತೀಕರಣದ ವಿರೋಧಿಗಳನ್ನು, ವಿಮರ್ಶಕರನ್ನು ದ್ರೋಹಿಗಳಂತೆ ನೋಡಿ ಅವರನ್ನು ಶಿಕ್ಷಿಸಲಾಯಿತು. ಹಿಂಸೆಯ ಬೃಹತ್ ಪರ್ವವೇ ಆರಂಭವಾಯಿತು. ಈ ದೇಶಗಳ ಸ್ಥಿತಿ ಈಗ ಹೇಗಿದೆಯೆಂದು ಕಾಣುತ್ತಿದೆ. ಆದರೆ ಆ ಸ್ಥಿತಿಗಳಿಗೆ ಜಾಗತೀಕರಣವು ಕಾರಣವಲ್ಲ, ಬೇರೆ ಕಾರಣಗಳಿವೆ ಎನ್ನುವ ವಾದಗಳನ್ನು ಹರಿಬಿಡಲಾಗುತ್ತಿದೆ.

ಬೆಳ್ಳಿಹಬ್ಬವನ್ನು ಆಚರಿಸುತ್ತಿರುವವರು ಜಗತ್ತಿನ ಅನೇಕ ಶ್ರೇಷ್ಠ ಚಿಂತಕರು, ಅರ್ಥಶಾಸ್ತ್ರಜ್ಞರು ಹೇಳುತ್ತ ಬಂದಿರುವುದನ್ನು ಗಮನಿಸಬೇಕು. ಜಗದೀಶ್ ಭಗವತಿ, ಅವರ ಶಿಷ್ಯ ಪಾನೆಗಾರಿಯಾ, ಅಹ್ಲುವಾಲಿಯ ಹಾಗೂ ಅರುಣ್ ಜೈಟ್ಲಿ ಇವರುಗಳ ಜಾಗತೀಕರಣದ ಸಮರ್ಥನೆಯಲ್ಲಿ ಒಂದೇ ಒಂದು ಸ್ವಂತದ ವಿಚಾರವನ್ನು ಹೇಳಿಲ್ಲ. ಮನ್‌ಮೋಹನ್ ಸಿಂಗ್ ಕೂಡ. ಪಂಡಿತ ಗಿಳಿಗಳಂತೆ ಅಲ್ಲಿಯವರು ಹೇಳಿದ್ದನ್ನು ಇವರು ಪಾಠ ಒಪ್ಪಿಸುತ್ತಿದ್ದಾರೆ. ಸರಳವಾದ ಪ್ರಶ್ನೆಯೆಂದರೆ ಬಂಡವಾಳಶಾಹಿಯು ತನ್ನ ರಕ್ಷಣೆ ಹಾಗೂ ಬೆಳವಣಿಗೆಗಾಗಿ ಹುಟ್ಟುಹಾಕಿದ ಜಾಗತೀಕರಣವು ಅದು ಹೇಗೆ ಸಮಾನತೆಯನ್ನು ತರಬಲ್ಲದು? ಮತಕಟ್ಟೆಯು ಸಾಮಾಜಿಕ ನ್ಯಾಯವನ್ನು ತರಬಲ್ಲದು? ಅದರ ಆಂತರಿಕ ತರ್ಕವೆಂದರೆ (internal logic) ಬಂಡವಾಳದ ಬೆಳವಣಿಗೆಗಾಗಿ ಅತ್ಯಂತ ನಿರ್ದಯವಾಗಿ ಇನ್ನೆಲ್ಲವನ್ನೂ ಶೋಷನೆ ಮಾಡುವುದಾಗಿದೆ. ಆದ್ದರಿಂದಲೇ ಈ ಬೆಳ್ಳಿ ವರ್ಷಗಳಲ್ಲಿ ಭಾರತದ ಬನಿಯಾ ಬಂಡವಾಳಶಾಹಿಯು ನಮ್ಮ ಕಲ್ಪನೆಗೂ ಸಿಕ್ಕದಂತೆ ಬೆಳೆದಿದೆ. ವಿಶೇಷವೆಂದರೆ ಅದು ತನಗೆ ಬೇಕಾದ ಜಾಗತೀಕರಣವನ್ನು ಪ್ರಜಾಪ್ರಭುತ್ವದ ಮೂಲಕವೇ ಸಾಧಿಸುತ್ತಿದೆ. ಬಲಿಷ್ಠ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿ.ಜೆ.ಪಿ. ಜಾಗತೀಕರಣದ ವಿಷಯದಲ್ಲಿ ಯಾವ ಅಭಿಪ್ರಾಯ ಬೇಧವನ್ನೂ ಹೊಂದಿಲ್ಲ. ಜಾಗತೀಕರಣಕ್ಕೆ ಬೇಕಾಗಿರುವ ಭೂಮಿ, ಕಾರ್ಮಿಕ ವಿರೋಧಿ ಕಾನೂನುಗಳು, ಆದಾಯ ಹಾಗು ಇತರ ತೆರಿಗೆಗಳಿಂದ ರಿಯಾಯಿತಿ ಹಾಗೂ ವಿಶಾಲವಾದ ಕೊಳ್ಳುವ ವರ್ಗ ಇವುಗಳನ್ನು ಬೆಂಬಲಿಸುವ ಮಸೂದೆಗಳನ್ನು ನಮ್ಮ ಸಂಸತ್ತು ಸತತವಾಗಿ ಪಾಸುಮಾಡುತ್ತಿದೆ. ಜನಪರ ಹೋರಾಟಗಳನ್ನು ಹತ್ತಿಕ್ಕುವ ಕೆಲಸ ನಡೆದಿದೆ. ಅಗೋಚರವಾದ ಹಿಂಸೆಯ ಅಡಿಯಲ್ಲಿ ಜನಸಮುದಾಯಗಳು ನರಕವನ್ನೇ ಅನುಭವಿಸುತ್ತಿವೆ. ವಿಶ್ವದ ಅತೀ ಹೆಚ್ಚು ಸಂಖ್ಯೆಯ ಕಡುಬಡವರು, ಅತೀ ಹೆಚ್ಚು ಸಂಖ್ಯೆಯ ಅಪೌಷ್ಠಿಕತೆಯಿಂದ ನರಳುವ ಹೆಂಗಸರು ಹಾಗೂ ಕಂದಮ್ಮಗಳು, ಅತೀ ಹೆಚ್ಚು ಸಂಖ್ಯೆಯ ಹಸಿವಿನಿಂದ ಮುಕ್ತಿ ಕಾಣದ ಜನರು ಹೆಚ್ಚುತ್ತಲೇ ಇದ್ದಾರೆ. ಆದರೆ ಅವರಾರಿಗೂ ಈ ಬೆಳ್ಳಿಹಬ್ಬದ "ಪಾರ್ಟಿ"ಗೆ ಆಮಂತ್ರಣವಿಲ್ಲ. ಪಾರ್ಟಿ ಮುಗಿದ ಮೇಲೆ ಎಂಜಲೆಲೆಗಳಿಗೆ ಕಾಯಬೇಕಷ್ಟೆ. ●

'ಮಾಲೀಕ ಪರ ನೀತಿಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕ ವರ್ಗದಿಂದ ಮಾತ್ರ ಸಾಧ್ಯ'


ಸಿಐಟಿಯು 3 ನೇ ದಾವಣಗೆರೆ ಜಿಲ್ಲಾ ಸಮ್ಮೇಳನ


ದೇಶದಲ್ಲಿ ಎದ್ದುಬರುತ್ತಿರುವ ದುಡಿಯುವ ವರ್ಗದ ಪ್ರತಿರೋಧಕ್ಕೆ ಉತ್ತರಿಸಲಾರದ ಮೋದಿ ಸರಕಾರ ಜನರನ್ನು ಜಾತಿ ಮತ್ತು ಧರ್ಮದ ಹೆಸರಲ್ಲಿ ವಿಭಜಿಸಲು ಸಂಚು ರೂಪಿಸುತ್ತಿದೆ. ಆದರೆ ದೇಶದ ಕಾರ್ಮಿಕ ವರ್ಗ ಇಂತಹ ಎಲ್ಲಾ ಸವಾಲುಗಳನ್ನು ಹಿಮ್ಮೆಟ್ಟಿಸುವ ಶಕ್ತಿಯನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿದೆ. ಭಾರತದ ಕಾರ್ಮಿಕ ವರ್ಗಕ್ಕೆ ತನ್ನದೇ ಕ್ರಾಂತಿ ಕಾರಿ ಇತಿಹಾಸ ಇದೆ. ಹೀಗಾಗಿ ಈಗ ಮೋದಿ ಸರಕಾರ ಜಾರಿ ಮಾಡುತ್ತಿರುವ ಕಾರ್ಪೋರೇಟ್ ಪರ ನೀತಿಗಳನ್ನು ಸೋಲಿಸಲು ಕಾರ್ಮಿಕ ವರ್ಗದಿಂದ ಮಾತ್ರವೇ ಸಾಧ್ಯವೆಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್ ಹೇಳಿದರು.


ಅವರು ದಾವಣಗರೆಯಲ್ಲಿ ಜುಲೈ 23 ಮತ್ತು 24 ರಂದು ನಡೆಸ ಸಿಐಟಿಯುವಿನ 4 ನೇ ಜಿಲ್ಲಾ ಸಮ್ಮೇಳವನ್ನು ಉದ್ಘಾಟಿಸಿ ಮಾತನಾಡಿ ದೇಶದಲ್ಲಿ ಉದಾರೀಕರಣ ನೀತಿಗಳು ಜಾರಿಯಾದ ನಂತರದಲ್ಲಿ ಸುಮಾರು 3 ಲಕ್ಷ ರೈತರು ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. ಈ ಕೃಷಿ ಬಿಕ್ಕಟ್ಟಿಗೆ ಕಳೆದ 25 ವರ್ಷಗಳಿಂದ ಜಾರಿ ಮಾಡಲಾದ ಅಮೇರಿಕ ಪರ ನೀತಿಗಳೆ ಕಾರಣ. ಈ ನೀತಿಗಳ ಪರಿಣಾಮವಾಗಿ ಲಕ್ಷಾಂತರ ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಕೋಟ್ಯಾಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಯಾವುದೆ ಭರವಸೆಯ ಕಾರ್ಯಕ್ರಮಗಳಿಲ್ಲ. ಬೀಡಿ ಉದ್ಯಮ ನಶಿಸುತ್ತಿದ್ದು ಆ ಕಾರ್ಮಿಕರಿಗೆ ಯಾವುದೇ ಪರ್ಯಾಯ ಕೆಲಸ ನೀಡಿಲ್ಲ. ಬದಲಾಗಿ ದೇಶದಲ್ಲಿ ಶ್ರೀಮಂತರಿಗೆ ಸಾವಿರಾರು ಕೋಟಿ ರಿಯಾಯ್ತಿಗಳನ್ನು ನೀಡಿ ಅವರನ್ನು ಖುಷಿಪಡಿಸಲಾಗುತ್ತಿದೆ. ಈ ನೀತಿಗಳನ್ನು ಹಿಮ್ಮೆಟ್ಟಿಸದಿದ್ದರೆ ದುಡಿಯುವ ಜನರಿಗೆ ಭವಿಷ್ಯವೇ ಇರುವುದಿಲ್ಲ ಎಂದು ಎಚ್ಚರಿಸಿದರು.

ಗ್ರಾಮಪಂಚಾಯ್ತಿ ನೌಕರರ ಸಂಘದ ರಾಜ್ಯ ಖಜಾಂಚಿ ಆರ್.ಎಸ್. ಬಸವರಾಜ ಕಾರ್ಯಕ್ರಮದಲ್ಲಿ ಮಾತನಾಡಿ ರಾಜ್ಯದ ಸಿದ್ದರಾಮಯ್ಯ ಸರಕಾರ ಕನಿಷ್ಟ ವೇತನ ನಿಗದಿ ಮಾಡುವಲ್ಲಿ ಮಾಲಿಕರ ತಾಳಕ್ಕೆ ಕುಣಿಯುತ್ತಿದೆ. ಗ್ರಾಮಪಂಚಾಯ್ತಿ ನೌಕರರಿಗೆ ಬಡ್ತಿ ನೀಡುವಲ್ಲಿ, ಅನುದಾನ ನೀಡುವಲ್ಲಿ ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು. ವೇದಿಕೆಯಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ ಮಹಾಂತೇಶ, ಸಿಐಟಿಯು ಜಿಲ್ಲಾ ಅ ಧ್ಯಕ್ಷ ಕೆ.ಎಲ್. ಭಟ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಮೂರ್ತಿ, ಔಷಧಿ ಮಾರಾಟ ಪ್ರತಿನಿಧಿಗಳ ಸಂಘದ ರಾಜ್ಯ ಕಾರ್ಯದರ್ಶಿ ಆನಂದರಾಜ್, ಕಟ್ಟಡ ಕಾರ್ಮಿಕ ಸಂಘದ ತಾಲೂಕು ಅಧ್ಯಕ್ಷ ತಿಮ್ಮಣ್ಣ ಹೊನ್ನೂರು, ಬೀಡಿ ಕಾರ್ಮಿಕರ ಸಂಘಧ ಜಿಲ್ಲಾ ಅಧ್ಯಕ್ಷ ಓಬೇದುಲ್ಲಾ, ಗ್ರಾ, ಪಂಚಾಯಿತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೈದಾಳ ಉಮೇಶ ಉಪಸ್ಥಿತರಿದ್ದರು. ಉದ್ಘಾಟನೆ ಕಾರ್ಯಕ್ರಮಕ್ಕಿಂತ ಮುನ್ನ ಜಯದೇವ ವೃತ್ತದಿಂದ ನೂರಾರು ಕಾರ್ಮಿಕರು ಸಮ್ಮೇಳನ ನಡೆಯುವ ರೋಟರಿ ಬಾಲಭವನದ ವರೆಗೆ ಮೆರವಣಿಗೆ ನಡೆಸಿದರು.

ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಮೂರ್ತಿ ಎರಡನೇ ದಿನ ಮಂಡಿಸಿದ ಕರಡು ವರದಿ ಮೇಲೆ 12 ಸಂಗಾತಿಗಳು ಭಾಗವಹಿಸಿ ಮಾತನಾಡಿದರು. ನಂತರದಲ್ಲಿ ಸಮ್ಮೇಳನವು ಸೆಪ್ಟೆಂಬರ್ 2 ರ ಸಾರ್ವತ್ರಿಕ ಮುಷ್ಕರ ಯಶಸ್ವಿ ಸೇರಿದಂತೆ ಹಲವು ನಿರ್ಣಯಗಳನ್ನು ಅಂಗೀಕರಿಸಿತು. ಅಲ್ಲದೆ ಸಮ್ಮೇಳನವು ಮುಂದಿನ ಮೂರು ವರ್ಷಗಳ ಅವಧಿಗೆ ಒಟ್ಟು 15 ಜನ ನೂತನ ಜಿಲ್ಲಾ ಪದಾಧಿಕಾರಿಗಳನ್ನು ಸರ್ವನುಮತದಿಂದ ಆಯ್ಕೆ ಮಾಡಲಾಯಿತು. ಸಮ್ಮೇಳನದ ಸಮಾರೋಪ ಸಮಾರಂಭವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ ಮಹಾಂತೇಶ ನೆರವೇರಿಸಿ ಮಾತನಾಡಿ ದಾವಣಗೆರೆ ಜಿಲ್ಲೆಯಲ್ಲಿ ಎಡ ಚಳವಳಿಗೆ ತನ್ನದೆ ಆದ ಇತಿಹಾಸ ವಿದ್ದರೂ ಅದೀಗ ಜನರಿಂದ ದೂರವಾಗಿದೆ. ಇಂತಹ ಸನ್ನಿವೇಶದಲ್ಲಿ ಒಂದು ಕ್ರಾಂತಿಕಾರಿ ಕಾರ್ಮಿಕ ಚಳವಳಿಯನ್ನು ಸರಿಯಾದ ನಿಟ್ಟಿನಲ್ಲಿ ಕಟ್ಟುವ ಕೆಲಸ ಮಾಡಬೇಕಿದೆ. ದಾವಣಗೆರೆ ಜಿಲ್ಲೆಯಲ್ಲಿ ಸಿಐಟಿಯು ನೇತೃತ್ವದಲ್ಲಿರುವ ಹತ್ತು ಕಾರ್ಮಿಕ ಸಂಘಟನೆಗಳ ಶಕ್ತಿಯನ್ನು ಮುಂದಿನ ದಿನಗಳಲ್ಲಿ ಕ್ರೋಡಿಕರಿಸಿ ಮತ್ತಷ್ಟು ಚಳವಳಿ ವಿಸ್ತರಣೆಯತ್ತ ಮುಖಂಡರು ಗಮನ ನೀಡಬೇಕು ಎಂದು ಕರೆ ನೀಡಿದರು.


ಶ್ರೀನಿವಾಸ್ ಮೂರ್ತಿ


ಆನಂದರಾಜ್


ಉಮೇಶ ಕೈದಾಳ

ಶ್ರೀನಿವಾಸ್ ಮೂರ್ತಿ ಅಧ್ಯಕ್ಷರಾಗಿ, ಆನಂದರಾಜ್ ಪ್ರಧಾನ ಕಾರ್ಯದರ್ಶಿಗಳಾಗಿ, ಉಮೇಶ ಕೈದಾಳ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ವರದಿ: ಕೆ.ಹೆಚ್. ಆನಂದರಾಜ್

ಅಹಮದಾಬಾದಿನಿಂದ ಉನಾದತ್ತ: 'ದಲಿತ ಅಸ್ಮಿತಾ ಯಾತ್ರಾ'
ಆಗಸ್ಟ್ 15: ಉನಾ ಸೌಹಾರ್ದ ಕಾರ್ಯಾಚರಣೆಗೆ ಡಿಎಸ್ಎಂಎಂ ಕರೆ





'ಸತ್ತ ಪಶುಗಳು ನಿಮಗೇ ಇರಲಿ, ನಮಗೆ ಜಮೀನು ಕೊಡಿ'
'ಅದಾಣಿ–ಅಂಬಾನಿಗೆ ಪುಕ್ಕಟೆ ಕೊಟ್ಟಿದ್ದೀರಾ, ನಮಗೇಕೆ ಸಾಧ್ಯವಿಲ್ಲ?'

ಹಿಂದುತ್ವದ ಪ್ರಯೋಗ ಭೂಮಿ, ಇಂದಿನ ಪ್ರಧಾನ ಮಂತ್ರಿಗಳ 'ಮಾದರಿ' ರಾಜ್ಯಲೀಗ ಹೊಸದೊಂದು ಪ್ರಯೋಗಕ್ಕೆ ಅಣಿಯಾಗಿದೆ. ಗುಜರಾತಿನ ಅಹಮದಾಬಾದಿನಲ್ಲಿ ಆಗಸ್ಟ್ 5ರಂದು ಸುಮಾರು 800 ದಲಿತ ಕಾರ್ಯಕರ್ತರು ತಮ್ಮ 'ದಲಿತ ಅಸ್ಮಿತಾ ಯಾತ್ರಾ" ಆರಂಭಿಸಿದ್ದಾರೆ. ಇದೊಂದು ಮಹತ್ವದ ಬೆಳವಣಿಗೆ. 'ಮನುವಾದದಿಂದ ಸ್ವಾತಂತ್ರ್ಯ', 'ಬಂಡವಾಳಶಾಹಿಯಿಂದ ಸ್ವಾತಂತ್ರ್ಯ' ಎಂಬ ಈ ಮೊದಲು ವಿದ್ಯಾರ್ಥಿಗಳು ಎತ್ತಿದ ಘೋಷಣೆಗಳ ನಡುವೆ ವಾಲ್ಮೀಕಿ ಸಮುದಾಯದ ಹೆಣ್ಣು ಮಕ್ಕಳು ನೀಲಿ ಬಾವುಟ ತೋರಿಸುವುದರೊಂದಿಗೆ ನಗರದ ವೆಜಾಲ್‌ಪುರದಿಂದ ಹೊರಟ ಅವರು ಸುಮಾರು 380 ಕಿ.ಮೀ.ಗಳಷ್ಟು ನಡೆದು ಹಿಂದುತ್ವದ ದಲಿತ–ವಿರೋಧಿ ಅಮಾನುಷ ಸ್ವರೂಪವನ್ನು ಜಗಜ್ಜಾಹೀರುಗೊಳಿಸಿದ ಉನಾವನ್ನು ಆಗಸ್ಟ್ 15ರಂದು, ಸ್ವತಂತ್ರ ಭಾರತ 70ನೇ ವರ್ಷಕ್ಕೆ ಕಾಲಿಡುವ ದಿನದಂದು ತಲುಪಲಿದ್ದಾರೆ. 'ಸಮಾನತೆ ಮತ್ತು ಸೋದರತ್ವವಿಲ್ಲದೆ ಸ್ವಾತಂತ್ರ್ಯ ಇಲ್ಲ' ಎಂಬ ಡಾ. ಅಂಬೇಡ್ಕರ್ ಅವರ ಎಚ್ಚರಿಕೆಯನ್ನು ನೆನಪಿಸುತ್ತ ತ್ರಿವರ್ಣ ಬಾವುಟವನ್ನು ಹಾರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಈ ಪಾದಯಾತ್ರೆಯನ್ನು ಬೆಂಬಲಿಸುತ್ತ 'ದಲಿತ ಶೋಷಣ ಮುಕ್ತಿ ಮಂಚ್'(ಡಿಎಸ್ಎಂಎಂ) ಆಗಸ್ಟ್ 15ರಂದು ದೇಶಾದ್ಯಂತ ಮೆರವಣಿಗೆ, ಧರಣಿ ಮುಂತಾದವುಗಳ ಮೂಲಕ 'ಉನಾ ಸೌಹಾರ್ದ ಕಾರ್ಯಕ್ರಮ'ಗಳನ್ನು ನಡೆಸಬೇಕು ಎಂದು ತನ್ನ ಎಲ್ಲ ಸಂಯೋಜಿತ ಸಂಘಟನೆಗಳಿಗೆ ಕರೆ ನೀಡಿದೆ.

"ಈ ಪಾದಯಾತ್ರೆ ದೇಶಾದ್ಯಂತ ದಲಿತರನ್ನು ಶತಮಾನಗಳ ಕಟ್ಟಳೆಗಳಿಂದ ವಿಮುಕ್ತಗೊಳಿಸುವತ್ತ ಮೊದಲ ಹೆಜ್ಜೆ, ಉನಾಕ್ಕೆ ಹೋಗುವ ದಾರಿಯುದ್ದಕ್ಕೂ ನಾವು ಸತ್ತ ಪ್ರಾಣಿಗಳನ್ನು ಎತ್ತುವ ತಮ್ಮ ಪೂರ್ವಿಕರ ಕಾಯಕವನ್ನು ತ್ಯಜಿಸಿ, ಆಮೂಲಕ ಸರಕಾರಕ್ಕೆ ಒಂದು ಬಲವಾದ ಸಂದೇಶವನ್ನು ರವಾನಿಸಬೇಕು ಎಂದು ದಲಿತ ಸಮುದಾಯದವರನ್ನು ವಿನಂತಿಸಿಕೊಳ್ಳುತ್ತೇವೆ." ಎಂದು ಈ ಪಾದಯಾತ್ರೆಯ ಸಂಘಟಕರಲ್ಲಿ ಪ್ರಮುಖರಾದ ಜಿಗ್ನೇಶ್ ಮೆವಾಣಿ ಹೇಳಿದ್ದಾರೆ.

ದಾರಿಯುದ್ದಕ್ಕೂ ನಡೆದಿರುವ ಹಲವು ಸಣ್ಣ–ದೊಡ್ಡ ಸಭೆಗಳಲ್ಲಿ ಈ ಕುರಿತು ಪ್ರತಿಜ್ಞೆಗಳನ್ನು ಬೋಧಿಸಲಾಗಿದೆ.

ಪ್ರತಿಯೊಂದು ಕಡೆಯಲ್ಲಿ ನೂರಾರು ಮಂದಿ ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೆಲವೆಡೆಗಳಲ್ಲಿ 'ಗೋವು ನಿಮ್ಮ ತಾಯಿಯಾದರೆ, ನೀವೇ ಅದರ ಅಂತ್ಯಕ್ರಿಯೆ ನಡೆಸಿ' ಎಂಬ ಘೋಷಣೆ ಕೇಳಬಂದರೆ, ಇನ್ನು ಕೆಲವೆಡೆಗಳಲ್ಲಿ 'ಗೋವು ನಿಮ್ಮ ತಾಯಿಯಾದರೆ ಗೂಳಿ ನಿಮ್ಮ ತಂದೆ' ಎಂದ ಘೋಷಣೆಗಳೂ ಕೇಳ ಬಂದಿವೆ.



ಈ ಪಾದಯಾತ್ರೆಯ ವೇಳೆಯಲ್ಲಿ ದಲಿತರಿಗೆ ಕೃಷಿ ಭೂಮಿಯನ್ನು ಕೊಡಬೇಕು ಎಂಬ ಬೇಡಿಕೆಯನ್ನು ಎತ್ತಲು ಪ್ರಯತ್ನಿಸುತ್ತೇವೆ, ಇದಕ್ಕೆ ಸಂಬಂಧಪಟ್ಟಂತೆ ಅರ್ಜಿಫಾರಂಗಳನ್ನು ಹಂಚುತ್ತೇವೆ, ದಲಿತರು ಸತ್ತ ಪಶುಗಳನ್ನು ಎತ್ತುವ ಅಥವ ಚರಂಡಿ ತೊಳೆಯುವ ಕೆಲಸ ಮುಂದುವರೆಸ ಬಯಸುವುದಿಲ್ಲವಾದ್ದರಿಂದ ಸರಕಾರ ಅವರಿಗೆ ಕೃಷಿ ಭೂಮಿಯನ್ನು ಒದಗಿಸಿ ಘನತೆಯಿಂದ ಬದುಕಲು ಅವಕಾಶ ಮಾಡಿಕೊಡಬೇಕು, ಇದಕ್ಕೆ ಸಂಬಂಧಪಟ್ಟ ಅರ್ಜಿಫಾರಂಗಳನ್ನು ಸಂಗ್ರಹಿಸಿ ಈ ಯಾತ್ರೆಯ ನಂತರ ಸರಕಾರಕ್ಕೆ ಸಲ್ಲಿಸುತ್ತೇವೆ ಎಂದು ಮೆವಾಣಿ ತಿಳಿಸಿದ್ದಾರೆ.

ದಲಿತರು ನೂರಾರು ವರ್ಷಗಳಿಂದ ಮಾಡಿಕೊಂಡು ಬಂದಿರುವ ಈ ಕೆಲಸಗಳನ್ನು ಬಿಡಲು ಸಾಧ್ಯವೇ ಎಂದು ಈಗ ವಕೀಲರಾಗಿರುವ 35 ವರ್ಷದ ಜಿಗ್ನೇಶ್ ಮೆವಾಣಿಯವರನ್ನು ಕೇಳಿದಾಗ, ನಿಜ, ಇದು ಬಹಳ ಕಷ್ಟದ ಕೆಲಸ, ನನ್ನ ತಂದೆ ಕೂಡ ಇದನ್ನೇ ಮಾಡುತ್ತಿದ್ದರು, ಹೆಚ್ಚಿನ ದಲಿತ ಕುಟುಂಬಗಳಿಗೆ ಇದು ಏಕಮಾತ್ರ ಆದಾಯದ ಮೂಲ, ಇದನ್ನು ಎಸೆದು ಬಿಟ್ಟು ಗೌರವಯುತ ಪರ್ಯಾಯವನ್ನು ಕೇಳುವುದು ಕಷ್ಟ, ಆದರೂ ಇದನ್ನು ಒಂದು ಆಂದೋಲನದ ಮೂಲಕ ಗಳಿಸಲೇ ಬೇಕು ಎಂದು ದೃಢ ನಿರ್ಧಾರ ಮಾಡಿದ್ದೇವೆ, ದಲಿತರ ಅಸ್ತಿತ್ವ ಇಂತಹ ವಿಮುಕ್ತಿ ಯೊಂದಿಗೇ ಬೆಸೆದುಕೊಂಡಿದೆ ಎಂದು ಅವರು ಹೇಳುತ್ತಾರೆ.

ಗುಜರಾತ್ ಭೂಮಿತಿ ಕಾನೂನಿನಲ್ಲಿ ಪ್ರತಿ ದಲಿತ ಕುಟುಂಬಕ್ಕೆ ಐದು ಎಕ್ರೆ ಭೂಮಿ ಕೊಡಬೇಕೆಂಬ ಅಂಶ ಇದೆ. ಇದನ್ನು ಕೂಡಲೇ ಜಾರಿಗೆ ತರಬೇಕು. ಅದಾಣಿಗೆ, ಅಂಬಾನಿಗೆ, ಎಸ್ಸಾರ್‌ಗೆ ಸುಮಾರಾಗಿ ಪುಕ್ಕಟೆಯಾಗಿಯೇ ಜಮೀನು ಕೊಡುವ ಸರಕಾರಕ್ಕೆ ಖಂಡಿತ ಇದು ಅಸಾಧ್ಯವೇನಲ್ಲ ಎನ್ನುವ ಮೆವಾಣಿ. ಇದನ್ನು ಪಡೆಯುವಲ್ಲಿ ತಮಗೆ ಎಲ್ಲ ಭಾರತೀಯರ, ಜಾತ್ಯಾತೀತರ, ಅವರು ಗಾಂಧಿವಾದಿಗಳಾಗಿರಲಿ, ಕಮುನಿಸ್ಟ ರಾಗಿರಲಿ, ಸ್ತ್ರೀವಾದಿಗಳಗಿರಲಿ, ಎನ್‌ಜಿಒಗಳಿರಲಿ ಎಲ್ಲರ ಬೆಂಬಲ ಬೇಕು ಎಂದು ಮನವಿ ಮಾಡಿ ಕೊಳ್ಳುತ್ತಾರೆ. 'ಮರೇಲಾ ಪಶೂ ತಮ್ಹೇ ರಾಖೋ, ಅಮ್ನೇ ಜಮೀನ್ ಆಪೊ'(ಸತ್ತ ಪಶುಗಳು ನಿಮಗೇ ಇರಲಿ, ನಮಗೆ ಜಮೀನು ಕೊಡಿ) ಎಂಬ ಘೋಷಣೆ ಈ ಆಂದೋಲನದ ಚಾಲಕ ಶಕ್ತಿ, ನಮ್ಮದು ಜಾತಿವಾದ ಮತ್ತು ಜಾಗತೀಕರಣದ ವಿರುದ್ಧದ ಹೋರಾಟ ಎಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ.



ನಮ್ಮದು ಜಾತಿವಾದ ಮತ್ತು ಜಾಗತೀಕರಣದ ವಿರುದ್ಧದ ಹೋರಾಟ ಎಂದು ಜಿಗ್ನೇಶ್ ಮೆವಾಣಿ ಹೇಳುತ್ತಾರೆ.

ಪಾದಯಾತ್ರೆಯ ಬೇಡಿಕೆಗಳು

'ಗುಜರಾತ ಅಭಿವೃದ್ಧಿ ಮಾದರಿ' ಬಗ್ಗೆ ಕೇಳಿದಾಗ ಅದು ನಮಗೆ ವಂಚನೆ ಮಾಡಿದೆ, ಹತಾಶರಾಗಿಸಿದೆ, ಆದ್ದರಿಂದಲೇ ಈ ದಮನಕಾರಿ ಸಾಂಸ್ಕೃತಿಕ ಮತ್ತು ಸಾಮಾಜಿಕ ಆಚರಣೆಗಳನ್ನು ಕೊನೆಗೊಳಿಸಬೇಕು ಎಂದು ಆಗ್ರಹಿಸುತ್ತಿದ್ದೇವೆ ಎನ್ನುವ ಈ 'ದಲಿತ ಅಸ್ಮಿತಾ ಯಾತ್ರಾ'ವನ್ನು ಸಂಘಟಿಸಿರುವ ಸುಮಾರು ಮೂವತ್ತು ಸಂಘಟನೆಗಳು ಒಟ್ಟಾಗಿ ಸರಕಾರದ ಮುಂದಿಟ್ಟಿರುವ ಬೇಡಿಕೆಗಳು ಹೀಗಿವೆ:

1. ಸಮಾಜ–ವಿರೋಧಿ ಕೃತ್ಯಗಳ ತಡೆ ಕಾಯ್ದೆ(ಪಿಎಎಸ್ಎ)ಯನ್ನು ಜುಲೈ11ರ ಉನಾ ದಲಿತರ ಮೇಲಿನ ಅತ್ಯಾಚಾರ, ಅವಮಾನದ ಎಲ್ಲ ಆಪಾದಿತರಿಗೆ ಅನ್ವಯಿಸಿ, ಆಮೂಲಕ ಜಾಮೀನಿನಲ್ಲಿ ಬಿಡುಗಡೆಯಾದಾಗ ಮತ್ತೆ ಬಂಧಿಸಬೇಕು. ಇತರ ಎಲ್ಲ ಆಪಾದಿತರನ್ನು ತಕ್ಷಣವೇ ಬಂಧಿಸಬೇಕು.
2. ಜುಲೈ11ರಂದು ದಲಿತ ಚರ್ಮಕಾರರ ಅವಮಾನ ಮತ್ತು ಬೆತ್ತದೇಟಿನಲ್ಲಿ ಶಾಮೀಲಾದ ಪೋಲೀಸ್ ಅಧಿಕಾರಿಗಳ ಮೇಲೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಮತ್ತು ಅವರನ್ನು ಕ್ರಿಮಿನಲ್ ಪಿತೂರಿ ಮತ್ತು ಅತ್ಯಾಚಾರ ಕಾಯ್ದೆಯಡಿಯಲ್ಲಿ ವಿಚಾರಣೆಗೆ ಗುರಿಪಡಿಸಬೇಕು.
3. ಜುಲೈ 31 ರಂದು 70–80 ದಲಿತರ ವಿರುದ್ಧದ ಕ್ಷುಲ್ಲಕ ದೂರುಗಳನ್ನು ತ್ವರಿತವಾಗಿ ತಕ್ಷಣವೇ ಹಿಂತೆಗೆದುಕೊಳ್ಳಬೇಕು–ಕೇವಲ ಚಳುವಳಿ ಮಾಡಿದ್ದಕ್ಕೆ, ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕೆ ಥೋಡ್ಕ ಒಂದರಲ್ಲೇ 43 ಕ್ಷುಲ್ಲಕ ದೂರುಗಳನ್ನು ಪೋಲಿಸರು ಹಾಕಿದ್ದಾರೆ.
4. 2012ರಲ್ಲಿ ಕೇವಲ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ದಲಿತರನ್ನು ಕೊಲ್ಲುವುದಕ್ಕಾಗಿಯೇ ಎಕೆ–47ಗಳನ್ನು ಬಳಸಿದ ಪೋಲೀಸ್ ಅಧಿಕಾರಿಗಳ ಮೇಲಿನ ಆಪಾದನೆಗಳ ತನಿಖೆಯನ್ನು ತ್ವರಿತಗೊಳಿಸಬೇಕು. ಈಗ ನಾಲ್ಕು ವರ್ಷಗಳಾದರೂ ತನಿಖಾ ವರದಿಯನ್ನು ಸಾರ್ವಜನಿಕಗೊಳಿಸಿಲ್ಲ, ಆರೋಪ ಪತ್ರಗಳನ್ನೂ ಹಾಕಿಲ್ಲ.
5. ಅತ್ಯಾಚಾರಗಳ ತಡೆ ಕಾಯ್ದೆಯ ಅಡಿಯಲ್ಲಿ ರಚಿಸಲೇ ಬೇಕಾದ ವಿಶೇಷ ನ್ಯಾಯಾಲಯಗಳನ್ನು ಗುಜರಾತ್ ರಾಜ್ಯದ ಎಲ್ಲ 25 ಜಿಲ್ಲೆಗಳಲ್ಲಿ ರಚಿಸಬೇಕು.
6. ಅತ್ಯಾಚಾರ ತಡೆ ಕಾಯ್ದೆಯ ಸೆಕ್ಷನ್ 3(1) (ಎಫ್) ಅಡಿಯಲ್ಲಿ ಕೊಡಬೇಕಾದ ಐದು ಎಕ್ರೆ ನಿವೇಶನಗಳನ್ನು ಕಾನೂನಿನಂತೆ, ನ್ಯಾಯಯುತವಾಗಿ ನೀಡಬೇಕು.
7. ಗುಜರಾತಿನಲ್ಲಿ ಎಲ್ಲ ನಗರಪಾಲಿಕೆಗಳು ಸಫಾಯಿ ಕರ್ಮಚಾರಿಗಳಿಗೆ ಆರನೇ ವೇತನ ಆಯೋಗದ ಶಿಫಾರಸಿಗೆ ಸಮನಾದ ವೇತನಗಳನ್ನು ಕೊಡಬೇಕು.
8. ತಕ್ಷಣವೇ ಗುಜರಾತಿನಲ್ಲಿ ಒಂದು ಮೀಸಲಾತಿ ಕಾಯ್ದೆಯನ್ನು ತರಬೇಕು. ಈಗ ಗುಜರಾತಿನಲ್ಲಿ ಎಲ್ಲ ಮೀಸಲಾತಿ ಕ್ರಮಗಳನ್ನು ಕಾರ್ಯಾಂಗದ ಮರ್ಜಿಯಂತೆ ಕೊಡಲಾಗುತ್ತದೆ ಅಥವ ಸರಕಾರದ ನಿರ್ಣಯ(ಜಿಆರ್)ದ ಮೂಲಕವಷ್ಟೇ ಜಾರಿಗೊಳಿಸಲಾಗುತ್ತಿದೆ.
9. ಪರಿಶಿಷ್ಟ ಜಾತಿಗಳು/ಬುಡಕಟ್ಟುಗಳಿಗೆ ಬಜೆಟಿನಲ್ಲಿ ಮೀಸಲಿಟ್ಟ ಹಣವನ್ನು ಅದಕ್ಕಾಗಿ ಮಾತ್ರವೇ ಬಳಸಬೇಕು, ಗುಜರಾತ ಸರಕಾರ ಅದನ್ನು ಬೇರೆ ಬಾಬ್ತುಗಳಿಗೆ ತಿರುಗಿಸುತ್ತಿದೆ.
10. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಹಿಂದೂಧರ್ಮದ ಕುರಿತ ತೀವ್ರಗಾಮಿ ಚಿಂತನೆಗಳ ಬಗ್ಗೆ ಹೇಳಿರುವ ಮತ್ತು 1956ರಲ್ಲಿ ಬೌದ್ಧಧರ್ಮಕ್ಕೆ ಪರಿವರ್ತನೆಗೆ ಕೈಗೊಂಡ 22ಅಂಶಗಳ ಪ್ರತಿಜ್ಞೆಯ ಬಗ್ಗೆ ಹೇಳಿರುವ ಪುಸ್ತಕವನ್ನು ಹಿಂತೆಗೆದು–ಕೊಂಡು ಮೂಲೆಗುಂಪು ಮಾಡಿದ ಬಗ್ಗೆ ಗುಜರಾತ್ ಸರಕಾರ ದೇಶದ ದಲಿತರ ಮುಂದೆ ಸಾರ್ವಜನಿಕವಾಗಿ ಕ್ಷಮೆ ಕೋರಬೇಕು.

ಈ ಬೇಡಿಕೆಗಳಲ್ಲದೆ ಗುಜರಾತದಲ್ಲಿ ಆದಿವಾಸಿಗಳು ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಭೂಮಿಗಾಗಿ ಹಾಕಿರುವ 1.2ಲಕ್ಷ ಅರ್ಜಿಗಳನ್ನು ಹಾಕಿದ್ದು, ಅವರಿಗೆ ಶೀಘ್ರವಾಗಿ ಭೂಮಿ ವಿತರಣೆ ಮಾಡಬೇಕು, ಗುಜರಾತಿನಲ್ಲಿ ದಲಿತರಿಗೆ ಸುರಕ್ಷತೆ ಒಂದು ದೊಡ್ಡ ಪ್ರಶ್ನೆಯಾಗಿದ್ದು ಆತ್ಮರಕ್ಷಣೆಗೆ ಶಸ್ತ್ರಗಳನ್ನು ಇಟ್ಟುಕೊಳ್ಳಲು ದಲಿತರಿಗೆ ಪರವಾನಿಗೆ ಕೊಡಬೇಕು, ಖೇಲ್(ಕ್ರೀಡಾ) ಮಹಾಕುಂಭ್ ವೇಳೆಯಲ್ಲಿ ಇತರ ಜಾತಿಗಳು ಮತ್ತು ಸಮುದಾಯಗಳಿಗೆ ಕದನ ಕಲೆಗಳನ್ನು ಕಲಿಸಲು 'ತಾಲೀಮ್'(ತರಬೇತಿ) ಕೇಂದ್ರಗಳಿರುವಂತೆ ದಲಿತರಿಗೂ ತೆರೆಯಬೇಕು, ದಲಿತರು ಸಾಮಾಜಿಕ ಬಹಿಷ್ಕಾರವನ್ನು ಮೀರಿ ನಿಲ್ಲಲು ಸಾಧ್ಯವಾಗುವಂತೆ ದಲಿತರಿಗೆ 'ಸ್ಮಾರ್ಟ್ ಕೇಂದ್ರ'ಗಳನ್ನು ತೆರೆಯಬೇಕು ಹಾಗೂ ನರೇಂದ್ರ ಮೋದಿಯವರ 'ಸ್ಟಾರ್ಟ್ ಅಪ್' ನಲ್ಲಿ ತಮಗೆ ಪರಂಪರೆಯಿಂದ ವಿಧಿಸಿರುವ ಕೀಳಾಗಿ ಕಾಣುವ ವೃತ್ತಿಗಳನ್ನು ಬಿಟ್ಟು ಗೌರವಪೂರ್ಣ ದುಡಿಮೆಯಲ್ಲಿ ತೊಡಗಬಯಸುವ ದಲಿತರಿಗೆ ವಿಶೇಷ ಆರ್ಥಿಕ ಅವಕಾಶಗಳನ್ನು ಒದಗಿಸಬೇಕು ಎಂಬ ಬೇಡಿಕೆಗಳನ್ನೂ ಈ ಪಾದಯಾತ್ರೆ ಮುಂದಿಟ್ಟಿದೆ. ■

ನವ–ಉದಾರವಾದ, ಕೋಮುವಾದದ ವಿರುದ್ಧ ಹೋರಾಟದ ದೃಢನಿರ್ಧಾರವೇ ಈ ಸ್ವಾತಂತ್ರ್ಯ ದಿನದ ಪಣವಾಗಲಿ



ಆಗಸ್ಟ್ 15ರ ಸ್ವಾತಂತ್ರ್ಯ ದಿನ ದೇಶದ ಉದ್ದಗಲದಲ್ಲಿ ಲಕ್ಷ–ಲಕ್ಷ ಜನರು ಬ್ರಿಟಿಷ್ ಆಡಳಿತದ ವಿರುದ್ಧ ನಡೆಸಿದ ಅಮೋಘ ಸ್ವಾತಂತ್ರ್ಯ ಹೋರಾಟವನ್ನು ನೆನಪಿಸಿಕೊಳ್ಳುವ ಸಂದರ್ಭವಾಗಿದೆ. ದೇಶವನ್ನು ಸ್ವತಂತ್ರಗೊಳಿಸುವ ಉದ್ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ನೂರಾರು ಸಾವಿರಾರು ಜನರಿಗೆ ಗೌರವ ಸಲ್ಲಿಸುವ ಒಂದು ಸಂದರ್ಭವಾಗಿದೆ.

ಈ ವರ್ಷದ ಆಗಸ್ಟ್ 15 ಸ್ವಾತಂತ್ರ್ಯದ 70ನೇ ವರ್ಷದ ಆರಂಭವನ್ನು ಸೂಚಿಸುತ್ತದೆ. ಸ್ವತಂತ್ರ ಭಾರತ ಈ ಏಳು ದಶಕಗಳಲ್ಲಿ ಸವೆಸಿದ ಹಾದಿ ಭಾರತದ ಜನತೆ, ಬಡತನ, ಆರ್ಥಿಕ ಮತ್ತು ಸಾಮಾಜಿಕ ಶೋಷಣೆಯಿಂದ ಮುಕ್ತವಾದ ಒಂದು ಗೌರವಯುತ ಜೀವನಕ್ಕಾಗಿ ನಡೆಸಿದ ಅವಿಶ್ರಾಂತ ಅನ್ವೇಷಣೆಯ ಪಯಣವಾಗಿದೆ. ಇದು ಇನ್ನೂ ಪೂರ್ಣಗೊಳ್ಳಬೇಕಾದ ಅನ್ವೇಷಣೆ.

ಸ್ವಾತಂತ್ರ್ಯ ದಿನ ವರ್ಷಾಚರಣೆಗೂ ಮುನ್ನ ಇನ್ನೊಂದು ರೀತಿಯ ವರ್ಷಾಚರಣೆಯನ್ನು ಕಂಡಿದ್ದೇವೆ. ಇದು 1991ರಲ್ಲಿ ಆರಂಭವಾದ ಉದಾರೀಕರಣದ 25ನೇ ವರ್ಷ ಪೂರ್ಣಗೊಂಡ ಸಂದರ್ಭವಾಗಿದೆ. ಇದು ದೊಡ್ಡ ಉದ್ಯಮಗಳು, ಕಾರ್ಪೊರೇಟ್‌ಗಳು ಹಾಗೂ ಆಳುವ ವಲಯಗಳಿಗೆ ಇನ್ನೊಂದು ರೀತಿಯ 'ಸ್ವಾತಂತ್ರ್ಯ'ದ ಅರುಣೋದಯ. ಉದಾರೀಕರಣ ಪ್ರಕ್ರಿಯೆ ಮತ್ತು ನವ–ಉದಾರವಾದಿ ಸುಧಾರಣೆಗಳು ದೇಶದ ಸಂಪತ್ತನ್ನು ಕೊಳ್ಳೆಹೊಡೆಯುವ, ಜನರಿಗೆ ಒದಗಿಸುವ ಮೂಲಭೂತ ಸೇವೆಗಳನ್ನು ಖಾಸಗೀಕರಿಸುವ 'ಸ್ವಾತಂತ್ರ್ಯ'ದ ಯುಗವನ್ನು ಆರಂಭಿಸಿತು. ಜನತೆಯನ್ನು ಸಂಕಷ್ಟಕ್ಕೆ ತಳ್ಳಿ ಗರಿಷ್ಟ ಲಾಭ ಮಾಡಿಕೊಳ್ಳುವ 'ಸ್ವಾತಂತ್ರ್ಯ'ದ ಯುಗವನ್ನು ತೆರೆಯಿತು.

ಈ 25 ವರ್ಷಗಳ ಬಲಪಂಥೀಯ ನವ–ಉದಾರವಾದಿ ಸುಧಾರಣೆಗಳು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ತೀವ್ರವಾಗಿ ಹೆಚ್ಚಿಸಿವೆ. ಸ್ವಾತಂತ್ರ್ಯದ ಜನಪ್ರಿಯ ಆಶೋತ್ತರಗಳನ್ನು ಹುಸಿಗೊಳಿಸಿವೆ. ನವ–ಉದಾರವಾದಿ ಸಿದ್ಧಾಂತವು ಸಾಮಾಜಿಕ ಬಂಧವನ್ನು ದುರ್ಬಲಗೊಳಿಸಿದೆ. ಜಾತಿ ಮತ್ತು ಕೋಮುವಾದಿ ಅಸ್ಮಿತೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ಹಿಂದುತ್ವವಾದಿ ಶಕ್ತಿಗಳು ಹೆಚ್ಚುವಂತೆ ಮಾಡಿವೆ. ಬೆಲೆಯೇರಿಕೆಯ ಭಾರ, ನಿರುದ್ಯೋಗ ಮತ್ತು ಕಾರ್ಮಿಕರು, ರೈತರು ಹಾಗೂ ದುಡಿಯುವ ಜನತೆಯ ಇತರ ವಿಭಾಗಗಳ ಜೀವನೋಪಾಯಕ್ಕೆ ಅಪಾಯ ಒದಗಿದ್ದು ಅದು ನವ–ಉದಾರವಾದಿ ನೀತಿಗಳನ್ನು ತೀಕ್ಷ್ಣವಾಗಿ ಅನುಸರಿಸಿರುವುದರ ಫಲವಾಗಿದೆ. ಧಾರ್ಮಿಕ ಅಲ್ಪಸಂಖ್ಯಾತರು, ದಲಿತರು ಮತ್ತು ಆದಿವಾಸಿಗಳ ಮೇಲೆ ಹೆಚ್ಚುತ್ತಿರುವ ದಾಳಿಗಳು ಮತ್ತು ಸಮಾಜದಲ್ಲಿನ ವಿಚ್ಛಿದ್ರಕಾರಿ ಬೆಳವಣಿಗೆಗಳು ಹಿಂದುತ್ವವಾದಿ ಶಕ್ತಿಗಳ ಆಕ್ರಮಣದ ಫಲವಾಗಿದೆ.

ಭಾರತದ ಸ್ವಾತಂತ್ರ್ಯವು 20ನೇ ಶತಮಾನದಲ್ಲಿ ಉತ್ತುಂಗವನ್ನು ತಲುಪಿದ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯವಾದದ ಒಂದು ಉತ್ಪನ್ನವಾಗಿದೆ. ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟದಲ್ಲಿ ಹಿಂದುತ್ವ ಬ್ರಾಂಡ್‌ನ ರಾಷ್ಟ್ರೀಯವಾದದ ಯಾವುದೇ ಪಾತ್ರವಿಲ್ಲ, ಹಾಗೆ ನೋಡಿದರೆ ಅದು ಆ ಹೋರಾಟಕ್ಕೆ ವಿರುದ್ಧವಾಗಿತ್ತು. ಆರ್‌ಎಸ್‌ಎಸ್ ಮತ್ತು ಇತರ ಕೋಮುವಾದಿ ಸಂಘಟನೆಗಳು ಮುಖ್ಯವಾಹಿನಿ ರಾಷ್ಟ್ರೀಯ ಚಳವಳಿಯ ಮುಖ್ಯವಾಹಿನಿಯಿಂದ ಹೊರಗೇ ಇದ್ದವು. ಬಿಜೆಪಿ ನೇತೃತ್ವದ ಸರಕಾರ ಅಧಿಕಾರದಲ್ಲಿರುವ ಈ ಸಂದರ್ಭದಲ್ಲಿ ಆ ಪರಂಪರೆ ಕಣ್ಣಿಗೆ ರಾಚುವಂತೆ ಎದ್ದು ಕಾಣುತ್ತಿದೆ. ಮೋದಿ ಸರಕಾರದ ಎರಡು ವರ್ಷಗಳ ಆಳ್ವಿಕೆಯಲ್ಲಿ ರಾಷ್ಟ್ರೀಯ ಸಮಗ್ರತೆ ಮತ್ತು ವಿದೇಶಾಂಗ ನೀತಿಯ ಸ್ವತಂತ್ರ ನೆಲೆಗಟ್ಟು ಶಿಥಿಲಗೊಂಡಿದೆ. ಅಮೆರಿಕದೊಂದಿಗೆ ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೊರಾಂಡಮ್ ಆಫ್ ಅಗ್ರಿಮೆಂಟ್ (ಎಲ್‌ಇಎಂಓಎ–ಮಿಲಿಟರಿ ಸಾಗಣೆ ವಿನಿಮಯೊಪ್ಪಂದ ಪತ್ರ)ಗೆ ಸಹಿ ಹಾಕಲು ಮೋದಿ ಸರಕಾರ ತುದಿಗಾಲ ಮೇಲೆ ನಿಂತಿದೆ. ಈ ಒಪ್ಪಂದ ಅಮೆರಿಕದ ಸಶಸ್ತ್ರ ಪಡೆಗಳು ಭಾರತೀಯ ಮಿಲಿಟರಿ ವ್ಯವಸ್ಥೆಯೊಳಗೆ ಬರಲು ಹಾಗೂ ಅದನ್ನು ಬಳಸಿಕೊಳ್ಳಲು ಕಾಯಂ ಅವಕಾಶ ಕಲ್ಪಿಸುತ್ತದೆ. ಇದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವನ್ನು ಒಂದು ಸಾಮ್ರಾಜ್ಯಶಾಹಿ ಶಕ್ತಿಗೆ ಒತ್ತೆಯಿಡುವುದಲ್ಲದೆ ಬೇರೇನೂ ಅಲ್ಲ.

ಸ್ವಾತಂತ್ರ್ಯ ದಿನವನ್ನು ಆಚರಿಸುವಾಗ, ದೇಶದ ಜನತೆಯ ಮುಖ್ಯ ವಿಭಾಗಗಳು ಬರ್ಬರ ದಬ್ಬಾಳಿಕೆಯನ್ನು ಎದುರಿಸುತ್ತಿದ್ದಾರೆ ಅಥವ ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾಗಿದೆ ಎಂಬುದು ವಿಷಣ್ಣಗೊಳಿಸುವ ವಿಚಾರ. ಕಾಶ್ಮೀರಿ ಜನತೆ ಭಾರತೀಯ ಪ್ರಭುತ್ವದ ವಿರುದ್ಧ ಸಾಮೂಹಿಕವಾಗಿ ಬಂಡೆದ್ದಿದೆ. ದೇಶಾದ್ಯಂತ ದಲಿತರು ಪವಿತ್ರ ಗೋವಿನ ಹೆಸರಿನಲ್ಲಿ ತಮ್ಮ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನು ಪ್ರತಿಭಟಿಸುತ್ತಿದ್ದಾರೆ. ಒಡಿಶಾದ ಕಂದಮಲ್ ಜಿಲ್ಲೆಯಲ್ಲಿ ಮಾವೋವಾದಿಗಳು ಎಂದು ಹಣೆಪಟ್ಟಿ ಕಟ್ಟಿ ಒಂದು ತಿಂಗಳ ಹಿಂದೆ ಮೂವರು ಮಹಿಳೆಯರು ಹಾಗೂ ಎರಡು ವರ್ಷದ ಒಂದು ಮಗು ಸೇರಿದಂತೆ ಐದು ಆದಿವಾಸಿಗಳನ್ನು ಗುಂಡಿಟ್ಟು ಕೊಂದಿದ್ದು ಪ್ರಭುತ್ವವು ಆದಿವಾಸಿ ಜನರ ಮೇಲೆ ಯುದ್ಧವನ್ನು ಸಾರಿರುವುದನ್ನು ಘೋರವಾಗಿ ನೆನಪಿಸುವಂತಿದೆ. ಅವರ ಭೂಮಿ ಮತ್ತು ಅರಣ್ಯಗಳನ್ನು ಕಿತ್ತುಕೊಳ್ಳಲು ಅದು ಪಣತೊಟ್ಟಂತಿದೆ.

ಈ ರೀತಿಯಾಗಿ ಸ್ವಾತಂತ್ರ್ಯವು ಧ್ವಂಸಕಾರೀ ನವ–ಉದಾರವಾದಿ ಮತ್ತು ಕೋಮುವಾದಿ ಶಕ್ತಿಗಳಿಂದ ಅಪಾಯಕ್ಕೆ ಒಳಗಾಗಿದೆ. ಈ ಬಲಪಂಥೀಯ ಶಕ್ತಿಗಳನ್ನು ಸೋಲಿಸಲು ಪಣ ತೊಡುವುದೇ ಈ ಸ್ವಾತಂತ್ರ್ಯ ದಿನದಂದು ತೆಗೆದುಕೊಳ್ಳಬೇಕಾದ ಶಪಥವಾಗಿದೆ. ಒಂದು ಸ್ವತಂತ್ರ, ಪ್ರಜಾಸತ್ತಾತ್ಮಕ, ಜಾತ್ಯತೀತ ಮತ್ತು ಶೋಷಣೆ–ಮುಕ್ತ ಸಮಾಜದ ಸ್ವಾತಂತ್ರ್ಯ ಹೋರಾಟದ ನೈಜ ಗುರಿಯನ್ನು ಸಾಕಾರಗೊಳಿಸಲು ಇದು ಹಾದಿ ಮಾಡಿಕೊಡಬೇಕು.

ಸ್ವಾತಂತ್ರ್ಯದ 70ನೇ ವರ್ಷದ ಆರಂಭವನ್ನು ಸೂಚಿಸುವ ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಸ್ವಲ್ಪವೇ ಮುನ್ನ ಆಳುವ ವರ್ಗಗಳು ದೇಶದ ಸಂಪತ್ತನ್ನು ಕೊಳ್ಳೆಹೊಡೆಯುವ, ಜನರಿಗೆ ಒದಗಿಸುವ ಮೂಲಭೂತ ಸೇವೆಗಳನ್ನು ಖಾಸಗೀಕರಿಸುವ 'ಸ್ವಾತಂತ್ರ್ಯ'ದ ಬೆಳ್ಳಿಹಬ್ಬವನ್ನು ಆಚರಿಸಿದ್ದಾರೆ. ಇನ್ನೊಂದೆಡೆಯಲ್ಲಿ ರಾಷ್ಟ್ರೀಯ ಚಳವಳಿಯ ಮುಖ್ಯವಾಹಿನಿಯಿಂದ ಹೊರಗೇ ಇದ್ದ ಕೋಮುವಾದಿಗಳು ಅಧಿಕಾರ ಪಡೆದಿದ್ದಾರೆ. ಈ ಧ್ವಂಸಕಾರೀ ಬಲಪಂಥೀಯ ಶಕ್ತಿಗಳನ್ನು ಸೋಲಿಸಲು ಪಣ ತೊಡುವುದೇ ಈ ಸ್ವಾತಂತ್ರ್ಯ ದಿನದಂದು ತೆಗೆದುಕೊಳ್ಳಬೇಕಾದ ಶಪಥವಾಗಿದೆ.

*** ಪ್ರಕಾಶ್ ಕಾರಟ್**



ಸಿನಿಮೀಯ ಡೈಲಾಗ್‌ಗಳಿಂದ, ಒಣ ಮಂತ್ರಗಳಿಂದ ಪರಿಹಾರ ಸಾಧ್ಯವಿಲ್ಲ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಪುಟ 2 ರಿಂದ

ಬಗ್ಗೆಯಾಗಲೀ ದೇಶದ ಸಂಸತ್ತಿನಲ್ಲಿ ಏನೂ ಹೇಳುವ ಗೋಜಿಗೆ ಹೋಗಿಲ್ಲ.

"ಪ್ರತಿಯೊಬ್ಬ ಭಾರತೀಯ ಕಾಶ್ಮೀರವನ್ನು ಪ್ರೀತಿಸುತ್ತಾನೆ. ಪ್ರತಿಯೊಬ್ಬ ಭಾರತೀಯನಿಗೆ ಇರುವ ಸ್ವಾತಂತ್ರ್ಯ ಪ್ರತಿಯೊಬ್ಬ ಕಾಶ್ಮೀರಿಗೂ ಇದೆ. ಕಾಶ್ಮೀರದ ಪ್ರತಿ ಯುವಜನಕ್ಕೆ ಅದೇ ಉಜ್ವಲ ಭವಿಷ್ಯವನ್ನು ನಾವು ಆಶಿಸುತ್ತೇವೆ."

ಆದರೆ ಪೆಲೆಟ್ ಗನ್‌ಗಳ ಪ್ರಯೋಗದಿಂದ ನೂರಕ್ಕೂ ಹೆಚ್ಚು ಮಂದಿ ಕಣ್ಣು ಕಳಕೊಂಡ ಬಗ್ಗೆ, ಗೃಹಮಂತ್ರಿಗಳು ಅದರ ಪ್ರಯೋಗವನ್ನು ನಿಲ್ಲಿಸುವ ಬಗ್ಗೆ ಯೋಚಿಸಲಾಗುವುದು ಎಂದ ಮೇಲೂ ಅದು ನಿಲ್ಲದ ಬಗ್ಗೆ ಚಕಾರವಿಲ್ಲ. ದೇಶದ ಬೇರಾವ ರಾಜ್ಯದಲ್ಲೂ ಪ್ರತಿಭಟನಾಕಾರರ ಮೇಲೆ ಬಳಸದ ಪೆಲೆಟ್ ಗನ್‌ಗಳನ್ನು ಇಲ್ಲಿ ಮಾತ್ರ ಯುವಜನರ ಮೇಲೆ ಬಳಸುತ್ತಿರುವುದೇಕೆ ಎಂಬ ಕಾಶ್ಮೀರಿಗಳ ಪ್ರಶ್ನೆಗೆ ಉತ್ತರ ನೀಡಬೇಕೆಂದು ಅವರಿಗೆ ಅನಿಸಿದಂತಿಲ್ಲ. ಎಲ್ಲ ಪ್ರತಿಪಕ್ಷಗಳು ಮತ್ತೆ–ಮತ್ತೆ ಕೇಳಿಕೊಂಡರೂ ಈ ಬಗ್ಗೆ ರಾಜಕೀಯ ಸಮಾಲೋಚನೆ–ಸಂವಾದವನ್ನು ಆರಂಭಿಸಿಲ್ಲ ಏಕೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದೂ ಅವರಿಗೆ ಅನ್ನಿಸಿದಂತಿಲ್ಲ.


ತಮ್ಮ ಸರಕಾರ ಅಟಲ್ ಬಿಹಾರಿ ವಾಜಪೇಯಿಯವರ 'ಇನ್ಸಾನಿಯತ್, ಜಮ್ಹೂರಿಯತ್ ಔರ್ ಕಶ್ಮೀರಿಯತ್'(ಮಾನವೀಯತೆ, ಪ್ರಜಾಪ್ರಭುತ್ವ ಮತ್ತು ಕಾಶ್ಮೀರಿತನ) ಮಂತ್ರದಲ್ಲಿ ನಂಬಿಕೆಯಿಟ್ಟಿದೆ ಎಂದು ಅವರು ಹೇಳಿದ್ದಾರಷ್ಟೇ.

ರಕ್ತ ಹರಿಸಿ ಹದ್ದುಗಳು ಎರಗುವಂತೆ ಮಾಡುತ್ತಿರುವುದೇಕೆ?

ಆದರೆ ಇಂತಹ ಮಂತ್ರಗಳ ಉಚ್ಚಾರಣೆ ಮಾಡಿದರಷ್ಟೇ ಸಾಕೇ ಎಂದು ಮರುದಿನ ರಾಜ್ಯಸಭೆಯಲ್ಲಿ ಈ ಅಧಿವೇಶನದಲ್ಲಿ ಮೂರನೇ ಬಾರಿ ಕಾಶ್ಮೀರದ ಪರಿಸ್ಥಿತಿಯ ಮೇಲೆ ನಡೆದ ಚರ್ಚೆಯಲ್ಲಿ ಮಾತನಾಡುತ್ತ ಕೇಳಿದ ಸೀತಾರಾಮ್ ಯೆಚೂರಿ ಅಲ್ಲಿ ಭಾರತದ ಬಗ್ಗೆ ವಿಶ್ವಾಸದ ಕೊರತೆ ಉಂಟಾಗಿದೆ, ಅದನ್ನು ನಿವಾರಿಸದೆ ಕಾಶ್ಮೀರಿ ಜನತೆಯ ನೋವನ್ನು ಅರಿಯದೆ ಪರಿಹಾರ ಸಾಧ್ಯವಿಲ್ಲ ಎಂದರು.

ನಿಜ, ಪಾಕಿಸ್ತಾನ ಹಿಂಸಾಚಾರವನ್ನು ಪ್ರಚೋದಿಸುತ್ತಿದೆ. ಈ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯಗಳಿಲ್ಲ. ಆದರೆ ಹದ್ದು ಕೂಡ ನೆಲದಲ್ಲಿ ಬಿದ್ದಿರುವ ಹೆಣವನ್ನು ಮುಕ್ಕಲು ಆಕಾಶದಿಂದ ಎರಗುವುದು ರಕ್ತದ ವಾಸನೆಯಿಂದ. ಕಳೆದ 32 ದಿನಗಳಿಂದ ರಕ್ತ ಸುರಿಯುವಂತೆ ಮಾಡಿ ಗಡಿಗಳಾಚೆಗಿನ ಹದ್ದುಗಳು ಎರಗುವಂತೆ ಮಾಡುತ್ತಿರುವುದೇಕೆ ಎಂದು ಅವರು ಈ ಬಗ್ಗೆ ನೋವು ವ್ಯಕ್ತಪಡಿಸಿದರು.

69 ವರ್ಷಗಳ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ಬಂಗಾಳದಲ್ಲಿ, ಪಂಜಾಬಿನಲ್ಲಿ ಕೋಮು ದಂಗೆಗಳು ನಡೆಯುತ್ತಿದ್ದಾಗ ಮುಸ್ಲಿಮರೇ ಹೆಚ್ಚಾಗಿರುವ ಕಾಶ್ಮೀರದಲ್ಲಿ ಒಂದೇ ಒಂದು ಕೋಮು ಗಲಭೆ ನಡೆದಿರಲಿಲ್ಲ. ಬದಲಾಗಿ ಕಾಶ್ಮೀರದ ಜನತೆ ತಮ್ಮದೇ ಧರ್ಮಕ್ಕೆ ಸೇರಿದ ಪಾಕಿಸ್ತಾನದ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿ ಭಾರತವನ್ನು ಸೇರಲು ನಿರ್ಧರಿಸಿದರು, ಜನಗಳ ಅಭಿವೃದ್ಧಿಗಾಗಿ ಭೂಸುಧಾರಣೆಗೆ ಮುಂದಾದ ಮೊದಲ ರಾಜ್ಯ ಅದು. ಅಂತಹ ಅಭಿವೃದ್ಧಿಯ ಕನಸಿನೊಂದಿಗೆ ಭಾರತವನ್ನು ಸೇರಿದ ಅವರಿಗಾಗಿ 370ನೇ ಕಲಮನ್ನು ಸಂವಿಧಾನದಲ್ಲಿ ಸೇರಿಸಲಾಯಿತು, ಸ್ವಾಯತ್ತತೆಯ ಭರವಸೆ ಕೊಡಲಾಯಿತು. ಒಬ್ಬ ಪ್ರಧಾನ ಮಂತ್ರಿಗಳು ಸ್ವಾಯತ್ತತೆಗೆ ಆಕಾಶವೇ ಮಿತಿ ಎಂದರು. ಆದರೆ ಆ ಭರವಸೆ ಈಡೇರಿಸಲಿಲ್ಲ, ಈಗಂತೂ 370ನೇ ಕಲಮನ್ನೇ ಪ್ರಶ್ನಿಸಲಾಗುತ್ತಿದೆ. ಜತೆಗೆ ಗೋರಕ್ಷಣೆಯ ಹೆಸರಲ್ಲಿ ಸುಳ್ಳು ಆಪಾದನೆಗಳ ಮೇಲೆ ದಾದ್ರಿಯಲ್ಲಿ ಮಹಮ್ಮದ್ ಅಖ್ಲಾಕ್‌ನನ್ನು ಕೊಚ್ಚಿ ಹಾಕಲಾಗಿದೆ, ಲತೇಹಾರ್‌ನಲ್ಲಿ ಇಬ್ಬರು ಮುಸ್ಲಿಮರನ್ನು ಸಾರ್ವಜನಿಕವಾಗಿ ನೇಣು ಹಾಕಲಾಗಿದೆ, ಈಗ ದಲಿತರ ಮೇಲೆ ಹಲ್ಲೆ ನಡೆಯುತ್ತಿದೆ, ಲವ್ ಜಿಹಾದ್, ಘರ್ ವಾಪಸೀ ಇತ್ಯಾದಿ ಹೆಸರಲ್ಲಿ ಕೋಮು ಧ್ರುವೀಕರಣ ನಡೆಸಲಾಗುತ್ತಿದೆ. ಇಂತಹ ವಾತಾವರಣದಲ್ಲಿ ಅಲ್ಲಿ ಪೆಲೆಟ್ ಗನ್‌ಗಳನ್ನು ಇನ್ನೂ ಪ್ರತಿದಿನ ಪ್ರಯೋಗಿಸುತ್ತಿದ್ದರೆ ಅಲ್ಲಿಯ ಜನರಿಗೆ ನಮ್ಮ ಬಗ್ಗೆ ವಿಶ್ವಾಸ ಮೂಡುವುದಾದರೂ ಹೇಗೆ ಎಂದು ಯೆಚೂರಿ ಪ್ರಶ್ನಿಸಿದರು.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯಾ

ಇನ್ಸಾನಿಯತ್, ಜಮ್ಹೂರಿಯತ್ ಔರ್ ಕಶ್ಮೀರಿಯತ್ ಮಂತ್ರ ನೀಡಿದ ವಾಜಪೇಯಿಯವರು ಮತ್ತು ಅವರ ಗೃಹಮಂತ್ರಿ ಅಡ್ವಾಣಿಯವರು ಪ್ರತ್ಯೇಕತಾವಾದಿಗಳೊಂದಿಗೂ ಮಾತುಕತೆ ನಡೆಸಲು ಹಿಂಜರಿಯಲಿಲ್ಲ. ಆದರೆ ಪ್ರತಿಪಕ್ಷಗಳು ಮತ್ತೆ–ಮತ್ತೆ ವಿನಂತಿಸಿಕೊಂಡರೂ ರಾಜಕೀಯ ಸಮಾಲೋಚನೆಯನ್ನು, ಸಂವಾದವನ್ನು ನಡೆಸುವ ಪ್ರಯತ್ನವನ್ನೂ ಮೋದಿ ಸರಕಾರ ಮಾಡದ ಬಗ್ಗೆ ಅವರು ಖೇದ ವ್ಯಕ್ತಪಡಿಸಿದರು. **ಈಗಲಾದರೂ ಪೆಲೆಟ್ ಗನ್‌ಗಳ ಬಳಕೆಯನ್ನು ನಿಲ್ಲಿಸಿ, ಸರ್ವಪಕ್ಷ ಸಭೆ ಕರೆಯಿರಿ, ಮುಕ್ತ ಮನಸ್ಸಿನಿಂದ ರಾಜಕೀಯ ಸಂವಾದ ಆರಂಭಿಸಿ ಕಾಶ್ಮೀರಿಯ ಜನತೆಯ ವಿಶ್ವಾಸವನ್ನು ಮರಳಿ ಪಡೆಯಿರಿ ಎಂದು ಯೆಚೂರಿ ಮತ್ತೊಮ್ಮೆ ಕಳಕಳಿಯಿಂದ ಆಗ್ರಹಿಸಿದರು.**

ಸರಕು ಮತ್ತು ಸೇವೆಗಳಿಗೆ ತೆರಿಗೆ(ಜಿಎಸ್‌ಟಿ) ಹಾಕಲು ಕೇಂದ್ರ ಸರಕಾರಕ್ಕೆ ಅವಕಾಶ ಮಾಡಿ ಕೊಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಅಂಗೀಕಾರ ಜಿಎಸ್‌ಟಿ ಮಸೂದೆಗೇ ಸಿಕ್ಕಿದ ಅಂಗೀಕಾರ ಎಂಬಂತೆ ಪ್ರಚಾರ ನಡೆದಿದೆ. ವಾಸ್ತವವಾಗಿ ಈ ಸಂವಿಧಾನ ತಿದ್ದುಪಡಿ ಮೊದಲ ಹೆಜ್ಜೆಯಷ್ಟೇ, ಜಿಎಸ್‌ಟಿ ಮಸೂದೆ ಇನ್ನೂ ಬಂದಿಲ್ಲ. ಈ ಬಗ್ಗೆ ಹಲವು ಪ್ರಶ್ನೆಗಳು ಎದ್ದಿವೆ, ವಾದ–ವಿವಾದಗಳಿವೆ. ಅಂತಹ ಪ್ರಮುಖ ಪ್ರಶ್ನೆಗಳು ಯಾವವು, ಅವುಗಳನ್ನು ಪರಿಹರಿಸಿಕೊಳ್ಳುವ ಬಗೆ ಹೇಗೆ–'ಡೆಕ್ಕನ್ ಕ್ರಾನಿಕಲ್' ಪತ್ರಿಕೆಗೆ ನೀಡಿದ ಸಂದರ್ಶನವೊಂದರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಈ ಬಗ್ಗೆ ಸಿಪಿಐ(ಎಂ)ನ ನಿಲುವುಗಳನ್ನು ವಿಶದಪಡಿಸಿದ್ದಾರೆ.

ಜನಸಾಮಾನ್ಯರ ಮೇಲೆ ಈ ಪರೋಕ್ಷ ತೆರಿಗೆಯ ಭಾರ ಹೆಚ್ಚದಂತೆ, ಹಾಗೂ ರಾಜ್ಯಗಳ ಅಧಿಕಾರಗಳನ್ನು ಮೊಟಕು ಮಾಡದೆ, ಭಾರತದ ಒಕ್ಕೂಟ ಸ್ವರೂಪಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ಇಲ್ಲಿರುವ ಮುಖ್ಯ ಪ್ರಶ್ನೆ. ಇದು ಕೇವಲ ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಪ್ರಶ್ನೆಯಲ್ಲ. ಈ ಬಗ್ಗೆ ಒಮ್ಮತ ಮೂಡಿಸುವ ಪ್ರಯತ್ನಗಳನ್ನು ನರೇಂದ್ರ ಮೋದಿ ಸರಕಾರ ಮಾಡುತ್ತಿಲ್ಲ. ಈ ಬಗ್ಗೆ ಈ ಹೊತ್ತಿನವರೆಗೂ ಸರ್ವ ಪಕ್ಷಗಳ ಒಂದು ಸಭೆಯನ್ನೂ ಕರೆದಿಲ್ಲ. ಐದು ವರ್ಷಗಳ ನಂತರ ಸಮಸ್ಯೆ ಜಟಿಲವಾಗುತ್ತದೆ. ಅದನ್ನು ಅರ್ಥಪೂರ್ಣ ಸಂವಾದಗಳ ಮೂಲಕವೇ ಬಗೆಹರಿಸಿಕೊಳ್ಳಬೇಕು. ಜಿಎಸ್‌ಟಿ ಒಂದು ಪ್ರಾಧಾನ್ಯತೆಯುಳ್ಳ ಶಾಸನ. ಆದ್ದರಿಂದ ರಾಜ್ಯಸಭೆಯಲ್ಲಿ ಆ ಬಗ್ಗೆ ಚರ್ಚೆ ನಡೆಯದಂತೆ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಸದೆ ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಜಿಎಸ್‌ಟಿ ದರದ ಬಗ್ಗೆ ಚರ್ಚೆ ಮಾಡಿ ಒಮ್ಮತ ಮೂಡಿಸುವ ಪ್ರಯತ್ನವನ್ನು ಸರ್ಕಾರ ಈಗಲಾದರೂ ಮಾಡಬೇಕು ಎಂದು ಯೆಚೂರಿ ಹೇಳುತ್ತಾರೆ. ಆ ಸಂದರ್ಶನದ ಅನುವಾದ ಇಲ್ಲಿದೆ:



ಜಿಎಸ್‌ಟಿ: ಸರ್‌ಚಾರ್ಜ್, ಸೆಸ್ ಹಾಕುವ ಅಧಿಕಾರ ರಾಜ್ಯಗಳಿಗೆ ಇರಬೇಕು

ಜಿಎಸ್‌ಟಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಯ ನಂತರ, ಜಿಎಸ್‌ಟಿಯ ದರ ಎಷ್ಟಿರಬೇಕು ಎಂಬುದರತ್ತ ಎಲ್ಲರ ಗಮನ ತಿರುಗಿದೆ. ಅದು ಹೇಗಿರಬೇಕೆಂದು ನೀವು ಬಯಸುತ್ತೀರ?

ಜಿಎಸ್‌ಟಿ ವ್ಯವಸ್ಥೆಗೆ ಬದಲಾವಣೆ ಹೊಂದುವ ಪ್ರಕ್ರಿಯೆಯ ಆರಂಭದಲ್ಲಿ, ಒಂದೇ ಒಂದು ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಇರಬೇಕೆಂಬ ಪ್ರಸ್ತಾಪವಿತ್ತು. ಅದನ್ನು ನಾವು ಬಲವಾಗಿ ವಿರೋಧಿಸಿದೆವು. ಏಕೆಂದರೆ, ಅದು ತೆರಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ರಾಜ್ಯಗಳ ಸಂವಿಧಾನ ದತ್ತ ಹಕ್ಕುಗಳನ್ನು ಅದು ಕಸಿಯುತ್ತದೆ. ಅದು, ನಮ್ಮ ದೇಶವು ರಾಜ್ಯಗಳ ಒಂದು ಒಕ್ಕೂಟ ಎಂಬ ಪರಿಕಲ್ಪನೆಯಲ್ಲಿ ರಚಿತವಾಗಿರುವ ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಆದ್ದರಿಂದ, ಜಿಎಸ್‌ಟಿಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಯಲ್ಲಿ ಮೂರು ಬಗೆಯ ಜಿಎಸ್‌ಟಿಗಳಿಗೆ – ಕೇಂದ್ರ ಜಿಎಸ್‌ಟಿ, ಸಮಗ್ರ ಜಿಎಸ್‌ಟಿ ಮತ್ತು ರಾಜ್ಯ ಜಿಎಸ್‌ಟಿ – ಅವಕಾಶ ಇರಬೇಕೆಂದು ಸ್ಪಷ್ಟಪಡಿಸಿದೆವು. ಹಾಗಾಗಿ, ಕೊನೆಯಲ್ಲಿ, ಮೂರು ಬಗೆಯ ಜಿಎಸ್‌ಟಿಗಳಿಗೆ ಸಮ್ಮತಿ ಏರ್ಪಟ್ಟಿದೆ.

ಜಿಎಸ್‌ಟಿ ಬಗ್ಗೆ ಸಂವಿಧಾನದಲ್ಲಿ ತಿದ್ದುಪಡಿ ಆದ ನಂತರ ಅಸಲಿ ಸಮಸ್ಯೆಗಳು ಎದುರಾಗುತ್ತವೆ. ಮೊದಲನೆಯದು, ಒಂದು ಮಾದರಿ (standard) ದರ ಎಷ್ಟಿರಬೇಕೆಂಬುದು. ಅರ್ಥಶಾಸ್ತ್ರದ ಸಿದ್ಧಾಂತಗಳ ಪ್ರಕಾರ ಜಿಎಸ್‌ಟಿಯು ಒಂದು ಪರೋಕ್ಷ ತೆರಿಗೆ. ಈ ಪರೋಕ್ಷ ತೆರಿಗೆಗಳನ್ನು ಏರಿಸುವುದರಿಂದ ಜನತೆಯ ಕಷ್ಟ ಕೋಟಲೆಗಳೂ ಏರುತ್ತವೆ. ನಮ್ಮ ದೇಶದಲ್ಲಿ, ಕೇಂದ್ರ ಸರ್ಕಾರದ ತೆರಿಗೆ ವರಮಾನದಲ್ಲಿ ಎರಡು ಭಾಗವು ಪರೋಕ್ಷ ತೆರಿಗೆಗಳಿಂದಲೂ ಮತ್ತು ಒಂದು ಭಾಗವು ನೇರ ತೆರಿಗೆಯ ಮೂಲಕವೂ ಬರುತ್ತದೆ. ನಮ್ಮ ದೇಶದಲ್ಲಿ ವಸೂಲಾಗುವ ಒಟ್ಟು ತೆರಿಗೆಗಳಲ್ಲಿ, ನೇರ ತೆರಿಗೆಯ ಪಾಲು ವಿಶ್ವದಲ್ಲೇ ಅತಿ ಕಡಿಮೆ. ಇಂಡೋನೇಶಿಯದಲ್ಲಿ ನಮಗಿಂತ 20% ಹೆಚ್ಚಿನ ನೇರ ತೆರಿಗೆಗಳ ಅನುಪಾತವಿದೆ. ಈಗಾಗಲೇ ತೆರಿಗೆಗಳ ಹೊರೆಯಿಂದ ಜನತೆ ತತ್ತರಿಸಿದ್ದಾರೆ. ಆದ್ದರಿಂದ, ಜಿಎಸ್‌ಟಿ ದರ ನಿರ್ಧರಿಸುವಾಗ ಈ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದಾಯಗಳ ಬಗ್ಗೆ ರಾಜ್ಯ ಸರ್ಕಾರಗಳು ಈಗಾಗಲೇ ಆತಂಕದಲ್ಲಿವೆ. ಹಾಗಾಗಿ ಇದೊಂದು ತಕರಾರಿನ ವಿಷಯವಾಗಲಿದೆ.

ಮಾದರಿ (standard) ಜಿಎಸ್‌ಟಿ ದರ ಶೇ.18 ಮೀರಕೂಡದು ಎಂದು ಕಾಂಗ್ರೆಸ್ ಹೇಳುತ್ತಿದೆ.

ಕೇಂದ್ರೀಯ ಸುಂಕ ಮತ್ತು ರಾಜ್ಯಗಳ ವ್ಯಾಟ್ ಎರಡನ್ನೂ ಸೇರಿಸಿ, ಸರ್ಕಾರ ಹಾಕಿರುವ ಲೆಕ್ಕದ ಪ್ರಕಾರ, ಜಿಎಸ್‌ಟಿ ದರ ಶೇ.27 ಆಗುತ್ತದೆ. ಆ ದರವನ್ನು ಕೆಳಗಿಳಿಸಿದರೆ ಯಾರಿಗೆ ಎಷ್ಟು ನಷ್ಟವಾಗುತ್ತದೆ ಎಂಬುದರ ಪರಿಶೀಲನೆ ನಡೆದಿದೆ. ಅದು ಜಾಸ್ತಿ ಇರಕೂಡದು.

ಮಾದರಿ ಜಿಎಸ್‌ಟಿ ದರ ಶೇ.20 ರವರೆಗೆ ಇದ್ದರೆ ಪರವಾಗಿಲ್ಲ. ಅದಕ್ಕಿಂತ ಹೆಚ್ಚಾದರೆ ಹಣದುಬ್ಬರಕ್ಕೆ ಉರುವಲು ಹಾಕಿದಂತಾಗುತ್ತದೆ. ನಂತರ ಆ ಸಮಸ್ಯೆಯತ್ತ ಗಮನಹರಿಸಬೇಕಾಗುತ್ತದೆ ಎಂದು ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ಹೇಳುತ್ತಾರೆ...

ಹೌದು. ಇದು ಹಣಕಾಸು ನೀತಿಗಳ ಮೇಲೆ ಪರಿಣಾಮ ಉಂಟುಮಾಡುವುದರಿಂದ ರಿಸರ್ವ್ ಬ್ಯಾಂಕ್‌ನ ಸಲಹೆ ಪಡೆಯಬೇಕಾಗುತ್ತದೆ.

ಶೇ.27ರ ಜಿಎಸ್‌ಟಿ ದರ ಜಾಸ್ತಿಯಾಯಿತು ಎಂಬುದನ್ನು ಒಪ್ಪುತ್ತೀರಾ?

ಹೌದು. ಜಿಎಸ್‌ಟಿ ದರ ಶೇ.27 ಆದಲ್ಲಿ, ಅದು ಬಹಳ ಹೆಚ್ಚಾಯಿತು ಎಂದು ಪಾರ್ಲಿಮೆಂಟಿನಲ್ಲಿ ನಾನು ಹೇಳಿದ್ದೇನೆ.

ಜಿಎಸ್‌ಟಿಗೆ ಸಂಬಂಧಿಸಿದಂತೆ ಪಾರ್ಲಿಮೆಂಟಿನಲ್ಲಿ ಮುಂದೆ ಮಂಡನೆಯಾಗುವುದು ಧನ ವಿಧೇಯಕಗಳಾಗಿಯೊ ಅಥವಾ ಹಣಕಾಸು ವಿಧೇಯಕಗಳಾಗಿಯೊ?

ರಾಜ್ಯಸಭೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸರ್ಕಾರವು ಈ ಧನ ವಿಧೇಯಕ(ಮನಿ ಬಿಲ್)ದ ಮೊರೆ ಹೋಗಿರುವುದು ತುಂಬಾ ಅಪಾಯಕಾರಿಯಾಗಿದೆ. ಆಧಾರ್ ವಿಧೇಯಕವನ್ನು ಅವರು ಧನ ವಿಧೇಯಕವೆಂದು ಘೋಷಣೆ ಮಾಡಿದರು. ಈ ಪ್ರಶ್ನೆ ಈಗ ಸುಪ್ರೀಂ ಕೋರ್ಟ್ ಮುಂದಿದೆ. ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಮಂಡಿಸಿದ್ದ ಆಧಾ ರ್ ವಿಶೇಷ ಪ್ಯಾಕೇಜ್ ವಿಧೇಯಕವನ್ನು ಧನ ವಿಧೇಯಕವೆಂದು ತಕರಾರು ಹೂಡಿದ ಸರ್ಕಾರ ಅದನ್ನು ತೀರ್ಮಾನಿಸಲು ಲೋಕ ಸಭೆಯ ಅಧ್ಯಕ್ಷರ ಮುಂದಿಟ್ಟಿದೆ.



ರಾಜ್ಯಸಭೆಯಲ್ಲಿ ಅವರಿಗೆ ಬಹುಮತ ಇಲ್ಲ. ಸೋಲು ತಪ್ಪಿಸಿಕೊಳ್ಳಲು ಇದು "ಧನ ವಿಧೇಯಕ" ಎಂಬ ವಿವಾದ ಸೃಷ್ಟಿಸುವ ಅವರ ಕುತಂತ್ರಗಳನ್ನು ನಾವು ವಿರೋಧಿಸುತ್ತೇವೆ.

ಜಿಎಸ್‌ಟಿಯನ್ನು ಏನೆಂದು ಘೋಷಣೆ ಮಾಡಬೇಕು? ಧನ ವಿಧೇಯಕವೆಂದೋ ಅಥವಾ ಹಣಕಾಸು ವಿಧಾಯಕವೆಂದೋ?

ಜಿಎಸ್‌ಟಿ ಒಂದು ಪ್ರಾಧಾನ್ಯತೆಯುಳ್ಳ ಶಾಸನ. ಅದನ್ನು ಪಾಸುಮಾಡುವಲ್ಲಿ ಎರಡೂ ಸದನಗಳಿಗೆ ಸಮಾನ ಹಕ್ಕುಗಳಿರಬೇಕು. ಅದನ್ನು ಧನ ವಿಧೇಯಕವೆಂದು ಘೋಷಣೆ ಮಾಡಬಾರದು. ಭಾರತದ ಸಂವಿಧಾನವನ್ನು ಸರ್ಕಾರ ವ್ಯಾಖ್ಯಾನ ಮಾಡುತ್ತಿರುವ ರೀತಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಕಲಂ 110(1)ರಲ್ಲಿ ಯಾವುದು ಧನ ವಿಧೇಯಕವಾಗುತ್ತದೆ ಎಂಬ ವಿಷಯಗಳ ವಿವರಣೆ ಇದೆ. ಕಲಂ 110(2)ರಲ್ಲಿ ಯಾವುದು ಧನ ವಿಧೇಯಕವಾಗುವುದಿಲ್ಲ ಎಂಬ ವಿವರಣೆ ಇದೆ. ನಂತರ, ಈ ಬಗ್ಗೆ ವಿವಾದವಿದ್ದಲ್ಲಿ, ಲೋಕ ಸಭೆಯ ಅಧ್ಯಕ್ಷರ ತೀರ್ಮಾನವೇ ಅಂತಿಮ ಎಂದು ಕಲಂ 110(3) ಹೇಳುತ್ತದೆ.

ಮೊದಲ ಎರಡು ಕಲಂಗಳಲ್ಲಿ ಒಂದು ವಿಷಯದ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೆ ಮತ್ತು ಅದು ವಿವಾದಿತವಾಗಿದ್ದ ಸಂದರ್ಭದಲ್ಲಿ ಮಾತ್ರ ಅದನ್ನು ಲೋಕ ಸಭೆಯ ಅಧ್ಯಕ್ಷರು ತೀರ್ಮಾನಿಸಬೇಕಾಗುತ್ತದೆ. ಆದ್ದರಿಂದ, ಕಲಂ 110(1)ರಲ್ಲಿ ಮತ್ತು ಕಲಂ 110(2)ರಲ್ಲಿ ನಮೂದಿತವಾಗಿರುವ ವಿಷಯದ ಬಗ್ಗೆ ಲೋಕ ಸಭೆಯ ಅಧ್ಯಕ್ಷರ ತೀರ್ಮಾನ ಕೇಳುವುದಾದರೂ ಹೇಗೆ?

ಜಿಎಸ್‌ಟಿಯನ್ನು ಒಂದು ಧನ ವಿಧೇಯಕವಾಗಿ ಮಂಡಿಸಿದರೆ ವಿಪಕ್ಷಗಳಿಗಿರುವ ಆಯ್ಕೆ ಏನು?

ಈ ಪ್ರಶ್ನೆ ಈಗ ಸುಪ್ರೀಂ ಕೋರ್ಟ್ ಮುಂದಿದೆ. ಪಾರ್ಲಿಮೆಂಟಿನಲ್ಲಿ ಈ ಮಸೂದೆ ಬರುವ ಮೊದಲು ಸುಪ್ರೀಂ ಕೋರ್ಟ್‌ನ ಅಭಿಪ್ರಾಯ ಹೊರಬರಬಹುದೆಂಬ ನಿರೀಕ್ಷೆ ಇದೆ. ಏನಾಗುತ್ತದೆ, ನೋಡೋಣ.

ಜಿಎಸ್‌ಟಿ ಜಾರಿಯ ಬಳಿಕ ರಾಜ್ಯಗಳಿಗೆ ತೆರಿಗೆ ವಿಧಿಸುವ ಹಕ್ಕುಗಳಿರಬೇಕೆಂದು ನಿಮಗೆ ಅನ್ನಿಸುತ್ತದೆಯೇ?

ಸರ್ಚಾರ್ಜ್ ಅಥವಾ ಸೆಸ್‌ಗಳನ್ನು ವಿಧಿಸುವ ಹಕ್ಕುಗಳು ರಾಜ್ಯಗಳಿಗೆ ಉಳಿಯಬೇಕು. ಉದಾಹರಣೆಗೆ, ಪ್ರಕೃತಿ ವಿಕೋಪದ ಒಂದು ಸಂದರ್ಭದಲ್ಲಿ, ಜನರಿಗೆ ನೆರವು ಒದಗಿಸುವ ಸಲುವಾಗಿ, ಕೆಲವು ಸರಕುಗಳ ಮೇಲೆ ಕೆಲ ಕಾಲ, ಸರ್ಚಾರ್ಜ್ ಅಥವಾ ಸೆಸ್‌ಗಳನ್ನು ವಿಧಿಸುವ ಹಕ್ಕುಗಳು ರಾಜ್ಯಗಳಿಗೆ ಉಳಿಯಬೇಕು.

ಮತ್ತೊಂದು ಉದಾಹರಣೆ ಹೇಳುವುದಾದರೆ, ಕೇರಳ ಸರ್ಕಾರ ವಿಧಿಸಿರುವ ಬೊಜ್ಜು/ಆರೋಗ್ಯ ತೆರಿಗೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆಗೊಳಗಾಗಿದೆ. ಶಾರದಾ ಚಿಟ್‌ಫಂಡ್ ಹಗಣದ ಸಂತ್ರಸ್ತರಿಗೆ ಪರಿಹಾರ ಒದಗಿಸುವ ಸಲುವಾಗಿ ಪಶ್ಚಿಮ ಬಂಗಾಳದ ಸರ್ಕಾರ ಸಿಗರೇಟ್‌ಗಳ ಮೇಲೆ ಸರ್ಚಾರ್ಜ್ ವಿಧಿಸಿದೆ. ರಾಜ್ಯಗಳ ಹಕ್ಕುಗಳನ್ನು ಕಸಿದರೆ ರಾಜ್ಯಗಳ ಮುಂದೆ ಆಯ್ಕೆಗಳೇ ಇರುವುದಿಲ್ಲ.

ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ಐದು ವರ್ಷಗಳ ನಂತರ ಬಳಕೆ ಹೆಚ್ಚಿಗೆ ಇರುವ ರಾಜ್ಯಗಳಿಗೆ ಆದಾಯವಿರುತ್ತದೆ. ಆದರೆ, ತಯಾರಿಕೆಯಲ್ಲಿ ಮುಂದಿರುವ ರಾಜ್ಯಗಳಿಗೆ ಜಿಎಸ್‌ಟಿಯಿಂದ ಪ್ರಯೋಜನವಾಗುವುದಿಲ್ಲ. ದೀರ್ಘಕಾಲದಲ್ಲಿ ಅವರಿಗೆ ತೊದರೆಯಾಗುವುದಿಲ್ಲವೇ?

ಇದೊಂದು ಗಂಭೀರ ಸಮಸ್ಯೆ. ಆದ್ದರಿಂದಲೇ, ಐದು ವರ್ಷಗಳ ಪರಿಹಾರವನ್ನು ಶಾಸನಬದ್ಧಗೊಳಿಸಲಾಗಿದೆ. ನೀವು ಹೇಳುವುದು ಸರಿ ಇದೆ. ಐದು ವರ್ಷಗಳ ನಂತರ ಸಮಸ್ಯೆ ಜಟಿಲವಾಗುತ್ತದೆ. ಅದನ್ನು ಅರ್ಥಪೂರ್ಣ ಸಂವಾದಗಳ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಬಗ್ಗೆ ಒಮ್ಮತ ಮೂಡಿಸುವ ಪ್ರಯತ್ನಗಳಾಗಬೇಕು. ಸರ್ಕಾರ ಅದನ್ನು ಮಾಡುತ್ತಿಲ್ಲ.

ಜಿಎಸ್‌ಟಿ ಬಗ್ಗೆ ಈ ಹೊತ್ತಿನವರೆಗೂ ಸರ್ವ ಪಕ್ಷಗಳ ಒಂದು ಸಭೆಯನ್ನೂ ಕರೆದಿಲ್ಲ. ಪಾರ್ಲಿಮೆಂಟಿನಲ್ಲಿ ಜಿಎಸ್‌ಟಿ ದರದ ಬಗ್ಗೆ ಚರ್ಚೆ ಮಾಡಿ ಒಮ್ಮತ ಮೂಡಿಸುವ ಪ್ರಯತ್ನವನ್ನು ಸರ್ಕಾರ ಈಗಲಾದರೂ ಮಾಡಬೇಕು. ಸರ್ವ ಪಕ್ಷಗಳ ಸಭೆ ಕರೆದರೆ, ಎಲ್ಲ ಪಕ್ಷಗಳೂ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಆ ಅಭಿಪ್ರಾಯಗಳನ್ನು ಆಧರಿಸಿ ಒಮ್ಮತ ಮೂಡಿಸಬಹುದು. ಸರ್ಕಾರ ಇದನ್ನು ಬಿಜೆಪಿ–ಕಾಂಗ್ರೆಸ್ ನಡುವಿನ ವಿಷಯವೆಂದು ತಿಳಿದಿದೆ. ಇದರಿಂದ ಉಪಯೋಗವಿಲ್ಲ. ಅನೇಕ ರಾಜ್ಯ ಸರ್ಕಾರಗಳನ್ನು ಪ್ರಾದೇಶಿಕ ಪಕ್ಷಗಳು ನಡೆಸುತ್ತಿವೆ. ಕೇಂದ್ರವು ಅವುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಇಂತಹ ವಿಷಯಗಳನ್ನು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಚರ್ಚಿಸಲಾಗುವುದು. ಅದರಲ್ಲಿರುವ ರಾಜ್ಯಗಳ ಹಣ ಕಾಸು ಮಂತ್ರಿಗಳು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ಆಗಿರುತ್ತಾರೆ ಎಂದು ಕೇಂದ್ರ ವಾದಿಸುತ್ತದೆ.

ರಾಜ್ಯಗಳ ಹಣ ಕಾಸು ಮಂತ್ರಿಗಳಿರುವ ಕೌನ್ಸಿಲ್‌ನಲ್ಲಿ ಮತ್ತು ಎಲ್ಲ ರಾಜಕೀಯ ಪಕ್ಷಗಳ ಸಭೆಯಲ್ಲಿ ಈ ಎರಡು ಸ್ತರಗಳಲ್ಲೂ ಈ ಪ್ರಕ್ರಿಯೆ ನಡೆಯಬೇಕು. ಹಿಂದೆ ಇಂತಹ ಪ್ರಕ್ರಿಯೆ ನಡೆದಿದೆ ಮತ್ತು ಅದರಿಂದ ಉಪಯೋಗವಾಗಿದೆ.

ಜಿಎಸ್‌ಟಿಯಿಂದ ಮಧ್ಯಮ ಗಾತ್ರ ಬಂಡವಾಳದ ಕಂಪೆನಿಗಳಿಗೆ ಅನುಕೂಲವಾಗುತ್ತದೆ. ಏಕೆಂದರೆ ಅಸಂಘಟಿತ ವಲಯದಲ್ಲಿರುವ ಅವರ ಪ್ರತಿಸ್ಪರ್ಧಿಗಳು ಜಿಎಸ್‌ಟಿಗೆ ಒಳಪಡುತ್ತಾರೆ ಎಂಬುದಾಗಿ ಷೇರು ಮಾರುಕಟ್ಟೆಯ ಅನೇಕ ವಿಶ್ಲೇಷಕರು ಬಗೆಯುತ್ತಾರೆ.

ಈ ವಿಷಯ ಇನ್ನೂ ಇತ್ಯರ್ಥವಾಗಿಲ್ಲ. ಹೆಚ್ಚಿನಂಶ, ಅಸಂಘಟಿತ ವಲಯ ಜಿಎಸ್‌ಟಿಯ ವ್ಯಾಪ್ತಿಯೊಳಗೆ ಬರುತ್ತದೆ. ಆಗ, ಪರಿಸ್ಥಿತಿ ಈಗಿರುವುದಕ್ಕಿಂತ ಹೆಚ್ಚು ಭಿನ್ನವಾಗಿರುವುದಿಲ್ಲ.



ವ್ಯಂಗ್ಯಚಿತ್ರ: ಕೀರ್ತಿಶ್, ಬಾಮುಲಾಜಿಜಾ.ಕಾಂ

ಲಿಂಗರಾಜು

ನಾಡಿನ ಸುತ್ತ

'ಕೂಪನ್ ಭಾಗ್ಯ'... ಶಾಪ ಹಾಕಿದ ಜನ!

ಪಡಿತರ ವಿತರಣೆಯಲ್ಲಿ ರಾಜ್ಯ ಸರ್ಕಾರವು ನೂತನವಾಗಿ ಜಾರಿಗೊಳಿಸಿದ ಕೂಪನ್ ವ್ಯವಸ್ಥೆ ತೋಪೆದ್ದಿದೆ. ರೇಷನ್ ವಿತರಣೆಯ ಸಂದರ್ಭದಲ್ಲಿ ಆಗುತ್ತಿರುವ ತಾಂತ್ರಿಕ ಅಡಚಣೆ, ಅನಗತ್ಯ ವಿಳಂಬ, ಗಂಟೆಗಟ್ಟಲೆ ಕ್ಯೂ ನಿಲ್ಲುವುದು ಇಂತಹ ಹತ್ತಾರು ಸಮಸ್ಯೆಗಳಿಗೆ ಕೂಪನ್ ವ್ಯವಸ್ಥೆ ರಾಮಬಾಣವಾಗಲಿದೆ ಎಂದು ಹೇಳಿ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ ಬೃಹತ್ ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿತ್ತು! ಈ ರೇಷನ್ ಕೂಪನ್‌ಗಳ ವಿತರಣೆ ಹೊಣೆಯನ್ನು ಬೆಂಗಳೂರು ಒನ್ ಕೇಂದ್ರಗಳಿಗೆ ನೀಡಲಾಗಿತ್ತು. ಸರ್ಕಾರದ ಈ ನಿರ್ಧಾರ ಎಷ್ಟು ಅಪ್ರಾಯೋಗಿಕವಾದದು ಎಂಬುದನ್ನು ಬೆಂಗಳೂರು ಒನ್ ಕೇಂದ್ರಗಳಲ್ಲಿ ಜನರು ಸಾಲುಗಟ್ಟಿ ನಿಂತಿರುವ ದೃಶ್ಯವೇ ಹೇಳುತ್ತದೆ. ಬೆಂಗಳೂರಿಗರಿಗೆ ವಿವಿಧ ಸೇವೆಗಳನ್ನು ಒದಗಿಸುವ ಬೆಂಗಳೂರು ಒನ್ ಕೇಂದ್ರಗಳು ಮೊದಲೇ ಸಾಕಷ್ಟು ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಂಥದ್ದರಲ್ಲಿ ಪಡಿತರ ಕೂಪನ್ ವಿತರಣೆಯನ್ನು ಇದೇ ಕೇಂದ್ರಗಳಿಗೆ ವಹಿಸಿದ್ದರಿಂದ ಸರ್ವರ್ ಡೌನ್ ಇತರೆ ತಾಂತ್ರಿಕ ಸಮಸ್ಯೆಗಳಿಂದ ಒಂದು ಕೇಂದ್ರದಲ್ಲಿ ದಿನಕ್ಕೆ 20 ಕ್ಕಿಂತ ಹೆಚ್ಚು ಜನರಿಗೆ ಕೂಪನ್ ವಿತರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ದಿನವಿಡೀ ಕ್ಯೂನಲ್ಲಿ ನಿಂತರೂ ಕೂಪನ್ ಸಿಗದೇ ಸರ್ಕಾರದ ಈ ಅವೈಜ್ಞಾನಿಕ ವ್ಯವಸ್ಥೆಯ ವಿರುದ್ಧ ಜನ ಹಿಡಿ ಶಾಪ ಹಾಕುತ್ತಿದ್ದಾರೆ. ಆದರೆ ಆಹಾರ ಸಚಿವರು ಮಾತ್ರ ಕೂಪನ್ ವ್ಯವಸ್ಥೆ ಬೆಂಗಳೂರಿನಲ್ಲಿ ಅಭೂತಪೂರ್ವ ಯಶಸ್ವಿಯಾಗಿದೆ, ಇದೇ ತಿಂಗಳಿನಿಂದ ಇದನ್ನು ರಾಜ್ಯದೆಲ್ಲೆಡೆ ಅನುಷ್ಠಾನಗೊಳಿಸಲಾಗುವುದು ಎಂದು ಹೇಳಿದ್ದಾರೆ!

ಸಾಮಾನ್ಯ ಗಣಿತ ಹೀಗಿದೆ. ನಗರದಲ್ಲಿ ಒಟ್ಟು 150 ಬೆಂಗಳೂರು ಒನ್ ಕೇಂದ್ರಗಳಿವೆ. ನಗರದಲ್ಲಿರುವ ಬೆಂಗಳೂರು ಸೆಂಟ್ರಲ್, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ; ಈ ಐದು ವಲಯಗಳಲ್ಲಿರುವ ಒಟ್ಟು ಕಾರ್ಡುಗಳ ಸಂಖ್ಯೆ 11.34 ಲಕ್ಷ ಅಂದರೆ ಒಂದು ಕೇಂದ್ರ 7563 ಕೂಪನ್‌ಗಳನ್ನು ವಿತರಿಸಬೇಕು! ಈ ಸಾಮಾನ್ಯ ಗಣಿತ ಅಧಿಕಾರಿಗಳಿಗೆ ತಿಳಿಯದ ವಿಷಯವೇನಲ್ಲ. ಅದರಲ್ಲೂ ನಗರದ ಹೊರ ವಲಯದಲ್ಲಿ ಬೆರಳಣಿಕೆಯಷ್ಟು ಕೇಂದ್ರಗಳಿವೆ. ಹೀಗಾಗಿ ಜನ ಕೂಪನ್



ತೆಗೆದುಕೊಳ್ಳಲು ಕೇಂದ್ರಗಳಿಗೆ ವಾರಗಟ್ಟಲೆ ಅಲೆದಾಡಿದರೂ ಸಿಗುತ್ತಿಲ್ಲ. ಎಲ್ಲಾ ಸಮಸ್ಯೆಗಳಿಗೆ ಇದುವೇ ಪರಿಹಾರ ಎಂದು ಬೊಬ್ಬೆ ಹಾಕಿ ಇನ್ನೊಂದಷ್ಟು ಸಮಸ್ಯೆಗಳನ್ನು ತಂದೊಡ್ಡಿದ್ದಾರೆ. ಸಮಸ್ಯೆಗಳ ಮೇಲೆ ಮತ್ತಷ್ಟು ಸಮಸ್ಯೆಗಳನ್ನು ಹೇರಿ ಜನರೇ ಬೇಸತ್ತು ರೇಷನ್ ಅಂಗಡಿಗಳ ಬಳಿ ಸುಳಿಯದಂತೆ ಮಾಡುವಲ್ಲಿ ಸರ್ಕಾರ ಯಶಸ್ವಿಯಾಗಿದೆ! ಅಂದರೆ ಇಡೀ ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ರೋಗಗ್ರಸ್ತಗೊಳಿಸಿ ನಿರ್ನಾಮ ಮಾಡುವ ಕಾಲ ಸನ್ನಿಹಿತವಾಗಿದೆ.

ಡಿಕೆಶಿ ದೇಶದಲ್ಲೇ ನಂಬರ್ ಟೂ!



ಆಶ್ಚರ್ಯವಲ್ಲ! ಇದು ಸತ್ಯ. ಅಸೋಸಿಯೇಷನ್ ಫಾರ್ ಡೆಮಾಕ್ರಾಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯು ಈ ಸತ್ಯವನ್ನು ಹೊರಗೆಡಹಿದೆ. ದೇಶದ 29 ರಾಜ್ಯಗಳ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 620 ಮಂತ್ರಿಗಳಲ್ಲಿ ರಾಜ್ಯದಲ್ಲಿ 'ಪವರ್‌ಫುಲ್ ಮಿನಿಸ್ಟರ್' ಎಂತಲೇ ಖ್ಯಾತಿಯಾಗಿರುವ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಎರಡನೇ ಅತಿ ದೊಡ್ಡ ಶ್ರೀಮಂತ ಎಂದು ದಾಖಲೆ ಸಮೇತ ಘೋಷಿಸಿದೆ. ಚುನಾವಣಾ ಸಂದರ್ಭದಲ್ಲಿ ಈ ಅಭ್ಯರ್ಥಿಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಆಸ್ತಿ ಘೋಷಣೆ ಪತ್ರಗಳನ್ನು ಪರಿಶೀಲಿಸಿ ಈ ರ‍್ಯಾಂಕುಗಳನ್ನು ನೀಡಿದ್ದಾರೆ! ಅದರಂತೆ ಡಿಕೆಶಿ ಘೋಷಿಸಿರುವ ಒಟ್ಟು ಆಸ್ತಿ 251 ಕೋಟಿ ರೂಪಾಯಿ! ಇನ್ನು ಘೋಷಿಸದ ಆಸ್ತಿ ಅದೆಷ್ಟಿದೆಯೋ ಬಲ್ಲವರೇ ಹೇಳಬೇಕು! ಮುಂದುವರಿದು ಹೇಳುವುದಾದರೆ ರಾಜ್ಯದ ಮಂತ್ರಿಗಳಲ್ಲಿ 97% ಜನ ಕೋಟ್ಯಧೀಶರು!, ಇವರ ಸರಾಸರಿ ಆಸ್ತಿ ಮೌಲ್ಯ 36.39 ಕೋಟಿ! ಕರುನಾಡು ಎಷ್ಟೊಂದು ಶ್ರೀಮಂತವಾಗಿದೆ ಅಲ್ಲವೇ!

ಇನ್ನು ನಂಬರ್ ಒನ್ ಯಾರು ಅಂತೀರಾ? ಅವರೇ ಆಂಧ್ರದ ಟಿಡಿಪಿ ಮಂತ್ರಿ ಪೊಂಗುರು ನಾರಾಯಣ. ಇವರ ಘೋಷಿತ ಆಸ್ತಿ 469 ಕೋಟಿ ರೂಪಾಯಿ!

ಹಾಗೆಯೇ ಈ ಸಂಸ್ಥೆ ಅತಿ ಕಡಿಮೆ ಆಸ್ತಿ ಹೊಂದಿದವರ ವಿವರವನ್ನೂ ಕೊಟ್ಟಿದೆ. ಅದರಂತೆ ಸಿಪಿಐ(ಎಂ) ಆಡಳಿತ ನಡೆಸುವ ತ್ರಿಪುರಾ ರಾಜ್ಯ ಸರ್ಕಾರದ ಮಂತ್ರಿಗಳ ಸರಾಸರಿ ಆಸ್ತಿ ಕೇವಲ 31.67 ಲಕ್ಷ!

ತೆಂಗಿನ ಕಾಯಿ ಕೇಳೋರಿಲ್ಲ!

ರೈತರು ಬೆಳೆಯುವ ಯಾವ ಬೆಳೆಗೂ ಇಂದು ಒಳ್ಳೆಯ ದರ ಇಲ್ಲ ಎನ್ನುವ ಪರಿಸ್ಥಿತಿ ಇದೆ. ಅದು ಆಹಾರ ಬೆಳೆಗಳಿರಲಿ, ವಾಣಿಜ್ಯ ಬೆಳೆಗಳಿರಲಿ. ವಾಣಿಜ್ಯ ಬೆಳೆ ರೈತರೂ ಈಗ ಸುರಕ್ಷಿತರಲ್ಲ. ತೆಂಗು ಆಹಾರ ಬೆಳೆಯಾಗಿಯೂ ಹಾಗು ವಾಣಿಜ್ಯ ಬೆಳೆಯಾಗಿಯೂ ಹೌದು. ಆದರೆ ತೆಂಗು ದರ ಕುಸಿತವಾಗಿ ರೈತರು ಕಂಗಾಲಾಗಿದ್ದಾರೆ. ಕರಾವಳಿ ಜಿಲ್ಲೆಗಳು ಹಾಗು ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮಂಡ್ಯ, ದಾವಣಗೆರೆ, ಮೈಸೂರು ಮುಂತಾದ ಜಿಲ್ಲೆಗಳಲ್ಲಿ ತೆಂಗು ಬೆಳೆದಾರರು ಬೆಂಬಲ ಬೆಲೆ ಸಿಗದೇ ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರ ಕೊಬ್ಬರಿಗೆ 6250 ರೂಪಾಯಿ ಬೆಂಬಲ ಬೆಲೆ ನಿಗದಿ ಮಾಡಿದೆ. ಆದರೆ ಇದರಿಂದ ಹಾಕಿದ ಬಂಡವಾಳವೂ ವಾಪಸ್ಸು ಬರುವುದಿಲ್ಲ ಎಂಬುದು ರೈತರ ಅಳಲು. ವಿದೇಶಗಳಿಂದ ತೆಂಗಿನಕಾಯಿ ಉತ್ಪನ್ನಗಳು ಆಮದಾಗುತ್ತಿರುವುದು, ತೆಂಗಿನ ಎಣ್ಣೆಯಲ್ಲಿ ವೈಟ್ ಆಯಿಲ್‌ನಂತಹ ಪೆಟ್ರೋಲಿಯಂ ಉತ್ಪನ್ನಗಳನ್ನು ಕಲಬೆರಕೆ ಮಾಡುತ್ತಿರುವುದು, ಎಳನೀರು ಅಪಾರ ಪ್ರಮಾಣದಲ್ಲಿ ಬಳಕೆಯಾಗುತ್ತಿರುವುದರಿಂದ ತೆಂಗು ಮತ್ತು ಕೊಬ್ಬರಿಗೆ ಬೇಡಿಕೆ ಕುಸಿದಿದೆ. ಇದರಿಂದಾಗಿ ಬೆಲೆಯೂ ಕುಸಿದಿದೆ ಎಂದು ಹೇಳಲಾಗುತ್ತಿದೆ. ಇದರ ಜತೆಯಲ್ಲಿ ಮಧ್ಯವರ್ತಿಗಳ ಹಾವಳಿಯಿಂದಾಗಿಯೂ ಮೂಲ ರೈತರಿಗೆ ಸರಿಯಾದ ದರ ಸಿಗುತ್ತಿಲ್ಲ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೇವಲ ಹೇಳಿಕೆಗಳಲ್ಲೇ ಪರಿಹಾರ ಒದಗಿಸುತ್ತಿವೆ! ಅನ್ನದಾತನ ಅಳಲು ಕೇಳೋರ‍್ಯಾರು ಹೇಳಿ?

ಓಲಾ ಡ್ರೈವರ್ಸ್ ಬೀದಿಪಾಲು..!

ಮೊಬೈಲ್ ಆಪ್ ಆಧಾರಿತ ಸಾರಿಗೆ ಕಂಪನಿಗಳಾದ ಓಲಾ ಮತ್ತು ಊಬರ್ ತನ್ನ ಸಂಸ್ಥೆಗಳ ಬೆಳವಣಿಗೆಗೆ ಹಗಲು ರಾತ್ರಿ ಎನ್ನದೇ ದುಡಿದ 1500ಕ್ಕೂ ಹೆಚ್ಚಿನ ಡ್ರೈವರ್‌ಗಳನ್ನು ಸೇವೆಯಿಂದ ವಜಾ ಮಾಡಿದೆ. ತರಾವರಿ ಇನ್ಸೆಂಟೀವ್‌ಗಳ ಆಸೆ ತೋರಿಸಿ ಕಬ್ಬಿನ ರಸ ಹಿಂಡಿದಂತೆ ಡ್ರೈವರ್‌ಗಳನ್ನು ಹಿಂಡಿ, ಲಾಭ ಮಾಡಿಕೊಂಡ ಈ ವಿದೇಶಿ ಕಂಪನಿಗಳು, ತಮ್ಮ ಸಂಸ್ಥೆಗಳಿಗೆ ಕೋಟಿ ಕೋಟಿ ಆದಾಯ ಬರಲು ಕಾರಣರಾದ ಡ್ರೈವರ್‌ಗಳನ್ನು ಈಗ ಏಕಾಏಕಿ ಕೆಲಸದಿಂದ ಕಿತ್ತು ಹಾಕಿವೆ. ಈ ರೀತಿ ವಜಾ ಮಾಡಲು ಸಂಸ್ಥೆ ಕೊಟ್ಟಿರುವ ಕಾರಣಗಳೆಂದರೆ ಗ್ರಾಹಕರೊಂದಿಗೆ ಅನುಚಿತ ವರ್ತನೆ, ನಿಗದಿಗಿಂತ ಹೆಚ್ಚು ಬಾಡಿಗೆ ವಸೂಲಿ, ಸಮಯಕ್ಕೆ ಸರಿಯಾಗಿ ಗ್ರಾಹಕರ ಬಳಿ ಹೋಗದಿರುವುದು, ಆಪ್‌ನ್ನು ಚಾಲನೆಯಲ್ಲಿ ಇಡದಿರುವುದು ಇತ್ಯಾದಿ. ಹೇಳಿಕೇಳಿ ಇವು ಆಪ್ ಆಧಾರಿತ ಕಂಪನಿಗಳು. ಚಾಲಕರ ಚಲನ-ವಲನಗಳ ಮೇಲೆ ಸದಾ ಕಣ್ಣಿಟ್ಟಿರುವಾಗ ಈ ತರಹದ ಕಾರಣಗಳು ತೀರ ಆಧಾರ ರಹಿತವಾದವು ಮತ್ತು ವಜಾಕ್ಕೂ ಮುನ್ನ ಯಾವುದೇ ನೋಟೀಸ್ ಕೂಡ ನೀಡಲಾಗಿಲ್ಲ. ವಿದೇಶಿ ಕಂಪನಿಗಳ ಹೈರ್ ಅಂಡ್ ಫೈರ್ ಪಾಲಿಸಿಗೆ ಇದೊಂದು ಸಣ್ಣ ಉದಾಹರಣೆ ಅಷ್ಟೇ. ಇವೆಲ್ಲಾ ಜಾಗತೀಕರಣದ ಬಳುವಳಿಗಳು!

ಜೆಸಿಬಿಗಳ ಘರ್ಜನೆ... ರಾಜ ಕಾಲುವೆ ಒತ್ತುವರಿ ತೆರವು

ಬೆಂಗಳೂರಿನಲ್ಲಿ ಈಗ ಜೆಸಿಬಿಗಳು ಘರ್ಜಿಸುತ್ತಿವೆ. ಇತ್ತೀಚಿಗೆ ಬಿದ್ದ ಭಾರಿ ಮಳೆಯಿಂದ ಕೃತಕ ನೆರೆ ಸೃಷ್ಟಿಯಾಗಿ ಜನ ಪರಿಪಾಟಲು ಪಡಬೇಕಾಯಿತು. ಇದರಿಂದ ಎಚ್ಚೆತ್ತ ರಾಜ್ಯ ಸರ್ಕಾರ ಕೃತಕ ನೆರೆಗೆ ಕಾರಣವಾದ ರಾಜಕಾಲುವೆ ಒತ್ತುವರಿದಾರರನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸಲು ಮುಂದಾಗಿದೆ. ರಾಜಕಾಲುವೆಗಳನ್ನು ಒತ್ತುವರಿ ಮಾಡಿ ಲೇಔಟ್‌ಗಳನ್ನು ನಿರ್ಮಿಸಿ ಅಮಾಯಕರಿಗೆ ಸೈಟುಗಳನ್ನು ಹಂಚಿ, ಅದರಲ್ಲಿ ಮನೆಕಟ್ಟಿಕೊಂಡು ಕೆಳ ಮಧ್ಯಮ ವರ್ಗದ ಜನ ಮತ್ತು ಬಡಜನರು ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆಯ ಬಲಿಪಶುಗಳಾಗಿದ್ದಾರೆ. ಹತ್ತಾರು ವರ್ಷ ದುಡಿದು ಕೂಡಿಟ್ಟು ಪುಟ್ಟ ಮನೆಯೊಂದನ್ನು ಕಟ್ಟಿಕೊಂಡವರ ಗೋಳು ಇಂದು ಕೇಳುವವರಿಲ್ಲ. ಇಂಥವರ ಮನೆಗಳ ಮೇಲೆ ಜೆಸಿಬಿಗಳು ದಾಳಿ ಮಾಡುತ್ತಿವೆ. ಕಟ್ಟಿದ ಕನಸಿನ ಮನೆ ತಮ್ಮ ಕಣ್ಣೆದುರೇ ಕುಸಿದು ಬೀಳುವುದನ್ನು ನೋಡಲಾಗದೇ ಬಿಕ್ಕಿ ಬಿಕ್ಕಿ ಅಳುವ ಮಹಿಳೆಯರ ಆಕ್ರಂದನಕ್ಕೆ ಕರಗುವವರು ಯಾರೂ ಇಲ್ಲ. ಬಿಲ್ಡರ್‌ಗಳು ಮತ್ತು ಅಧಿಕಾರಿಗಳ ಮೋಸದಾಟಕ್ಕೆ ಜನ ಅಕ್ಷರಶಃ ಬೀದಿ ಪಾಲಾಗಿದ್ದಾರೆ. ಕೆಲ ಬಲಾಢ್ಯರ ಮನೆಗಳನ್ನು, ದೊಡ್ಡ ಬಿಲ್ಡರುಗಳ ಅಪಾರ್ಟ್ ಮೆಂಟ್ ಒಡೆಯುವಾಗ ಮಾತ್ರವೇ ಮಾತುಕತೆ ನಡೆಯುತ್ತದೆ. ಮಾತುಕತೆ ಒಪ್ಪಂದವಾಗಿ, ರಾಜಕಾಲುವೆಯ ಮಾರ್ಗವೇ ಬದಲಾಗುತ್ತದೆ ಇದು ನಮ್ಮ ಅವಸ್ಥೆ!



ಡಿ.ಎಲ್. ಇಲ್ಲವೇ? ಹತ್ತು ಸಾವಿರ ದಂಡ ಕಟ್ಟಿ!

ಮೋದಿಯವರ ಮಹತ್ವಾಕಾಂಕ್ಷಿ ಮಸೂದೆ ಕೆಲ ರಾಜ್ಯಗಳ ತೀವ್ರ ವಿರೋಧದ ನಡುವೆಯೂ 'ರಸ್ತೆ ಸುರಕ್ಷತಾ ಮಸೂದೆ – 2015' ಕಾಯ್ದೆಯಾಗಿ ಅಂಗೀಕಾರಗೊಂಡು ದಾಳಿ ಮಾಡಲು ರೆಡಿಯಾಗಿದೆ. ಕಾಯ್ದೆ ಹೆಸರು ಮಾತ್ರವೇ 'ಸುರಕ್ಷಿತ' ಆದರೆ ಟ್ರಾಫಿಕ್ ಉಲ್ಲಂಘಿಸಿದರೆ ಜೇಬು 'ಅಸುರಕ್ಷಿತ'. ಈ ಹೊಸ ಕಾಯ್ದೆ ಹೇಳುವಂತೆ ಗರಿಷ್ಠ 3 ಲಕ್ಷದವರೆಗೆ ದಂಡವಿದೆ, 7 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ವಾಹನದ ಫಿಟ್‌ನೆಸ್ ಪ್ರಮಾಣ ಪತ್ರವನ್ನು ಕಂಪನಿಗಳೇ ನೀಡಬಹುದು! ಇನ್ನು ಮುಂದೆ ಆರ್‌ಟಿಓಗಳ ಜಾಗದಲ್ಲಿ ಪ್ರೈವೇಟ್ ಏಜೆನ್ಸಿಗಳು ಬಂದು ಕೂರಲಿವೆ. ಇದರಿಂದ ಉದ್ಯೋಗಗಳು ಸೃಷ್ಟಿಯಾಗುತ್ತವಂತೆ, ಡಿ.ಎಲ್. ಇಲ್ಲದ ಚಾಲನೆಗೆ ಹತ್ತು ಸಾವಿರ!, ಮೂರನೇ ಬಾರಿ ಟ್ರಾಫಿಕ್ ಉಲ್ಲಂಘಿಸಿದ್ದಲ್ಲಿ ಡಿಎಲ್ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿದೆ. ಸಿಗ್ನಲ್ ಜಂಪ್‌ಗೆ ಒಂದು ಸಾವಿರ ಹೀಗೆ ಸಾಗುತ್ತವೆ ಅದರ ಇತರೆ ಕರಾಳ ಅಂಶಗಳು. ಈ ಹೊಸ ಕಾಯ್ದೆಯಿಂದ ಸಂಪೂರ್ಣವಾಗಿ ಅಪಘಾತಗಳನ್ನು ತಡೆಗಟ್ಟಬಹುದಂತೆ! ಹಾಗಂತ



ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅಭಯ ನೀಡಿದ್ದಾರೆ. ದುಬಾರಿ ದಂಡಗಳನ್ನು ನೆನಪಿಸಿಕೊಂಡು ಅಪಘಾತವಾದರೂ ಆಶ್ಚರ್ಯವಿಲ್ಲ!

'ರಿಯೋ'ದಲ್ಲಿ ಗುಜರಾತ್‌ಗೆ ಸ್ಥಾನವಿಲ್ಲ!

ಬ್ರೆಜಿಲ್‌ನ ರಿಯೋದಲ್ಲಿ ನಡೆಯುತ್ತಿರುವ ಒಲಂಪಿಕ್ಸ್– 2016 ಭರ್ಜರಿ ಓಪನಿಂಗ್ ಪಡೆದು ಕ್ರೀಡಾಪಟುಗಳು ಪದಕ ಬೇಟೆಯಲ್ಲಿ ತಲ್ಲೀನವಾಗಿದ್ದಾರೆ. ರಿಯೋ ಒಲಂಪಿಕ್ಸ್ ಆರಂಭಕ್ಕೂ ಮೊದಲೇ ವಿವಿಧ ಕಾರಣಗಳಿಗಾಗಿ ಸುದ್ದಿಯಲ್ಲಿತ್ತು. ಕೆಲವು ಕ್ರೀಡಾಪಟುಗಳ ಲಗೇಜುಗಳು ಕಳುವಾಗಿದ್ದವು. ಅಲ್ಲಿನ ಆತಿಥ್ಯ ವ್ಯವಸ್ಥಿತವಾಗಿರಲಿಲ್ಲ, ಅಧಿಕಾರಿಗಳು ಎಕ್ಸಿಕ್ಯುಟೀವ್ ಕ್ಲಾಸ್‌ನಲ್ಲಿ, ಕ್ರೀಡಾಳುಗಳು ಎಕಾನಮಿ ಕ್ಲಾಸ್‌ನಲ್ಲಿ ರಿಯೋಗೆ ಪ್ರಯಾಣಿಸಿದ್ದಾಗಿ ಮಹಿಳಾ ಕ್ರೀಡಾಪಟು ಒಬ್ಬರು ಆಪಾದಿಸಿದ್ದಾರೆ! ತ್ರಿಪುರಾದ ದೀಪಾ ಕರ್ಮಾಕರ್ ಇದೇ ಮೊದಲ ಬಾರಿಗೆ ಜಿಮ್ನಾಸ್ಟಿಕ್‌ನಲ್ಲಿ ಫೈನಲ್ ಪ್ರವೇಶಿಸಿ ದೇಶದ ಮಾನ ಕಾಪಾಡಿದ್ದಾರೆ. ಈ ಕಾರಣಗಳಿಂದ ರಿಯೋ ಒಲಂಪಿಕ್ಸ್ ಸುದ್ದಿಯಲ್ಲಿರುವಾಗಲೇ ಮತ್ತೊಂದು ಇಂಟ್ರೆಸ್ಟಿಂಗ್ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ಬಾರಿ ಒಲಂಪಿಕ್ಸ್‌ಗೆ ದೇಶವನ್ನು ಪ್ರತಿನಿಧಿಸಿ 120 ಜನ ಕ್ರೀಡಾಪಟುಗಳು ವಿವಿಧ ರಾಜ್ಯಗಳಿಂದ ಭಾಗವಹಿಸಿದ್ದಾರೆ. ಇದು ನಾವೆಲ್ಲಾ ಹೆಮ್ಮೆಪಡಬೇಕಾದ ದೇಶದ ಕ್ರೀಡಾ ಸಾಧನೆ. ಕರ್ನಾಟಕದಿಂದಲೂ 11ಜನ ಭಾಗವಹಿಸಿದ್ದಾರೆ. ಹರಿಯಾಣದಿಂದ ಅತಿ ಹೆಚ್ಚು (23) ಜನ ಪಾಲ್ಗೊಂಡಿದ್ದಾರೆ. ಹಾಗೆಯೇ ಯಾವೊಬ್ಬ ಕ್ರೀಡಾಪಟುವೂ ಭಾಗವಹಿಸದಿರುವ ರಾಜ್ಯವೆಂದರೆ ಅದು ಗುಜರಾತ್! ಇದೇ ಅಲ್ಲವೇ ಗುಜರಾತ್ ಮಾಡೆಲ್! 'ಗುಜರಾತ್ ಮಾಡೆಲ್' ದೇಶದಲ್ಲಿ ಪೂರ್ಣ ಜಾರಿಯಾದರೆ ಮುಂದಿನ ಒಲಿಂಪಿಕ್ಸ್ ಗೆ ಬರಿಯ ಅಧಿಕಾರಿಗಳು ಹೋಗಬೇಕು ಅಷ್ಟೇ!

‘ಶಾಂತಿ, ಸಹಬಾಳ್ವೆ ಮತ್ತು ಅಭಿವೃದ್ಧಿಗಾಗಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ’ ಎಂಬ ಘೋಷಣೆಯ ಅಡಿಯಲ್ಲಿ ಬಿಜಿವಿಎಸ್ ಧಾರವಾಡದಲ್ಲಿ ಜುಲೈ 25–26, 2016 ರಂದು ಎರಡು ದಿನಗಳ ಕಾಲ ರಾಜ್ಯಮಟ್ಟದ ಶೈಕ್ಷಣಿಕ ಹಬ್ಬವನ್ನು ಸಂಘಟಿಸಿದ್ದು, ಇದರ ಅಂಗವಾಗಿ “ಟೀಚರ್” ಮಾಸ ಪತ್ರಿಕೆಯ 14 ನೇ ವಾರ್ಷಿಕೋತ್ಸವವನ್ನು ಸಂಘಟಿಸಿಲಾಗಿತ್ತು. ಕಾರ್ಯಕ್ರಮದಲ್ಲಿ ನಾಡಿನ ಮೂಲೆ ಮೂಲೆಗಳಿಂದ ನೂರಾರು ಶಿಕ್ಷಕರು, ಶಿಕ್ಷಣಾಸಕ್ತರು, ವಿಜ್ಞಾನಾಸಕ್ತರು ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿಗೆ ಕಾರಣರಾದರು. ಶಿಕ್ಷಣ ಕ್ಷೇತ್ರದಲ್ಲಿನ ಹಾಗೂ ಸಮಾಜದಲ್ಲಿನ ಆತಂಕಕಾರಿ ಬೆಳವಣಿಗೆಗಳ ಕುರಿತು ಚಿಂತನ ಮಂಥನ ನಡೆಸಿದರು. ಒಂದು ಸಂಕ್ಷಿಪ್ತ ವರದಿ.

‘12 ನೇ ತರಗತಿಯವರೆಗೆ ಶಿಕ್ಷಣ ಸಾರ್ವತ್ರಿಕಗೊಳ್ಳಲಿ’: ಬಂಜಗೆರೆ ಜಯಪ್ರಕಾಶ್

ಆರ್. ರಾಮಕೃಷ್ಣ



ಶೈಕ್ಷಣಿಕ ಹಬ್ಬದ ಆಶಯ ಭಾಷಣವನ್ನು ಮಾಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅ ಧ್ಯಕ್ಷರು ಹಾಗು ಖ್ಯಾತ ಸಾಹಿತಿಗಳಾದ ಡಾ॥ ಬಂಜಗೆರೆ ಜಯಪ್ರಕಾಶ್ ಮಾತನಾಡಿ “ಸ್ವಾತಂತ್ರ್ಯಾ ನಂತರದ ಮೊದಲ ಇಪ್ಪತ್ತು–ಮೂವತ್ತು ವರ್ಷಗಳು ದೇಶದಲ್ಲಿ ಶಾಲೆ ತೆರೆಯುವ ಆಂದೋಲನ ನಡೆದರೆ ದುರಾದೃಷ್ಟವಶಾತ್ ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ ದೇಶದಲ್ಲಿ ಸರ್ಕಾರಿ ಶಾಲೆ ಮುಚ್ಚುವ ‘ಆಂದೋಲನ’ ನಡೆ–ಯುತ್ತಿದೆ. 80 ದಶಕದಲ್ಲಿ ‘ಸರ್ವರಿಗೂ ಸಾರ್ವತ್ರಿಕ ಶಿಕ್ಷಣ, ಸರ್ವರಿಗೂ ಉಚಿತ ಶಿಕ್ಷಣ’ ಎಂಬ ಘೋಷಣೆಗಳನ್ನು ನೀಡಲಾಗುತ್ತಿತ್ತು. ಆದರೆ ಸರಕಾರದ ನೀತಿಗಳಲ್ಲಿ ಈ ವಿಷಯದಲ್ಲಿ ಹಿಮ್ಮುಖ ನಡಿಗೆ ಪ್ರಾರಂಭವಾಗಿದೆ... ಸರ್ಕಾರಗಳು ಕನಿಷ್ಟ ಪ್ರೌಢಶಾಲೆಯ ಹಂತದ ವರೆಗಾದರೂ ಖಾಸಗಿ ಶಾಲೆಗಳಿಗೆ ಅವಕಾಶ ರದ್ದುಪಡಿಸಿ ಎಲ್ಲರಿಗೂ ಒಂದೇ ರೀತಿಯ ಶಿಕ್ಷಣ ನೀಡುವಂತೆ ಮಾಡಬೇಕು.” ಎಂದು ಪ್ರತಿಪಾದಿಸಿದರು.

ಮೊದಲಿಗೆ ಸಮಾರಂಭವನ್ನು ಉಧ್ಘಾಟಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಎಂ.ಐ.ಸವದತ್ತಿರವರು ಮಾತನಾಡಿ “ಶಿಕ್ಷಣ ಎಂಬುದು ಎಲ್ಲರಿಗೂ ಬೇಕು. ಇದು ಮೌಲ್ಯಯುತವಾಗಿರಬೇಕು ಎಂಬುದು ಕೊಠಾರಿ ಆಯೋಗದ ಪ್ರಮುಖ ಉದ್ದೇಶವಾಗಿತ್ತು. ಆದರೆ ಇಂದಿಗೆ ಆಯೋಗ ವರದಿ ಸಲ್ಲಿಸಿ 50 ವರ್ಷವಾದರೂ ಕೊಠಾರಿ ಆಯೋಗದ ಉದ್ದೇಶ ಸಮರ್ಥವಾಗಿ ಜಾರಿಯಾಗಿಲ್ಲ. ಇದಕ್ಕೆ ಸರ್ಕಾರಗಳ ಇಚ್ಛಾಶಕ್ತಿ ಕೊರತೆಯು ಪ್ರಮುಖ ಕಾರಣವಾಗಿದೆ.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪರವರು, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯಾಧ್ಯಕ್ಷರು ಹಾಗೂ ಖ್ಯಾತ ವಿಜ್ಞಾನಿಗಳೂ ಆದ ಪ್ರೊ.ಎಂ.ಆರ್.ಎನ್. ಮೂರ್ತಿರವರು, ಟೀಚರ್ ಪತ್ರಿಕೆಯ ಗೌರವ ಸಂಪಾದಕರಾದ ಪ್ರೊ.ಗಂಗಾಧರ ಮೂರ್ತಿರವರು ಮಾತನಾಡಿದರು.

ಕಾರ್ಯಕ್ರಮದ ಮೊದಲಿಗೆ ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿಗಳಾದ ಹೆಚ್.ಎಸ್.ಜಯಕುಮಾರ್ ಪ್ರಾಸ್ತಾವಿಕ ನುಡಿಗಳ ನ್ನಾಡಿದರು.

‘ಕೊಠಾರಿ ಆಯೋಗದ 50 ವರ್ಷಗಳಲ್ಲಿ ಶಿಕ್ಷಣ ಮತ್ತು ಶಿಕ್ಷಕ.’

ಜುಲೈ 25 ರಂದು **‘ಕೊಠಾರಿ ಆಯೋಗದ 50 ವರ್ಷಗಳಲ್ಲಿ ಶಿಕ್ಷಣ ಮತ್ತು ಶಿಕ್ಷಕ.’** ಗೋಷ್ಠಿಗೆ ಪ್ರವೇಶಿಕೆಯನ್ನು ಬಿ.ಜಿ.ವಿ.ಎಸ್. ಉಪಾಧ್ಯಕ್ಷರಾದ ಅಹ್ಮದ್ ಹಗರೆ ನೀಡಿದರು. ‘ಡಾ. ಕೊಠಾರಿ ಆಯೋಗದ ಭರವಸೆಗಳು ಮತ್ತು ಅನುಷ್ಠಾನ’ ಈ ಕುರಿತು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ(ಎನ್.ಐ.ಎ.ಎಸ್.)ಯ ಸವಿತಾ ಸುರೇಶ್ ಮಾತನಾಡಿ ಕೊಠಾರಿ ಆಯೋಗದ ಮುಂದೆ ಎರಡು ಪ್ರಮುಖ ಉದ್ದೇಶಗಳಿದ್ದವು. ದೇಶದ ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲನೆ ಮಾಡುವುದು. ಎರಡನೆಯದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸುವುದು. ಸಾಮಾಜಿಕ ನ್ಯಾಯವನ್ನು ಒದಗಿಸಬೇಕಾದರೆ ಸಾಮಾನ್ಯ ಶಾಲೆ ಅಥವಾ ನೆರೆಹೊರೆ ಶಾಲೆ ನೀತಿ ಜಾರಿಗೆ ಬರಬೇಕೆಂಬ ಒಲವು ಡಾ. ಕೊಠಾರಿಯವರಿಗೆ ಇತ್ತು. ನೆರೆಹೊರೆ ಶಾಲೆ ಎಂದರೆ ಯಾವುದೇ ಮಗು ತಾನು ಎಲ್ಲಿ ವಾಸಿಸುತ್ತದೋ ಅಲ್ಲಿಯ ಸಮೀಪದ ಶಾಲೆಗೆ ಸೇರುವುದು. ಯಾವುದೇ ಧಾರ್ಮಿಕ ಪಂಗಡ, ವರ್ಗ ಹಿನ್ನೆಲೆಗಳ ತಾರತಮ್ಯವಾಗಲಿ ಇರುವಂತಿಲ್ಲ. ಖಾಸಗಿ ಶಾಲೆ ಸರಕಾರಿ ಶಾಲೆ ಎಂಬ ಬೇಧಗಳಿಲ್ಲ. ಎಲ್ಲವು ಸಾರ್ವಜನಿಕ ಶಾಲೆಗಳು. ಪೋಷಕರ ಆಯ್ಕೆಯ ಹಕ್ಕಿಗೆ ಧಕ್ಕೆಯಾಗುತ್ತದೆ ಎಂಬ ಕಾರಣ–ಕ್ಕೆ ಈ ನೀತಿಗೆ ಸಮಿತಿಯ ಒಳಗೆ ವಿರೋಧವಿತ್ತು ಎಂದ ಸವಿತಾ ಅವರು ಜನಸಾಮಾನ್ಯರ ಜೊತೆ ಓದುವುದು ಎಲ್ಲರಿಗೂ ಒಳ್ಳೆಯದು. ಎಲ್ಲರೂ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಿದರೆ ಆಗ ಅವು ಉತ್ತಮವಾಗಿರಬೇಕಾದ ಒತ್ತಡ ಬೀಳುತ್ತದೆ ಎಂದು ಪ್ರತಿಪಾದಿಸಿದರು.

‘ಪ್ರಾಥಮಿಕ ಶಾಲೆಗಳ ಸ್ಥಿತಿಗತಿ ಮತ್ತು ಹೊಸ ಶಿಕ್ಷಣ ನೀತಿ’ ಎಂಬ ವಿಷಯದ ಕುರಿತು ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಸಂಘಟನೆಯ ಶೀಪಾದ್ ಭಟ್ ವಿಷಯ ಮಂಡಿಸಿದರು. ಸ್ವಾತಂತ್ರ್ಯದ 69 ವರ್ಷಗಳಲ್ಲಿ ಉತ್ತಮ ಚಲನಶೀಲತೆಯ ಬದಲಿಗೆ ಪ್ರಾಥಮಿಕ ಶಾಲಾ ಶಿಕ್ಷಣದ ಗುಣಮಟ್ಟ ಹಿಂದ–ಕ್ಕೆ ಹೋಗುತ್ತಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸರಕಾರಿ ಶಿಕ್ಷಕರು ಸಹ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸುವುದಿಲ್ಲ. ಯಾಕೆ ? ಎಂದು ಪ್ರಶ್ನಿಸಿದ ಅವರು ಶಾಲೆಗಳ ಗುಣಮಟ್ಟ ಹೆಚ್ಚಳಕ್ಕೆ ಜನಾಂದೋಲನ ರೂಪಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಶಿಕ್ಷಣ ಹಕ್ಕು ಕಾಯ್ದೆಯೊಳಗೆ ಸರಕಾರಿ ಶಾಲೆ ಇರುವ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಖಾಸಗಿ ಶಾಲೆ ತೆರೆಯುವಂತಿಲ್ಲ ಎಂಬ ಅಂಶವಿದ್ದು ಕೇರಳದಲ್ಲಿ ಈ ಅವಕಾಶವನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ವರದಿ ಇದೆ ಎಂದರು. ಸರಕಾರಿ ಶಾಲೆಗೆ ಮಕ್ಕಳು ಸೇರದೇ ಇರುವುದಕ್ಕೆ ಕೇವಲ ಇಂಗ್ಲೀಷ್ ಮಾಧ್ಯಮದ ಪ್ರಶ್ನೆ ಮಾತ್ರ ಕಾರಣವಲ್ಲ, ಈ ವಿಷಯದಲ್ಲಿ ಪೂರ್ವ ಪ್ರಾಥಮಿಕ ಶಾಲೆಯ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಪೂರ್ವ ಪ್ರಾಥಮಿಕ ಶಾಲೆಗೆಂದು ಖಾಸಗಿ ಶಾಲೆಗೆ ಸೇರಿದವರು ಪ್ರಾಥಮಿಕ ಶಿಕ್ಷಣಕ್ಕೆ ಮರಳಿ ಸರಕಾರಿ ಶಾಲೆಗೆ ಬರುವ ಸಂಭವ ತುಂಬಾ ಕಡಿಮೆ ಎಂದರು. ಕೊಠಾರಿ ಆಯೋಗ ಸಹ ಮಾತೃಭಾಷಾ ಶಿಕ್ಷಣದ ಪರವಾಗಿದೆ ಎಂದು ಶ್ರೀಪಾದ ಭಟ್ ಹೇಳಿದರು. ರಾಜ್ಯದಲ್ಲಿ 19 ಸಾವಿರ ಗುತ್ತಿಗೆ ಶಿಕ್ಷಕರಿದ್ದಾರೆ. ಶಿಕ್ಷಣಕ್ಕೆ ಸಂಪನ್ಮೂಲದ ಕೊರತೆ ಇದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದ ಕಿಮ್ಮನೆ ರತ್ನಾಕರ್ ಅವರೇ ಪರಿಸ್ಥಿತಿಯ ಬಗೆಗೆ ಅಸಹಾಯಕತೆ ವ್ಯಕ್ತಪಡಿಸಿದರು. ಪರಿಸ್ಥಿತಿ ಹಾಗಿದೆ ಎಂದರು.

ಕೇಂದ್ರದಲ್ಲಿ ಕಾಂಗ್ರೆಸ್ ಬಂದಾಗ ಒಂದು, ಬಿಜೆಪಿ ಬಂದಾಗ ಒಂದು ನೀತಿಯನ್ನು ಅನುಸರಿಸಲಾಗುತ್ತಿದೆ. ಭಾರತದಲ್ಲೆ ಹಿಂದೆ ಎಲ್ಲ ಇತ್ತು. ಆರ್ಯಭಟ ಉಪಗ್ರಹ ಹಾರಿಸಿದ್ದ ಎನ್ನುಂತಹ ಅವೈಜಾನಿಕ ವಿಚಾರಗಳನ್ನು ಈಗ ಹೊಸ ಶಿಕ್ಷಣ ನೀತಿಯ ಹೆಸರಿನಲ್ಲಿ ತರಲಾಗುತ್ತಿದೆ. ಪ್ರಾಥಮಿಕ ಶಾಲೆಗೆ ಸೇರುವ 26 ಕೋಟಿ ಮಕ್ಕಳಲ್ಲಿ ಉನ್ನತ ಶಿಕ್ಷಣಕ್ಕೆ ಬರುವವರು 6 ಕೋಟಿ ಮಾತ್ರ. ಮಧ್ಯೆ ಮಧ್ಯೆ ಶಿಕ್ಷಣ ಬಿಡುವ 20 ಕೋಟಿ ಮಕ್ಕಳ ಬಗೆಗೆ ಹೊಸ ಶಿಕ್ಷಣ ನೀತಿಯಲ್ಲಿ ಪ್ರಸ್ತಾಪ ಇಲ್ಲ ಎಂದು ಶ್ರೀಪಾದ ಭಟ್ ಅವರು ಹೇಳಿದರು.

‘ಪ್ರೌಢ ಮತ್ತು ಉನ್ನತ ಶಿಕ್ಷಣದ ಸ್ಥಿತಿಗತಿ ಮತ್ತು ಹೊಸ ಶಿಕ್ಷಣ ನೀತಿ’ ಎಂಬ ವಿಷಯದ ಕುರಿತು ಭಾರತ ವಿದ್ಯಾರ್ಥಿ ಫೆಡರೇಷನ್‌ನ ರಾಜ್ಯ ಅ ಧ್ಯಕ್ಷರಾದ ಅಂಬರೀಷ್ ಅವರು ವಿಷಯ ಮಂಡಿಸಿದರು. ಕೊಠಾರಿ ಆಯೋಗವು ಕೇಂದ್ರ ಸರಕಾರದ ಬಜೆಟ್‌ನಲ್ಲಿ ಶೇ. 10 ರಷ್ಟನ್ನು, ರಾಜ್ಯ ಸರಕಾರಗಳು ತಮ್ಮ ಬಜೆಟಿನ ಶೇ. 30 ರಷ್ಟನ್ನು ಒಟ್ಟಾರೆ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ ಶೇ 6 ರಷ್ಟನ್ನು ಶಿಕ್ಷಣಕ್ಕೆ ಮೀಸಲಿರಿಸಲು ಶಿಫಾರಸ್ಸು ಮಾಡಿದೆ. ಆದರೆ ಕೇಂದ್ರ ರಾಜ್ಯ ಸರಕಾರಗಳು ಈ ಶಿಫಾರಸ್ಸನ್ನು ಜಾರಿಗೆ ತಂದಿಲ್ಲ. ದೇಶದಲ್ಲಿ ಎಂದಿಗೂ ಜಿಡಿಪಿಯ ಶೇ. 4 ರಷ್ಟನ್ನು ಶಿಕ್ಷಣಕ್ಕೆ ನೀಡಿಲ್ಲ. ಇಂತಹ ನೀತಿಗಳಿಂದಾಗಿ ಇಂದು ರಿಯಲ್ ಎಸ್ಟೇಟ್ ಉದ್ಯಮದ ಜನರು ಶಿಕ್ಷಣ ರಂಗ ಪ್ರವೇಶಿಸುತ್ತಿದ್ದಾರೆ ಎಂದು ಅಂಬರೀಷ್ ಹೇಳಿದರು.

ರಾಜ್ಯದಲ್ಲಿ 14,195 ಪ್ರೌಢಶಾಲೆಗಳಿವೆ. ಅವುಗಳಲ್ಲಿ ಖಾಸಗಿ 5576, ಖಾಸಗಿ ಅನುದಾನಿತ 3,557 ಶಾಲೆಗಳು, 5061 ಸರಕಾರಿ ಶಾಲೆಗಳಿವೆ. ಇದು ಶಿಕ್ಷಣ ಖಾಸಗೀಕರಣದ ಸ್ಪಷ್ಟ ಸಾಕ್ಷ್ಯ ಎಂದ ಅಂಬರೀಷ್ 411 ಸರಕಾರಿ ಪದವಿ ಕಾಲೇಜುಗಳ ಪೈಕಿ 335 ಕಾಲೇಜುಗಳಿಗೆ ಖಾಯಂ ಪ್ರಾಂಶುಪಾಲರಿಲ್ಲದ ದುರಂತ ಸ್ಥಿತಿ ಇದೆ ಎಂದು ವಿವರಿಸಿದರು. ಹೊಸ ಶಿಕ್ಷಣ ನೀತಿಯು ವಿಶ್ವ ವಿದ್ಯಾಲಯಗಳಿಗೆ ಬಹುರಾಷ್ಟ್ರೀಯ ಕಂಪನಿಗಳ ಸಹಯೋಗವನ್ನು ಮತ್ತು ಅನುದಾನವನ್ನು ಪ್ರತಿಪಾದಿಸುತ್ತಿದೆ. ಇದು ಅಪಾಯಕಾರಿ ನೀತಿ. ಇಂತಹ ನೀತಿಗಳ ವಿರುದ್ಧ ಸಂಘಟಿತ ಹೋರಾಟ ನಡೆಯಬೇಕು ಎಂದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಅಪರ ಆಯುಕ್ತ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಮಾತನಾಡಿ ಜಾಗತೀಕರಣ ನೀತಿಗಳ ಪರಿಣಾಮವಾಗಿ ಶಿಕ್ಷಣದ ವ್ಯಾಪಾರೀಕರಣ ಆಗುತ್ತಿದೆ. ಕಾಯ್ದೆಗಳು ನೀತಿಗಳ ಬಗೆಗೆ ಸಂಸತ್ತು, ಶಾಸನ ಸಭೆಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಚರ್ಚಿಸುತ್ತಿಲ್ಲ ಎಂದು ವಿಷಾದಿಸಿದರು.

‘ಆಹಾರ ಪೌಷ್ಠಿಕತೆ ಮತ್ತು ಶಿಕ್ಷಣ’

ಗೋಷ್ಠಿ 2 ರಲ್ಲಿ ‘ಆಹಾರ ಪೌಷ್ಠಿಕತೆ ಮತ್ತು ಶಿಕ್ಷಣ’ ಎಂಬ ವಿಷಯದ ಕುರಿತು ವಿವರವಾಗಿ ಚರ್ಚಿಸಲಾಯಿತು. ಬಿಜಿವಿಎಸ್ ರಾಜ್ಯ ಉಪಾಧ್ಯಕ್ಷರಾದ ಪಿ.ಕೆ. ಅಬ್ದುಲ್ ಲತೀಫ್ ಅವರು ಪ್ರವೇಶಿಕೆಯ ಮಾತನಾಡಿ ಶಾಲೆಗಳಲ್ಲಿ ಬಿಸಿಯೂಟ ಜಾರಿಗೆ ಬರುವ ಮುಂಚಿನ ಅನುಭವವೊಂದನ್ನು ಹೇಳಿದರು. ‘ಹಸಿವು ಇಂಗಿಸಲು ಆಹಾರ ಭದ್ರತೆ’ ಎಂಬ ಕುರಿತು ಬಾಲಬಳಗ ಧಾರವಾಡದ ಡಾ. ಸಂಜೀವ್ ಕುಲಕರ್ಣಿ, ‘ಐಸಿಡಿಎಸ್ ಯೋಜನೆಯ ಅನುಭವಗಳು ಮತ್ತು ಕರ್ನಾಟಕ ಶಿಕ್ಷಣದಲ್ಲಿ ಆಹಾರ’ ಎಂಬ ವಿಷಯವಾಗಿ ಡಾ. ಗೋಪಾಲ ದಾಬಡೆ ಮಾತನಾಡಿದರು.

ಕರ್ನಾಟಕದಲ್ಲಿ ಮೂವರು ಮಕ್ಕಳಲ್ಲಿ ಒಂದು ಮಗು ಕಡಿಮೆ ತೂಕದ್ದಿದೆ. ಅಂದರೆ ಶೇ. 33 ಮಕ್ಕಳು ಕಡಿಮೆ ತೂಕದ ಮಕ್ಕಳಿವೆ. 6 ರಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ ಶೇ. 60 ರಷ್ಟು ಮಕ್ಕಳು ರಕ್ತಹೀನತೆ ಅನುಭವಿಸುತ್ತಿವೆ. ರಕ್ತಹೀನತೆ, ಅಪೌಷ್ಟಿಕತೆಗಳು ಮಕ್ಕಳ ಗ್ರಹಿಸುವ ಶಕ್ತಿಯ ಮೇಲೆ ಪರಿಣಾಮ ಬೀರುತ್ತವೆ ಎಂದ ವಿಷಯ ತಜ್ಞರು ರಾಜ್ಯದ ವಿಷಾದನೀಯ ಪರಿಸ್ಥಿತಿ ಕುರಿತು ವಿವರಿಸಿದರು.

‘ಸಾಮಾಜಿಕ ಅಭಿವೃದ್ಧಿ ಮಕ್ಕಳು ಮತ್ತು ಹೊರ ತಳ್ಳುವಿಕೆ’ ವಿಷಯವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಎಚ್.ಡಿ. ಪ್ರಶಾಂತ್ ಮಾತನಾಡಿ ಶಾಲಾ ಮಕ್ಕಳ ಹಸಿವಿನ ಪ್ರಶ್ನೆಯನ್ನು ಅಭಿವೃದ್ಧಿಯ ಪ್ರಶ್ನೆಯನ್ನಾಗಿ ನೋಡಬೇಕು. ಅಭಿವೃದ್ಧಿ ಎಂದರೆ ಮಾನವ ಅಭಿವೃದ್ಧಿ. ಶಿಕ್ಷಣ, ಆರೋಗ್ಯದ ಅಭಿವೃದ್ಧಿಯನ್ನು ಒಳಗೊಂಡ ನೈಜ ಅಭಿವೃದ್ಧಿ. ಆದರೆ ಉದಾರೀಕರಣದ ನೀತಿಗಳ ಭಾಗವಾಗಿ ಅನ್ನ ಕಿತ್ತುಕೊಳ್ಳುವ ನೀತಿಗಳು ಜಾರಿಗೆ ಬರುತ್ತಿವೆ. ಹಸಿವು ನೀಗದೇ ಇರುವ ತಂತ್ರವನ್ನು ಮಾಡಲಾಗುತ್ತಿದೆ ಎಂದು ಡಾ. ಪ್ರಶಾಂತ್ ಆತಂಕ ವ್ಯಕ್ತಪಡಿಸಿದರು. ಮತ್ತೊಂದು ಕಡೆ ಅಭಿವೃದ್ಧಿಯ ಹೆಸರಿನಲ್ಲಿ ರೈತರ ಭೂಮಿಯನ್ನು ಕಿತ್ತುಕೊಳ್ಳುವ ನೀತಿಗಳನ್ನು ಜಾರಿಗೆ ತರಲಾಗುತ್ತಿದೆ. ಎಂದೂ ಪ್ರಶಾಂತ್ ಕಟುವಾಗಿ ಟೀಕಿಸಿದರು.

ಗೋಷ್ಠಿಯ ಅಧ್ಯಕ್ಷತೆ ಡಾ. ಪ್ರಭು ಖಾನಾಪುರೆ ಗೌರವಾಧ್ಯಕ್ಷರು, ಬಿ.ಜಿ.ವಿ.ಎಸ್. ಕಲ್ಬುರ್ಗಿ ಇವರು ವಹಿಸಿದ್ದರು.

‘ಮೌಢ್ಯಾಚರಣೆ, ವೈಚಾರಿಕತೆ ಮತ್ತು ಸಮಾಜ’

‘ಮೌಢ್ಯಾಚರಣೆ, ವೈಚಾರಿಕತೆ ಮತ್ತು ಸಮಾಜ’ ಈ ಕುರಿತ ಗೊಷ್ಠಿಗೆ ಡಾ. ಬಂಜಗೆರೆ ಜಯಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಬಿಜಿವಿಎಸ್ ಜಂಟಿ ಕಾರ್ಯದರ್ಶಿ ಮುರುಗೇಶ್ ವಿ. ಕರ್ಕಿಕಟ್ಟಿ ಪ್ರವೇಶಿಕೆಯ ಮಾತನಾಡಿದರು. ‘ವೈಚಾರಿಕತೆ–ವೈಚಾರಿಕತೆಯ ಮೇಲಿನ ದಾಳಿ’ ವಿಷಯದ ಕುರಿತಾಗಿ ಭಾರತೀಯ ವಿಚಾರವಾದಿಗಳ ಸಂಘದ ಅಧ್ಯಕ್ಷರಾದ ಪ್ರೊ. ನರೇಂದ್ರ ನಾಯಕ್ ಅವರು ಮಾತನಾಡಿದರು. ಮೌಢ್ಯ ಅವೈಚಾರಿಕತೆಗಳ ವಿರುದ್ಧ ಸಮರ ಸಾರಬೇಕು ಎಂದ ನರೇಂದ್ರ ನಾಯಕ್ ಸ್ಥಾಪಿತ ಹಿತಾಸಕ್ತಿ ಇದನ್ನು ಸಹಿಸದೇ ದಾಳಿ ಮಾಡುತ್ತವೆ. ಅದೂ ಕರಾವಳಿ ಜಿಲ್ಲೆಗಳಲ್ಲಿ ಈ ದಾಳಿ ತೀವ್ರವಾಗಿದೆ ಎಂದರು. 28 ವರ್ಷಗಳ ತಮ್ಮ ವೃತ್ತಿ ಜೀವನದಲ್ಲಿ ಹಾಗೂ ಸುದೀರ್ಘ ಸಾರ್ವಜನಿಕ ಜೀವನದಲ್ಲಿ ಎದುರಿಸಿದ ಹಲವು ಕಿರಿಕಿರಿ, ದಾಳಿಗಳನ್ನು ವಿವರಿಸಿದ ನಾಯಕ್ ಅವರು ಗೋಮೂತ್ರದಿಂದ 440 ರೋಗಗಳು ವಾಸಿಯಾಗುತ್ತವೆ ಎಂಬ ಇತ್ತೀಚಿನ ಪ್ರಚಾರವನ್ನು ಖಂಡಿಸಿದರು. ವೈಜ್ಞಾನಿಕವಾಗಿ ನೋಡಿದರೆ ಗೋಮೂತ್ರ, ನಾಯಿಮೂತ್ರ ಎಲ್ಲವೂ ಒಂದೇ ಎಂದು ಪ್ರತಿಪಾದಿಸಿದರು. ಈ ಪ್ರಚಾರದ ಹಿಂದೆ ಪ್ಯಾಕೇಜ್ ಡೀಲ್ ಲಾಭಕೋರ ಹಿತಾಸಕ್ತಿ ಇದೆ ಎಂದು ನಾಯಕ್ ವಿವರಿಸಿದರು. ‘ಡಾ. ದಾಬೋಲ್ಕರ್ ಮತ್ತು ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿ’ ಕುರಿತಾಗಿ ಸಂಸ್ಥೆಯ ಅಧ್ಯಕ್ಷರಾದ ಅವಿನಾಶ್ ಪಾಟೀಲ್, ಸಂವಿಧಾನ ವೈಚಾರಿಕತೆ ಕುರಿತು ನ್ಯಾಯವಾದಿ ಬಸವ ಪ್ರಭು ಹೊಸಕೇರಿ ‘ಹೋರಾಟಗಾರ ಪನ್ಸಾರೆ’ ಕುರಿತು ಶುಭಂಕರ್ ಚಕ್ರವರ್ತಿ ವಿಷಯ ಮಂಡಿಸಿದರು.

‘ವೈಚಾರಿಕತೆ ಬೆಳೆಸುವಲ್ಲಿ ಶಿಕ್ಷಕರ ಪಾತ್ರ’, ಸಾಧಕರನ್ನು ಸನ್ಮಾನಿಸುವ ‘ಇವರು ನಮ್ಮವರು’ ಮುಂತಾದ ಗೋಷ್ಠಿಗಳು ನಡೆದವು. ■

10 ದೊಡ್ಡ ಕಾರ್ಪೊರೇಟ್‌ಗಳ ಸಾಲ ಬಾಕಿ ರೂ.5736820000000!

ಯಾರ 59,547 ಕೋಟಿ ರೂ, ಸಾಲ ಮನ್ನಾ, ಸರಕಾರಕ್ಕೆ ಗೊತ್ತಿಲ್ಲವಂತೆ!

'ಒಳ್ಳೆಯ ದಿನಗಳು' ಬಂದಿರುವುದು ಕಾರ್ಪೊರೇಟ್ ಕುಳಗಳಿಗೆ, ಚಮಚಾ ಬಂಡವಾಳಶಾಹಿಗಳಿಗೆ ಎಂಬ ಮಾತನ್ನು ಈಗ ಸರಕಾರವೇ ಒಪ್ಪಿಕೊಂಡಿದೆ. ಅತಿ ದೊಡ್ಡ ಹತ್ತು ಕಾರ್ಪೊರೇಟ್ ಗುಂಪುಗಳು ಸಾರ್ವಜನಿಕ ವಲಯದ ಬ್ಯಾಣುಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳಲ್ಲಿ ಅಗಾಧ ಮೊತ್ತವನ್ನು ಬಾಕಿಯಿಟ್ಟುಕೊಂಡಿದೆ ಎಂಬುದು ನಿಜವೇ ಎಂಬ ಪ್ರಶ್ನೆಗೆ ಉತ್ತರವಾಗಿ ಹಣಕಾಸು ರಾಜ್ಯಮಂತ್ರಿಗಳು ಆಗಸ್ಟ್ 2ರಂದು ರಾಜ್ಯಸಭೆಗೆ ಕೊಟ್ಟ ಮಾಹಿತಿ ಪ್ರಕಾರ ಮಾರ್ಚ್ 2016ರ ಅಂತ್ಯದ ವೇಳೆಗೆ ಅತಿ ದೊಡ್ಡ ಹತ್ತು ಕಾರ್ಪೊರೇಟ್ ಗುಂಪುಗಳ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲಗಳಲ್ಲಿ 5,73,682 ಕೋಟಿ ರೂ. ಮರುಪಾವತಿ ಮಾಡಿಲ್ಲ.

ರಿಝರ್ವ್ ಬ್ಯಾಂಕ್ 5ಕೋಟಿ ರೂ.ಗಳಿಗಿಂತ ಹೆಚ್ಚು ಬ್ಯಾಂಕ್ ಸಾಲ ಮಾಡುವವರ ಮಾಹಿತಿಗಳನ್ನು ಕಲೆ ಹಾಕುತ್ತದೆ. ಇಂತವರ ಸಾಲಬಾಕಿ ಮಾಹಿತಿಯನ್ನು ಕೆಲವೊಂದು ನಿರ್ದಿಷ್ಟ ಪರಿಸ್ಥಿತಿಗಳನ್ನು ಬಿಟ್ಟು, ಬೇರೆ ಯಾವುದೇ ಸಂದರ್ಭದಲ್ಲಿ ಅದು ಬಹಿರಂಗ ಪಡಿಸುವಂತಿಲ್ಲ ಎಂದು ಮಂತ್ರಿಗಳ ಉತ್ತರದಲ್ಲಿ ಹೇಳಲಾಗಿದೆ.

ಮೂಲರಚನೆ, ಉಕ್ಕು, ಜವಳಿ ಮುಂತಾದ ವಲಯುಗಳಲ್ಲಿ ಸುಸ್ತಿಸಾಲಗಳ ಪ್ರಮಾಣ ಬಹಳವಿದ್ದು ಈ ವಲಯುಗಳ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆರು ಸಾಲ ವಸೂಲಿ ಟ್ರಿಬ್ಯುನಲ್‌ಗಳ ರಚನೆಗೆ ಮಂಜೂರಾತಿ ನೀಡಲಾಗಿದೆಯಂತೆ. ಸಾಲಕ್ಕೆ ಗ್ಯಾರಂಟಿ ನೀಡಿದವರ ವಿರುದ್ಧವೂ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಸಲಹೆ ನೀಡಿರುವುದಾಗಿಯೂ ಅವರು ಹೇಳಿದರು.

ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತ 2015–16ರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು 59,547ಕೋಇಟ ರೂ.ಗಳಷ್ಟು ಸಾಲಗಳನ್ನು ಮನ್ನಾ ಮಾಡಿವೆ ಎಂದೂ ಅವರು ಹೇಳಿದರು. ಇಷ್ಟೇಅಲ್ಲ, ಖಾಸಗಿ ವಲಯದ ಬ್ಯಾಂಕುಗಳು ಕೂಡ 12017 ಕೋಟಿ ರೂ.ಗಳನ್ನು ಮತ್ತು ವಇದೇಶಿ ಬ್ಯಾಂಕುಗಳು 1057 ಕೋಟಿ ರೂ.ಗಳನ್ನು ಮನಾ ಮಾಡಿದವು ಎಂದು ಉತ್ತರದಲ್ಲಿ ಹೇಳಲಾಗಿದೆ.

ಇಷ್ಟೊಂದು ಪ್ರಮಾಣದಲ್ಲಿ ಸಾಲ ಮನ್ನಾಗಳ ಬಕ್ಷೀಸು ಪಡೆದವರು ಪ್ರಮುಖ ಖಾತೆದಾರರು ಯಾರು ಎಂಬ ಪ್ರಶ್ನೆಗೆ ರಿಝರ್ವ್ ಬ್ಯಾಂಕ್ ಳಿ ವಿವರಗಳು ಲಭ್ಯವಿಲ್ಲ ಎಂದು ಮಂತ್ರಿಗಳು ಹೇಳಿದ್ದಾರೆ.

ಸರಕಾರದ ಬಳಿ ಸಾಲ ಮನ್ನಾ ವಿವರಗಳು ಇಲ್ಲದಿರಲು ಹೇಗೆ ಸಾಧ್ಯ ಎಂದು ಸೀತಾರಾಮ್ ಯೆಚೂರಿ ಪ್ರಶ್ನಿಸಿದ್ದಾರೆ.

ಒಂದೆಡೆ ಇಷ್ಟೊಂದು ಸಾಲ ಮ್ಮನಾಪಡೆದ ಈ ಕಾರ್ಪೊರೇಟ್ ಕುಳಗಳಿಂದ ಇದೇ 2015–16ರಲ್ಲಿ ವಸೂಲಿ ಮಾಡಬೇಕಾಗಿದ್ದ 6,11,128 ಕೋಟಿ ರೂ.ಗಳನ್ನು ವಿವಿಧ ವಿನಾಯ್ತಿಗಳು ಮತ್ತು ರಿಯಾಯ್ತಿಗಳ ಮೂಲಕ ಬಿಟ್ಟು ಕೊಟ್ಟಿದೆ ಎಂದು ಸರಕಾರದ ಮಾಹಿತಿಗಳೇ ಹೇಳುತ್ತಿವೆ. ಇದು ವರ್ಷಕ್ಕೆ ಹೋಲಿಸಿದರೆ ಈ ರೀತಿಯ ಬಕ್ಷಿಷುಗಳಲಲಿ 10.2ಶೇ. ಏರಿಕೆಯಾಗಿದೆ. ಸಾಲ ಮರುಪಾವತಿ ಮಾಡದವರಿಗೆ ಮತ್ತಷ್ಟು ಬಕ್ಷೀಸು!

ಹೈದರಾಬಾದ್, ಜೆಎನ್‌ಯು ನಂತರ ಈಗ ಪಾಂಡಿಚೇರಿ ವಿವಿಗೆ 'ಒಳ್ಳೆಯ ದಿನಗಳು'!

ಪಾಂಡಿಚೇರಿ ವಿಶ್ವ ವಿದ್ಯಾಲಯ ವಿದ್ಯಾರ್ಥಿ ಮಂಡಳಿ ನಡೆಸುವ ಪತ್ರಿಕೆ 'ವೈಡರ್‌ಸ್ಟಾಂಡ್'ನ ಪ್ರತಿಗಳನ್ನು ಸುಡುವ ಮೂಲಕ ಎಬಿವಿಪಿ/ ಬಿಜೆಪಿ ಮತ್ತೆ ವಿಶ್ವ ವಿದ್ಯಾಲಯುಗಳ ಮೇಲೆ ದಾಳಿಯು ಸಂಘೀ ವಾದರಿಯುನ್ನು ಪ್ರಯೋಗಿಸಲು ಮುಂದಾಗಿದೆ ಎಂದು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ) ಕೇಂದ್ರೀಯ ಕಾರ್ಯಕಾರಿ ಸಮಿತಿ ಖಂಡಿಸಿದೆ.

ವಿದ್ಯಾರ್ಥಿ ಮಂಡಳಿ ಒಂದು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿರುವ ಮಂಡಳಿ. ಇದು ಪ್ರಕಟಿಸಿರುವ ವಾರ್ಷಿಕ ಪತ್ರಿಕೆಯಲ್ಲಿ ಕೇಂದ್ರ ಸರಕಾರ ಮತ್ತು ಪ್ರಸಕ್ತ ಶೈಕ್ಷಣಿಕ ಧೋರಣೆಗಳ ಬಗ್ಗೆ ವಿಮರ್ಶೆಗಳಿರುವ ಲೇಖನಗಳು ಪ್ರಕಟವಾಗಿರುವುದೇ ಸಂಘಿಗಳು ಕುಪಿತರಾಗಲು ಕಾರಣ, ಅದಕ್ಕೀಗ ಎಂದಿನ ಅವರ ಕಾರ್ಯಶೈಲಿಯಂತೆ ಅವರ 'ವಿವಿ ಪೋಲಿಸ್ ಪಡೆ' ಎಂದು ಈಗ ಕುಖ್ಯಾತಿ ಗಳಿಸಿರುವ ಎಬಿವಿಪಿಯನ್ನು ಬಳಸಿ ಕೊಳ್ಳಲಾಗಿದೆ. ಈ ಮಂದಿಯ ಬೆದರಿಕೆಗಳಿಂದಾಗಿ ಅದರ 3000 ಪ್ರತಿಗಳಿಗೆ ಬೀಗ ಹಾಕಿ ಇಡಲಾಗಿದೆ. ಪಾಂಡಿಚೇರಿ ವಿವಿ ಈ ಪತ್ರಿಕೆಯ ಮುಖ್ಯ ಸಂಪಾದಕರಿಗೆ ಶೋಕಾಸ್ ನೋಟೀಸ್ ಕೊಟ್ಟಿದೆ.

ಗಮನಿಸಬೇಕಾದ ಸಂಗತಿಯೆಂದರೆ ವಿದ್ಯಾರ್ಥಿಗಳಿಂದ ಆಯ್ಕೆಯಾದ ವಿದ್ಯಾರ್ಥಿ ಮಂಡಳಿಯ ಈ ಪತ್ರಿಕೆಯ ಬಿಡುಗಡೆ ಸಮಾರಂಭದಲ್ಲಿ ವಿದ್ಯಾರ್ಥಿ ಕಲ್ಯಾಣ ಡೀನ್ ಜತೆಗೆ ವಿವಿಯ ಹಂಗಾಮಿ ಉಪಕುಲಪತಿ ಅನಿಸಾ ಬಿ ಖಾನ್ ಸಹ ಭಾಗವಹಿಸಿದ್ದರು, ಅಲ್ಲದೆ ಅ ಪತ್ರಿಕೆಯಲ್ಲಿ ವಿದ್ಯಾರ್ಥಿಗಳ ಪ್ರಯತ್ನವನ್ನು ಶ್ಲಾಘಿಸುವ ಸಂದೇಶವನ್ನೂ ಕೊಟ್ಟಿದ್ದಾರೆ.

ಆದರೆ ಹೈದರಾಬಾದ್ ವಿವಿ ಮತ್ತು ಜೆಎನ್‌ಯುನಲ್ಲಿ ಆದಂತೆ ಎಬಿವಿಪಿ/ ಬಿಜೆಪಿ/ಆರೆಸ್ಸೆಸ್ ಒತ್ತಡದಿಂದ ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯ ವಿವಿಯ ಉಪಕುಲಪತಿಗಳಿಂದ ಈ ಬಗ್ಗೆ ವಿವರಣೆ ಕೇಳಿದ ನಂತರ ಈ ಎಲ್ಲ ದಮನ ಕ್ರಮಗಳು ಆರಂಭವಾಗಿವೆ. ಈಗ ತಕ್ಷಣವೇ ಕಾರ್ಯೋನ್ಮುಖವಾಗಿರುವ ಇದೇ ಮಂತ್ರಾಲಯ ಕಳೆದ ಜುಲೈ–ಆಗಸ್ಟ್‌ನಲ್ಲಿ ವಿದ್ಯಾರ್ಥಿಗಳು ಆಗಿನ ವಂಚಕ ಉಪಕುಲಪತಿಯನ್ನು ತೆಗೆಯಬೇಕು ಎಂದು ಆಗ್ರಹಿಸಿದಾಗ ಒಂದು ನಿರ್ಧಾರಕ್ಕೆ ಬರಲು 18 ದಿನಗಳನ್ನು ತೆ–ಗೆದುಕೊಂಡಿತ್ತು.

ಕಳೆದ ಕೆಲವು ವರ್ಷಗಳಿಂದ ಹೋರಾಟಗಳನ್ನು ನಡೆಸಿರುವ ವಿದ್ಯಾರ್ಥಿಗಳು ಕಳೆದ ವರ್ಷ ಚುನಾವಣೆಗಳಲ್ಲಿ ಎಸ್‌ಎಫ್‌ಐ–ಅಂಬೇಡ್ಕರ್ ವಿದ್ಯಾರ್ಥಿ ಸಂಘದ ಮೈತ್ರಿಕೂಟಕ್ಕೆ ಸಂಪೂರ್ಣ ವಿಜಯ ದೊರಕಿಸಿಕೊಟ್ಟಿದ್ದರು.

ಜಾವ್ಡೇಕರ್‌ಜೀ, ಶಿಕ್ಷಣ, ಪ್ರಜಾಪ್ರಭುತ್ವ ಮತ್ತು ನಮ್ಮ ಭವಿಷ್ಯಗಳ ಮೇಲಿನ ದಾಳಿಯನ್ನು ದಯವಿಟ್ಟು ನಿಲ್ಲಿಸಿ"

ಇದು ವಿದ್ಯಾರ್ಥಿಗಳು ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳಿಗೆ ಎಸ್‌ಎಂಎಸ್ ಮತುತ ಸಾಮಾಜಿಕ ಮಾಧ್ಯಮಗಳ ಮೂಲಕ ಕಳಿಸುತ್ತಿರುವ ಸಂದೇಶ. ಇದು ವಿಶ್ವ ವಿದ್ಯಾಲಯಗಳ ಮೇಲಿನ ದಾಳಿಗಳ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ಆರಂಭಿಸಿರುವ ಅಖಿಲ ಭಾರತ ಎಸ್‌ಎಂಎಸ್ ಮತ್ತು ಸಾಮಾಜಿಕ ಮಾಧ್ಯಮ ಪ್ರಚಾರದ ಒಂದು ಭಾಗ. 10ಲಕ್ಷ ಸಹಿಗಳನ್ನು ಸಂಗ್ರಹಿಸಿ ರಾಷ್ಟ್ರಪತಿಗಳಿಗೆ ಸಲ್ಲಿಸುವ ಕಾರ್ಯಕ್ರಮವನ್ನೂ ಎಸ್‌ಎಫ್‌ಐ ಹಮ್ಮಿಕೊಂಡಿದೆ.

ಇವರು ಹುಸಿ ಗೋರಕ್ಷಕರೋ, ನೈಜ ಗೋರಕ್ಷಕರೋ?

ಪ್ರಧಾನ ಮಂತ್ರಿಗಳು ಆಗಸ್ಟ್ 6 ರಂದು, ನಂತರ ಆಗಸ್ಟ್ 7ರಂದೂ ಹುಸಿ ಗೋರಕ್ಷಕರ ಮೇಲೆ ಹರಿಹಾಯ್ದ ಮೇಲೂ ಗೋರಕ್ಷಕರ ಹಾವಳಿ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಆಗಸ್ಟ್ 10ರಂದು ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ಅಮಲಪುರಂ ಪಟ್ಟಣದ ಜಾನಕಿಪೇಟದಲ್ಲಿ ವಿದ್ಯುತ್ ತಂತಿ ತಗುಲಿ ಸತ್ತ ದನದ ಚರ್ಮ ಕೀಳಲೆಂದು ದನದ ಒಡೆಯ ಕರೆಸಿಕೊಂಡಿದ್ದ ಇಬ್ಬರು ದಲಿತ ಸೋದರರನ್ನು ಹಿಗ್ಗಾಮುಗ್ಗಾ ಥಳಿಸಿದ ಘಟನೆ ವರದಿಯಾಗಿದೆ. ಅವರೀಗ ಆಸ್ಪತ್ರೆಯಲ್ಲಿದ್ದಾರೆ.

ಅದೇ ದಿನ ಉತ್ತರ ಭಾರತದಲ್ಲಿ ಅಲಿಘಡದಲ್ಲಿ ಭಜರಂಗ ದಳದ 'ಗೋರಕ್ಷಕರು' ಹಸುಗಳನ್ನು ಕದ್ದೊಯ್ಯುತ್ತಿದ್ದಾರೆ ಎಂಬ ಗುಮಾನಿಯ ಮೇಲೆ ನಾಲ್ವರನ್ನು ಹಿಡಿದು ಬಡಿದಿರುವ ಘಟನೆ ವರದಿಯಾಗಿದೆ.

ಪ್ರಧಾನ ಮಂತ್ರಿಗಳು ಹೀಗೆ 'ಗೋರಕ್ಷಕರು' ಎನಿಸಿಕೊಳ್ಳುವವರಲ್ಲಿ 70–80ಶೇ. ಹುಸಿ ಗೋರಕ್ಷಕರು, ವಾಸ್ತವವಾಗಿ ಅವರು ಸಮಾಜ–ವಿರೋಧಿ ಕೃತ್ಯಗಳಲ್ಲಿ ತೊಡಗಿರುವವರು ಎಂದಿದ್ದರು.

ಪ್ರಧಾನ ಮಂತ್ರಿಗಳ ಹೇಳಿಕೆಗೆ ಆರೆಸ್ಸೆಸ್‌ನಿಂದ ಬೆಂಬಲ ದೊರೆತರೂ ಸಂಘ ಪರಿವಾರದ ಇತರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ. ಅಖಿಲ ಭಾರತ ಹಿಂದೂ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಎಂದು ಹೇಳಿಕೊಳ್ಳುವ ಚಂದ್ರಪ್ರಕಾಶ ಕೌಶಿಕ್ ಎಂಬಾತ ಮೋದಿಯವರು ಪ್ರಧಾನಿ ಪಟ್ಟಕ್ಕೆ ಲಾಯಕ್ಕಿಲ್ಲ ಎಂದರೆ, ಅಖಿಲ ಭಾರತ ಗೋರಕ್ಷಾ ದಳ ಎಂಬುದರ ವಕ್ತಾರ ಪ್ರಧಾನಿಗಳು ಇನ್ನೂ ಇನ್ನೂ ತಮ್ಮ ಟೀ ಮಾರುವ ಮಾನಸಿಕತೆಯಿಂದ ಹೊರಬಂದಿಲ್ಲ ಎಂದಿದ್ದಾನೆ. ವಿಹೆಚ್‌ಪಿಯ ಗುಜರಾತ್ ಘಟಕ ಮೋದಿಯವರು ಇದಕ್ಕೆ 2019ರಲ್ಲಿ ಬೆಲೆ ತೆರಲಿದ್ದಾರೆ ಎಂದು ಬೆದರಿಸಿದೆ.

ಪ್ರಧಾನಿಗಳ ಬೆಂಬಲಕ್ಕೆ ಬಂದ ಆರೆಸ್ಸೆಸ್‌ಗೆ ಕೂಡ 70–80ಶೇ. ಹುಸಿ ಎಂಬ ಬಗ್ಗೆ ಸಮ್ಮತಿ ಇದ್ದಂತಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್‌ನೊಂದಿಗೆ ಮಾತಾಡುತ್ತ ಆರೆಸ್ಸೆಸ್ ವಕ್ತಾರ ಮನಮೋಹನ ವೈದ್ಯ, ಪ್ರಧಾನಿಗಳು 80ಶೇ. ಟಿಪ್ಪಣಿಯನ್ನು ತಪ್ಪಿಸಬಹುದಾಗಿತ್ತು ಎಂದಿದ್ದಾರಂತೆ. ಅದನ್ನು ಅವರು ಮರುದಿನ ಸರಪಡಿಸಿಕೊಂಡು 'ಹಿಡಿಯಷ್ಟು' ಗೋರಕ್ಷಕರು ಎಂದು ಹೇಳಿರುವುದರತ್ತ ಅವರು ಗಮನ ಸೆಳೆದಿದ್ದಾರೆ. ಆದರೆ ಪ್ರಧಾನಿಗಳ ಖಂಡನೆಯ ಮೂರೇ ದಿನದೊಳಗೆ ಗೋರಕ್ಷಣೆಗಿಳಿದ ಮತ್ತು ಮುಂದೆಯೂ ಇಳಿಯಬಹುದಾದ ಪಡೆಗಳು ಹುಸಿ ಪಟ್ಟಿಗೆ ಸೇರುತ್ತವೋ, ನೈಜ ಪಟ್ಟಿಗೋ ಎಂದು ಸರ್ಟಿಫಿಕೇಟ್ ಕೊಡುವವರಾರು?

ಗುಜರಾತಿನಲ್ಲಿ ಭುಗಿಲೆದ್ದ ದಲಿತರ ಆಕ್ರೋಶದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಆನಂದಿಬೇನ್ ಪಟೇಲ್ ಸ್ಥಾನದಲ್ಲಿ ಪಕ್ಷದೊಳಗೆ ಹಲವರ ವಿರೋಧದ ನಡುವೆ ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದ ಮತ್ತು ಮೊದಲ ಬಾರಿಯಷ್ಟೇ ಶಾಸಕರಾಗಿರುವ ವಿಜಯ್ ರೂಪಾಣಿಯವರನ್ನು ಆರಿಸಲಾಗಿದೆ.

ಇನ್ನು ಮಂದೆ ಗುಜರಾತಿನಲ್ಲಿ ಅಮಿತ್ ಸಹಾ ಅವರದ್ದೇ ಆಳ್ವಿಕೆ ಎಂದು ಪಾಟಿದಾರ್ ಆಂದೋಲನದ ಮುಖಂಡ ಹರ್ದಿಕ್ ಪಟೇಲ್ ಹೇಳಿದ್ದಾರೆ –ಸುದ್ದಿ



ವ್ಯಂಗ್ಯಚಿತ್ರ: ಪಿ.ಮಹಮ್ಮದ್,
ವಿಜಯ ಕರ್ನಾಟಕ

'ಒಳ್ಳೆಯ ದಿನ'ಗಳ ಡೈರಿ

MAY 2014 | 2014 MAY

ವೇದರಾಜ ಎನ್.ಕೆ.



ಕಾಶ್ಮೀರಿ ಬಾಲಕಿ ಇಂಶಾ ಒಳ್ಳೆಯ ದಿನಗಳನ್ನು ನೋಡಬಲ್ಲಳೇ?

ದಿಲ್ಲಿಯ ಆಸ್ಪತ್ರೆಯೊಂದರಲ್ಲಿ ಕಣ್ಣಿಗೆ ಮತ್ತು ಹಣೆಗೆ ಬ್ಯಾಂಡೇಜ್ ಸುತ್ತಿಕೊಂಡು ಮಲಗಿರುವ ಇಂಶಾ ಸುಂದರ ಕಾಶ್ಮೀರ ಕಣಿವೆ ಶೋಪಿಯಾನ್‌ನ ಸಾಡೊ ಎಂಬಲ್ಲಿದ್ದ 14 ವರ್ಷದ ಬಾಲಕಿ. ಚಂದ್ರನನ್ನು ನೋಡಿ ಆಕೆ ಈಗ ಒಂದು ತಿಂಗಳಾಯಿತು. ಈದ್ ಹಬ್ಬ ಮುಗಿದಿತ್ತು. ಹೊರಗೆ ಕೇಳಬರುತ್ತಿದ್ದ ಪ್ರತಿಭಟನೆಗಳ ದನಿ ಅಂದು ಕೇಳ ಬರಲಿಲ್ಲ. ಇದ್ದಕ್ಕಿದ್ದಂತೆ ಏಕೆ ಈ ಮೌನ ಎಂದು ನೋಡಲು ತನ್ನ ಎರಡನೇ ಅಂತಸ್ತಿನಲ್ಲಿದ್ದ ಮನೆಯಿಂದ ಕೆಳಗೆ ಇಣಿಕಿದಳು. ಭದ್ರತಾ ಪಡೆಗಳವರು ಇನ್ನೂ ಗಸ್ತು ತಿರುಗುತ್ತಿದ್ದರು. ಈಕೆ ಇಣುಕುತ್ತಿದ್ದುದನ್ನು ನೋಡಿ ಆಕೆಯ ಮೇಲೆ ಗುರಿಯಿಟ್ಟರು. ಅವರು ಹಾರಿಸಿದ ಪೆಲಟ್ ನೇರವಾಗಿ ಆಕೆಯ ಹಣೆಗೆ ತಗುಲಿತು. ಅದರಿಂದ ಹಾರಿದ ತುಣುಕುಗಳು ಆಕೆಯ ಕಣ್ಣನ್ನು ಮುಚ್ಚಿಸಿದವು. ಅವೀಗ ದೃಷ್ಟಿ ಕಳಕೊಂಡಿವೆ. ಶ್ರೀನಗರದಲ್ಲಿ ಚಿಕಿತ್ಸೆ ಕೊಡಲಾಗದೆ ಆಕೆಯನ್ನು ದಿಲ್ಲಿಗೆ ತರಲಾಗಿದೆ. ಎರಡು ಸರ್ಜರಿಗಳಾಗಿವೆ. ಆದರೆ ದೃಷ್ಟಿ ಮರಳುವ ಸಾಧ್ಯತೆ ಬಹಳ ಕಡಿಮೆ ಎನ್ನಲಾಗಿದೆ.

ಆಕೆ ಭಯೋತ್ಪಾದಕಳಂತೂ ಅಲ್ಲ, ಪ್ರತಿಭಟನೆಯಲ್ಲಿಯೂ ಭಾಗವಹಿಸಿರಲಿಲ್ಲ, ಆದರೆ ಮುರಿದ ವಚನಗಳಿಗೆ, ಸಂದರ್ಭಸಾಧಕ ಮೈತ್ರಿಗಳಿಗೆ ಕಾಶ್ಮೀರ ತೆರುತ್ತಿರುವ ಬೆಲೆಯ ಸಂಕೇತವಾಗಿದ್ದಾಳೆ ಎನ್ನುತ್ತಾರೆ ಆಕೆಯನ್ನು ದಿಲ್ಲಿಯ ಆಸ್ಪತ್ರೆಯಲ್ಲಿ ನೋಡಲು ಹೋದ ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್. ಇತಿಹಾಸ ಎತ್ತಿರುವ ಪ್ರಶ್ನೆಗಳಿಗೆ ಬುಲೆಟ್, ಪೆಲೆಟ್ ಅಥವ ಲಾಠಿ ಅಥವ ಒಂದು ಭದ್ರತಾ ಶಿಬಿರ ಉತ್ತರ ಕೊಡಬಲ್ಲದು ಎಂದು ನಂಬಿರುವ ಭಾರತೀಯ ಪ್ರಭುತ್ವದ ಸ್ವರೂಪಕ್ಕೆ 14 ವರ್ಷದ ಬಾಲಕಿ ಇಂಶಾ ಸಾಕ್ಷಿಯಾಗಿದ್ದಾಳೆ ಎಂದು ನೋವಿನಿಂದ ಬೃಂದಾ ಹೇಳುತ್ತಾರೆ.

ಇಂಶಾಳ ತಂದೆ ಮುಷ್ತಾಕ್ ಒಬ್ಬ ಟ್ರಕ್ ಚಾಲಕ. ಇತ್ತೀಚೆಗೆ ಅಪಘಾತಕ್ಕೀಡಾದ ನಂತರ ಮೊದಲಿನಂತೆ ಆದಾಯ ತರುವ ಸ್ಥಿತಿಯಲ್ಲಿಲ್ಲ. ಸಾಲದ್ದಕ್ಕೆ ಇತ್ತೀಚೆಗೆ ಸೋದರನನ್ನೂ ಕಳಕೊಂಡು ಆತನ ಕುಟುಂಬದ ಹೊಣೆಯನ್ನೂ ಹೊತ್ತಿದ್ದಾನೆ. ಮಗಳನ್ನು ಉಳಿಸಿಕೊಳ್ಳಲು 50,000ರೂ. ಸಾಲ ಮಾಡಿ ದಿಲ್ಲಿಗೆ ಕರೆ ತಂದಿದ್ದಾನೆ. ಆತ ಸ್ವಾಭಿಮಾನಿ, ತನ್ನ ಬಗ್ಗೆ, ತನ್ನ ನೋವಿನ ಬಗ್ಗೆ ಹೇಳುತ್ತಿಲ್ಲ, ನಮಗೆ ಎಂದಾದರೂ ನ್ಯಾಯ ದೊರೆತೀತೇ ಎಂದಷ್ಟೇ ಕೇಳುತ್ತಾನೆ. ದಿಲ್ಲಿಯಲ್ಲಿ ಆಳುತ್ತಿರುವವರು ಇದಕ್ಕೆ ಉತ್ತರ ಕೊಡಬೇಕಾಗಿದೆ ಎನ್ನುತ್ತಾರೆ ಬೃಂದಾ ಕಾರಟ್.

ದಿಲ್ಲಿಯಲ್ಲಿ, ದೇಶದ ಜನತೆಗೆಲ್ಲ ಒಳ್ಳೆಯ ದಿನಗಳ ಕನಸನ್ನು ಮಾರಿರುವ ಪ್ರಧಾನಿಗಳು ಒಂದು ತಿಂಗಳು ದಿವ್ಯಮೌನ ವಹಿಸಿದ್ದವರು, ಮೊನ್ನೆಯಷ್ಟೇ ಮಧ್ಯಪ್ರದೇಶಕ್ಕೆ ಹೋಗಿ ಮೌನ ಮುರಿದಿದ್ದಾರೆ, ನಾವೆಲ್ಲ ಭಾರತೀಯರು ಕಾಶ್ಮೀರವನ್ನು ಪ್ರೀತಿಸುತ್ತೇವೆ ಎಂದಿದ್ದಾರೆ, 'ಮಾನವೀಯತೆ, ಪ್ರಜಾಪ್ರಭುತ್ವ ಮತ್ತು ಕಾಶ್ಮೀರಿತನ' ಎಂಬ ಹಿಂದಿನ ಪ್ರಧಾನ ಮಂತ್ರಿ ವಾಜಪೆಯಿಯವರ ಮಂತ್ರಪಠಣ ಮಾಡಿದ್ದಾರೆ, ಇದಕ್ಕೆಲ್ಲ ಪಾಕಿಸ್ತಾನದ ಪಿತೂರಿಯೇ ಕಾರಣ ಎಂದಿದ್ದಾರೆ. ಆದರೆ ಇದಕ್ಕೆ ಪೆಲಟ್‌ಗಳನ್ನು ಪ್ರಯೋಗಿಸಿ ನೂರಕ್ಕೂ ಹೆಚ್ಚು ಕಾಶ್ಮೀರಿ ಯುವಜನರನ್ನು ಕುರುಡಾಗಿಸುವುದು ಅಗತ್ಯವಿತ್ತೇ ಎಂಬ ಪ್ರಶ್ನೆಗೆ ಉತ್ತರ ನೀಡಲಿಲ್ಲ.

ಬಹುಶಃ ಅವರಿಗೆ ಇದೊಂದು ಪ್ರಶ್ನೆಯೇ ಇಲ್ಲ. **ಬಿಜೆಪಿಗೆ ಕಾಶ್ಮೀರ ಒಂದು ಪ್ರದೇಶದ ಪ್ರಶ್ನೆಯಷ್ಟೇ. ಆದರೆ ಕಾಶ್ಮೀರ ವಾಸ್ತವವಾಗಿ ಭಾರತೀಯ ಗಣತಂತ್ರದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ಸ್ವರೂಪಕ್ಕೆ ಪರೀಕ್ಷೆಯನ್ನು ಒಡ್ಡಿದೆ ಎನ್ನುತ್ತಾರೆ ಬೃಂದಾ ಕಾರಟ್.**



ಕಾರ್ಪೊರೇಟ್–ಕೋಮುವಾದಿ ಮೈತ್ರಿ ಸಂಭಾಳಿಸಲು ಹಲವು ತಂತ್ರಗಳು

ಇವುಗಳಲ್ಲಿ ಆಯ್ದ ವಿಷಯಗಳಲ್ಲಿ ನರೇಂದ್ರ ಮೋದಿಯವರ ದಿವ್ಯಮೌನವೂ ಒಂದು ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಟ್ನಾಯಕ್. ವಾಸ್ತವವಾಗಿ, ಅವರ ಮೌನವು ಎರಡು ಅನುಕೂಲ ಪಡೆಯುವ ತಂತ್ರ–ಚುನಾವಣೆಗಳಲ್ಲಿ ಲಾಭಕ್ಕಾಗಿ ಕೋಮುವಾದಿ ಪುಂಡು ಪೋಕರಿಗಳ (ಸದ್ಯಕ್ಕೆ ಗೋರಕ್ಷಕರ) ಜೊತೆ ಸದ್ದಿಲ್ಲದೆ ಷಾಮೀಲಾಗಿ, ಕೋಮು ಧೃವೀಕರಣ ಉಂಟುಮಾಡಿಸುವುದು. ಇನ್ನೊಂದೆಡೆ, ಕಾರ್ಪೊರೇಟ್–ಪರ ಬುದ್ಧಿಜೀವಿಗಳಿಗೆ ಮೋದಿಯವರು ತುಂಬಾ ಎತ್ತರದಲ್ಲಿದ್ದಾರೆ ಎಂಬ ಭ್ರಮೆ ಕಲ್ಪಿಸಲು ಅವಕಾಶ ಮಾಡಿ ಕೊಡುವುದು. ಪ್ರೊ. ಪಟ್ನಾಯಕ್ ಈ ಲೇಖನದಲ್ಲಿ ಇಂತಹ ಇತರ ತಂತ್ರಗಳನ್ನೂ ಬಯಲಿಗೆಳೆದಿದ್ದಾರೆ.

2014ರ ಚುನಾವಣೆಯ ಬಳಿಕ ಅಧಿಕಾರ ದಲ್ಲಿರುವ ಕಾರ್ಪೊರೇಟ್–ಕೋಮುವಾದಿ ಮೈತ್ರಿ ಕುದುರಿಸಿದವರಿಗೆ ಈಗ ಅದನ್ನು ಹುಷಾರಾಗಿ ಸಂಭಾಳಿಸುವ ಪರಿಸ್ಥಿತಿ ಬಂದಿದೆ. ಏಕೆಂದರೆ, ಅದರಲ್ಲಿರುವ ಘಟಕಗಳ ಪರಸ್ಪರ ಸಂಬಂಧ ಚೆನ್ನಾಗಿಲ್ಲ.

ಹಿಂದುತ್ವ ಸಮೂಹದ ಸ್ವದೇಶಿ ಜಾಗರಣ ಮಂಚ ಮತ್ತು ಕೆಲವು ಕಾರ್ಮಿಕ ಸಂಘಟನೆಗಳಿಗೆ ತಮ್ಮ ಪರಿವಾರವು ಕಾರ್ಪೊರೇಟ್‌ಗಳಿಗೆ ಕೊಡುವ ಬೆಂಬಲ ಕಳವಳ ಉಂಟು ಮಾಡಿದೆ. ಅದೇ ರೀತಿಯಲ್ಲಿ, ಕಾರ್ಪೊರೇಟ್ ಬಳಗದ ಕೆಲವು ನಾಯಕಮಣಿಗಳಿಗೆ ಕೋಮುವಾದವು ನುಂಗಲಾರದ ತುತ್ತಾಗಿದೆ. ಅದಕ್ಕಿಂತಲೂ ಮುಖ್ಯವಾಗಿ, ಅನೇಕ ಕಾರ್ಪೊರೇಟ್–ಪರ ಬುದ್ಧಿಜೀವಿಗಳು, ಎನ್‌ಡಿಎ ಸರ್ಕಾರದ ಕೆಲವು ವ್ಯಕ್ತಿಗಳ ಅತಿರೇಕದ ಕೋಮುವಾದಿ ವರ್ತನೆಯಿಂದ ಹೇಳಿಕೊಳ್ಳಲಾಗದ ಮುಜುಗುರ ಅನುಭವಿಸುತ್ತಿದ್ದಾರೆ. ನವ–ಉದಾರವಾದಿಗಳು ಅನುಸರಿಸುತ್ತಿರುವ ಆರ್ಥಿಕ ಬೆಳವಣಿಗೆಯ ಪಥವನ್ನು ಸಾರ್ವಜನಿಕ ಸಂವಾದಗಳಲ್ಲಿ ಸಮರ್ಥಿಸುವುದೇ ಈ ಬುದ್ಧಿಜೀವಿಗಳ ಕೆಲಸ. ಕಾರ್ಪೊರೇಟ್‌ಗಳು ಬಯಸುವ ಸುಧಾರಣೆಗಳನ್ನು ತುರ್ತಾಗಿ ಜಾರಿಮಾಡಲು ಸರ್ಕಾರವು ನೇಮಕ ಮಾಡುವ ತಜ್ಞರ ಸಮಿತಿಗಳಲ್ಲಿ ಈ ಬುದ್ಧಿಜೀವಿಗಳು ಸದಸ್ಯರಾಗಿರುತ್ತಾರೆ. ಇವರು ತಯಾರಿಸುವ ವರದಿ ಸಣ್ಣ ವಸ್ತುಗಳನ್ನು ಮಾರುವ ಸ್ವಯಂಚಾಲಿತ ಯಂತ್ರವು (slot-machine) ಟೋಕನ್ ಹಾಕಿದ ಕೂಡಲೇ ವಸ್ತುವನ್ನು ಉದುರಿಸುವ ರೀತಿಯಲ್ಲಿಯೇ ಇರುತ್ತದೆ. ಕಾರ್ಪೊರೇಟ್–ಕೋಮುವಾದಿ ಮೈತ್ರಿ ಮುಂದುವರೆಯಲು ಎರಡೂ ಕಡೆಯಲ್ಲಿರುವ ಇಂತಹ ಮೊಂಡುತನದ ವ್ಯಕ್ತಿಗಳನ್ನು ಹದ್ದುಬಸ್ತಿನಲ್ಲಿ ಇಡಬೇಕಾಗುತ್ತದೆ.

ಅದಕ್ಕಾಗಿ ಕೆಲವು ತಂತ್ರಗಳನ್ನು ಹೆಣೆಯಲಾಗಿದೆ. ಹಿಂದುತ್ವ ಸಮೂಹದ **ಕೆಲವು ನವ ಉದಾರವಾದದ ದೂಷಕರನ್ನು ಬಾಯಿ ಮುಚ್ಚಿಸುವ ಸಲುವಾಗಿ, ಎದ್ದು ಕಾಣುವ ಉನ್ನತಾಧಿಕಾರಿಯೊಬ್ಬನನ್ನು ಆಗೊಮ್ಮೆ ಈಗೊಮ್ಮೆ ವಜಾ/ಎತ್ತಂಗಡಿ ಮಾಡಲಾಗುತ್ತದೆ. ಇದ–ರಿಂದ ಯಾವ ತೊಂದರೆಯೂ ಆಗುವುದಿಲ್ಲ. ಏಕೆ–ಂದರೆ, ಐಎಂಎಫ್, ವಿಶ್ವಬ್ಯಾಂಕ್ ಮತ್ತು ಅಮೆರಿಕನ್ ಯೂನಿವರ್ಸಿಟಿಗಳಲ್ಲಿ ತಯಾರಾದ ಅಧಿಕಾರಿಗಳು ದಂಡಿಯಾಗಿ ಸಿಗುತ್ತಾರೆ**. ಅವರಲ್ಲಿ ಯಾರನ್ನು ಆಯ್ಕೆ ಮಾಡಿಕೊಂಡರೂ ನವ–ಉದಾರ ನೀತಿಗಳ ಮುಂದುವರಿಕೆಗೆ ಯಾವ ತೊಂದರೆಯೂ ಆಗುವುದಿಲ್ಲ. ಅದು ಹಿಂದುತ್ವ ಸಮೂಹದಲ್ಲಿ ನವ–ಉದಾರ ನೀತಿಗಳ ಬಗ್ಗೆ ಕಳವಳಗೊಂಡವರಿಗೆ ಸಮಾಧಾನವನ್ನೂ ಮತ್ತು ದೂಷಿಸುವವರಿಗೆ ಹುಸಿ ವಿಜಯವನ್ನೂ ಕೊಡುತ್ತದೆ. ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಂ ರಾಜನ್ ಪ್ರಕರಣದಲ್ಲಿ ಆದದ್ದೂ ಇದೇ ಕತೆ. ರಾಜನ್ ನಂತರ ಯಾರನ್ನು ಕೂರಿಸಿದರೂ ರಿಸರ್ವ್ ಬ್ಯಾಂಕಿನ ನೀತಿಯಲ್ಲಾಗಲಿ ಅಥವಾ ನವ ಉದಾರ ನೀತಿಗಳ ಮುಂದುವರಿಕೆಯಲ್ಲಾಗಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದರೆ, ರಾಜನ್ ಅವರನ್ನು ವಜಾ ಮಾಡಿದ್ದರಿಂದ(ಹೀಗೆ ಹೇಳುವುದೇ ಸರಿ)ಹಿಂದುತ್ವ ಸಮೂಹದಲ್ಲಿನ ನವ–ಉದಾರ ನೀತಿಗಳ ದೂಷಕರು ಹಿಗ್ಗಿ ಹೀರೆಕಾಯಿ ಆದರು. ರಾಜನ್‌ರ ನಿರ್ಗಮನದಿಂದ ಹೂಡಿಕೆದಾರರು ಹಿಂಜರಿಯುತ್ತಾರೆ ಎಂಬ ಗದ್ದಲ ಜೋರಾದಷ್ಟೂ ದೂಷಕರು ಮತ್ತಷ್ಟು ಹಿಗ್ಗಿದರು.

ಇಂತಹ ಒಂದು ಸಂಗತಿ ಮೊದಲನೆಯದಲ್ಲ. ವಾಜಪೇಯಿ ಸರ್ಕಾರದ ಅವಧಿಯಲ್ಲಿ, ಮೊದಲ ಬಾರಿಗೆ ಕಾರ್ಪೊರೇಟ್–ಕೋಮುವಾದಿ ಮೈತ್ರಿ ಕುದುರಿಸುತ್ತಿದ್ದ ಸಮಯದಲ್ಲಿ, ಆರ್‌ಎಸ್‌ಎಸ್ ಒತ್ತಾಯಕ್ಕೆ ಮಣಿದು ಮೊಂಟೆಕ್‌ಸಿಂಗ್ ಅಹ್ಲುವಾಲಿಯಾ ಅವರನ್ನು ವಜಾಮಾಡಲಾಗಿತ್ತು. ಆರ್‌ಎಸ್‌ಎಸ್ ತನ್ನ ಮಂದೆಯನ್ನು ಖುಷಿಯಾಗಿರಿಸುವ ಸಲುವಾಗಿ ಹೀಗೆ ಮಾಡಿತ್ತು. ಪರಿವಾರದ ಮಂದಿಗೆ ಆಗಲೂ ಖುಷಿಯಾಗಿತ್ತು. ಮೊಂಟೆಕ್ ಅವರನ್ನು ವಜಾ ಮಾಡಿದ್ದರಿಂದ ನವ–ಉದಾರ ನೀತಿಗಳ ಮುಂದುವರಿಕೆಗೆ ತೊಂದರೆ ಆಗಿರಲಿಲ್ಲ. ಏಕೆಂದರೆ, ಅಂತಹ ಮಂದಿ ಅನೇಕರಿದ್ದಾರೆ.

ಒಂದೇ ನಾಣ್ಯದ ಎರಡು ಮುಖಗಳು

ಇನ್ನೊಂದೆಡೆಯಲ್ಲಿ, ಕಾರ್ಪೊರೇಟ್ ಬಳಗದ ನವ–ಉದಾರವಾದಿ ಬುದ್ಧಿಜೀವಿಗಳು, ಹಿಂದುತ್ವದ ಪುಂಡು ಪೋಕರಿಗಳಿಗೂ ಮತ್ತು ವಿಕಾಸ ಪುರುಷ ನರೇಂದ್ರ ಮೋದಿಯವರಿಗೂ ನಡುವೆ ಭಿನ್ನತೆಯ ಒಂದು ಪರದೆ ಎಳೆಯುವ ಚಮತ್ಕಾರ ಮಾಡುತ್ತಾರೆ. ಕೋಮುವಾದಿ ಕೃತ್ಯಗಳಲ್ಲಿ ತೊಡಗಿರುವವರು ಪುಂಡು ಪೋಕರಿಗಳಷ್ಟೇ. ಮೋದಿಯವರು ಬಹಳ ಎತ್ತರದಲ್ಲಿದ್ದಾರೆ. ಅವರು ಅಭಿವೃದ್ಧಿಗೆ ಬದ್ಧರಾಗಿದ್ದಾರೆ. ಆದ್ದರಿಂದ ಅವರನ್ನು ಬೆಂಬಲಿಸಬೇಕು ಎಂಬುದಾಗಿ ಕತೆ ಕಟ್ಟುತ್ತಾರೆ. ಆದರೆ, ನರೇಂದ್ರ ಮೋದಿ ಮತ್ತು ಅಮಿತ್ ಷಾ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಇದೇ ಅಮಿತ್ ಷಾ ಉತ್ತರ ಪ್ರದೇಶದಲ್ಲಿ ಭಾಜಪದ ಚುನಾವಣಾ ಪ್ರಚಾರದ ಉಸ್ತುವಾರಿಯಾಗಿದ್ದ ಅವಧಿಯಲ್ಲಿ, ಮುಜ಼ಫರ್‌ನಗರ ಸೇರಿದಂತೆ ಅನೇಕ ಸ್ಥಳಗಳಲ್ಲಿ ಇದೇ ಪುಂಡು ಪೋಕರಿಗಳು ಉಂಟುಮಾಡಿದ ಕೋಮು ಗಲಭೆಗಳ ಲಾಭ ಪಡೆದು ಇದೇ ನರೇಂದ್ರ ಮೋದಿ ಅಧಿಕಾರ ಗಿಟ್ಟಿಸಿಕೊಂಡರು. **ದೇಶದ ಉದ್ದಗಲಕ್ಕೂ ಕೋಮುದ್ವೇಷ ಹರಡುತ್ತಿರುವವರ ಬಗ್ಗೆ ಇದೇ ನರೇಂದ್ರ ಮೋದಿಯವರು ಈ ಹೊತ್ತಿನವರೆಗೂ ಚಕಾರವೆತ್ತಿಲ್ಲ. ಇದೆಲ್ಲವನ್ನೂ ಉದ್ದೇಶ ಪೂರ್ವಕವಾಗಿ ಮರೆತ ಬುದ್ಧಿಜೀವಿಗಳು ಪಾಪಪ್ರಜ್ಞೆಯಿಂದ ಹೊರಬರಲು ಮೋದಿಯವರು ಬಹಳ ಎತ್ತರದಲ್ಲಿದ್ದಾರೆ ಎಂದು ಹೊಗಳುತ್ತಿದ್ದಾರೆ.**

ಮೋದಿಯವರ ಭಿನ್ನತೆಯ ಇತ್ತೀಚಿನ ಪ್ರಕರಣವು ಅವರಿಗೂ ಮತ್ತು ಗೋವು ರಕ್ಷಕರಿಗೂ ಸಂಬಂಧಿಸಿದೆ. ಈ ಗೋರಕ್ಷಕರು ಗೋವು ರಕ್ಷಣೆಯ ಸ್ವಯಂಘೋಷಣೆ ಮಾಡಿಕೊಂಡು, ಕಾನೂನು ಕೈಗೆತ್ತಿಕೊಂಡು, ಸತ್ತ ದನದ ಚರ್ಮ ಸುಲಿಯುವ ಕಾಯಕದಲ್ಲಿ ತೊಡಗಿದ ದಲಿತರನ್ನು ಅಮಾನುಷವಾಗಿ ಥಳಿಸುವವರು ಮತ್ತು ದನದ ಮಾಂಸ ತಿಂದಿದ್ದಾರೆ ಎನ್ನುವ ಅನಿಸಿಕೆಯಲ್ಲಿ ಮುಸ್ಲಿಮರನ್ನು ಕೊಲ್ಲುವವರು. ಈ ಗೋರಕ್ಷಕರು ಕೆಟ್ಟವರು, ಮೋದಿ ಒಳ್ಳೆಯವರು ಎಂದು ಹೇಳುವ ಈ ಬುದ್ಧಿಜೀವಿಗಳು, ಈ ಗೋರಕ್ಷಕರ ದುಷ್ಕೃತ್ಯಗಳ ಬಗ್ಗೆ ಮೋದಿಯವರ ಬಾಯಿಂದ ಒಂದು ಖಂಡನೆಯ ಶಬ್ದವೂ ಬಂದಿಲ್ಲ ಎಂಬ ಮೂಲ ಅಂಶವನ್ನೇ ಗಮನಿಸುವುದಿಲ್ಲ. ವಾಸ್ತವವಾಗಿ, ಅವರ ಮೌನವು ಎರಡು ಅನುಕೂಲ ಪಡೆಯುವ ಒಂದು ತಂತ್ರವಾಗಿದೆ. ಒಂದು, ಚುನಾವಣೆಗಳಲ್ಲಿ ಲಾಭ ಪಡೆಯುವ ಉದ್ದೇಶದಿಂದ ಗೋರಕ್ಷಕರ ಜೊತೆ ಸದ್ದಿಲ್ಲದೆ ಷಾಮೀಲಾಗಿ, ಕೋಮು ಧೃವೀಕರಣ ಉಂಟುಮಾಡಿಸುವುದು. ಇನ್ನೊಂದು, ಕಾರ್ಪೊರೇಟ್–ಪರ ಬುದ್ಧಿಜೀವಿಗಳಿಗೆ ಮೋದಿಯವರು ತುಂಬಾ ಎತ್ತರದಲ್ಲಿದ್ದಾರೆ ಎಂಬ ಭ್ರಮೆ ಕಲ್ಪಿಸಿ ಅವರನ್ನು ಪ್ರಜ್ಞಾಪೂರ್ವಕ ಬೆಂಬಲಿಗರಾಗುವಂತೆ ಮಾಡಿಕೊಳ್ಳುವುದು.

ಕಾರ್ಪೊರೇಟ್–ಕೋಮುವಾದಿ ಕೂಟ ಮುಂದುವರೆಯಲು ಇಂತಹ ಕುಟಿಲ ತಂತ್ರಗಳ ಅಗತ್ಯವಿದ್ದರೂ, ಅದಷ್ಟೇ ಸಾಕಾಗುವುದಿಲ್ಲ. ಅದರ ಘಟಕಗಳು ಫಲ ನಿರೀಕ್ಷೆಯಲ್ಲಿರುತ್ತವೆ. ಈ ಲೆಕ್ಕದಲ್ಲಿ, ಹಿಂದುತ್ವ ಶಕ್ತಿಗಳ ಹಂಚಿಕೆ ಸಫಲವಾಗಿದೆ. ದೇಶದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಲಯದ ಉನ್ನತ ಸಂಸ್ಥೆಗಳನ್ನು ವಶಪಡಿಸಿಕೊಂಡು ಅಲ್ಲಿರುವ ಚಿಂತನೆ ಮತ್ತು ಸೃಜನಶೀಲತೆಯನ್ನು ಹಾಳುಗೆಡವುವ ಪ್ರಕ್ರಿಯೆ ಆರಂಭಿಸಿವೆ. ಆದರೆ, ತಮಗೆ ಭಾರಿ ಲಾಭತರುವ ಸುಧಾರಣೆಗಳನ್ನು ಮೋದಿ ಸರ್ಕಾರ ಜಾರಿಗೆ ತರುತ್ತದೆ ಎಂದು ಭಾವಿಸಿದ್ದ ಕಾರ್ಪೊರೇಟ್ ಕುಳಗಳಿಗೆ ನಿರಾಶೆಯಾಗಿದೆ. ಅವರನ್ನು ಓಲೈಸಲು ಸರ್ಕಾರವು ಈ ಅಧಿವೇಶನದಲ್ಲೇ ಜಿಎಸ್‌ಟಿ ಮಸೂದೆಗೆ ಮಂಜೂರಾತಿ ಪಡೆಯುವ ತರಾತುರಿಯಲ್ಲಿದೆ.

ಮೂರು ವಲಯಗಳಲ್ಲಿ ತಕ್ಷಣವೇ ಸುಧಾರಣೆಗಳು ಆಗಬೇಕೆಂದು ಕಾರ್ಪೊರೇಟ್ ಕುಳಗಳು ಹಠ ಹಿಡಿದಿವೆ. ಒಂದು, ತೆರಿಗೆ ಸುಧಾರಣೆ; ಅಂದರೆ, ಸರಕು ಮತ್ತು ಸೇವೆಗಳ ಮೇಲೆ ಕೇಂದ್ರ ಮತ್ತು ರಾಜ್ಯಗಳು ಪ್ರತ್ಯೇಕವಾಗಿ ವಿಧಿಸುವ ತೆರಿಗೆಗಳ ಬದಲಿಗೆ ಏಕ ರೂಪದ ಜಿಎಸ್‌ಟಿಯ ಜಾರಿ. ಎರಡು, ಶ್ರಮ ಮಾರುಕಟ್ಟೆಯ ಸುಧಾರಣೆಗಳು; ಅಂದರೆ, ಮಾಲೀಕರಿಗೆ ಬೇಕೆಂದಾಗ ಕೆಲಸಕ್ಕೆ ಸೇರಿಸಿಕೊಳ್ಳುವ; ಬೇಡವೆಂದಾಗ ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯುವ ಸಂಪೂರ್ಣ ಸ್ವಾತಂತ್ರ್ಯವನ್ನು ಮಾಲೀಕರಿಗೆ ಕೊಡುವುದು. ಮೂರು, ಬ್ಯಾಂಕ್‌ಗಳ ಖಾಸಗೀಕರಣ; ಅಂದರೆ, ಸರ್ಕಾರದ ಒಡೆತನದಲ್ಲಿರುವ ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರುವುದು. **ಇವು ಮೂರೂ ಜನ–ವಿರೋಧಿ ಕ್ರಮಗಳೇ. ಆದರೂ, ಇತ್ತೀಚೆಗೆ ಈ ಸುಧಾರಣೆಗಳ ಅಗತ್ಯವನ್ನು ಒತ್ತಿ ಹೇಳುವ ನವ–ಉದಾರಿ ಅರ್ಥಶಾಸ್ತ್ರಜ್ಞರ ಮತ್ತು ವ್ಯಾಖ್ಯಾನಕಾರರ ಲೇಖನಗಳು ಪತ್ರಿಕೆಗಳಲ್ಲಿ ತುಂಬಿವೆ.** ಆದ್ದರಿಂದ ಈ ಮೂರೂ ಸುಧಾರಣೆಗಳ ಬಗ್ಗೆ ಇನ್ನೊಮ್ಮೆ ಹೇಳುವುದು ತಕ್ಕುದಾಗಿದೆ.

ಜಿಎಸ್‌ಟಿ – ಸ್ವಾಯತ್ತತೆಯ ಹರಣ

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯು ರಾಜ್ಯ ಸರ್ಕಾರಗಳ ಆದಾಯಗಳ ಮೂಲಗಳನ್ನು ಕಬಳಿಸುತ್ತದೆ. ಅದರಿಂದ ಆಗುವ ನಷ್ಟವನ್ನು ಕೇಂದ್ರವು ಮೂರು ವರ್ಷಗಳ ಅವಧಿಗೆ ತುಂಬಿಕೊಡುವ ಭರವಸೆ ಕೊಟ್ಟಿದೆ. ಆದರೂ, ಎರಡು ಪ್ರಶ್ನೆಗಳು ಏಳುತ್ತವೆ. ಮೊದಲನೆಯದು, ಮೂರು ವರ್ಷಗಳ ಬಳಿಕ ಏನಾಗುತ್ತದೆ? ಎರಡನೆಯದು, ಇಂದಿನ ಪರಿಸ್ಥಿತಿಗೆ ಹೋಲಿಸಿ, ರಾಜ್ಯಗಳ ನಷ್ಟವನ್ನು ಶಾಶ್ವತವಾಗಿ ಕೇಂದ್ರವು ತುಂಬಿ ಕೊಟ್ಟರೂ, ತೆರಿಗೆ ವಿಧಿಸುವ ಮತ್ತು ತೆರಿಗೆ ದರಗಳನ್ನು ನಿರ್ಧರಿಸುವ ರಾಜ್ಯಗಳ ಸಂವಿಧಾನದತ್ತ ಅಧಿಕಾರ ಮತ್ತು ಹಕ್ಕುಗಳನ್ನು ಕೇಂದ್ರವು ಕಸಿಯುತ್ತದೆ. ಆದ್ದರಿಂದ, ಇದು ರಾಜ್ಯಗಳ ಹಕ್ಕುಗಳ ಹರಣವೂ ಮತ್ತು ರಾಜ್ಯಗಳ ಒಕ್ಕೂಟದಿಂದ ಮೂಡಿಬಂದಿರುವ ನಮ್ಮ ದೇಶರಚನೆಯ ಬುನಾದಿಯ ಮೇಲೆ ನಡೆಸಿದ ಹಲ್ಲೆಯೂ ಆಗುತ್ತದೆ. ಮುಂದೆ ಅಧಿಕಾರಕ್ಕೆ ಬರುವ ಒಂದು ಸರ್ಕಾರವು ಅಭಿವೃದ್ಧಿಯಲ್ಲಿ ಆದ್ಯತೆಗಳ ಬಗ್ಗೆ ಒಂದು ಪರ್ಯಾಯ ಮಾದರಿ ಅನುಸರಿಸುವಂತಿದ್ದರೆ ಅಂತಹ ಸರ್ಕಾರದ ಕೈ ಕಟ್ಟಿ ಹಾಕಿದಂತಾಗುತ್ತದೆ. ಕಾರ್ಪೊರೇಟ್‌ಗಳ ಅನುಕೂಲಕ್ಕಾಗಿ ರಾಷ್ಟ್ರೀಯ ಮಾರುಕಟ್ಟೆಯನ್ನು ಏಕೀಕರಣಗೊಳಿಸುವ ಒಂದೇ ಉದ್ದೇಶದ ಸಲುವಾಗಿ ರಾಜ್ಯಗಳ ಭವಿಷ್ಯವನ್ನು ಬಲಿ ಕೊಟ್ಟಂತಾಗುತ್ತದೆ. **ವಿಶ್ವದ ಅತಿ ದೊಡ್ಡ ಅರ್ಥವ್ಯವಸ್ಥೆ ಎನಿಸಿರುವ ಬಂಡವಾಳಶಾಹಿ ಅಮೆರಿಕಾ ದೇಶವೇ ಏಕ ರೂಪದ (ಜಿಎಸ್‌ಟಿ) ತೆರಿಗೆ ಪದ್ಧತಿ ಅನುಸರಿಸುತ್ತಿಲ್ಲ** ಎಂಬುದನ್ನು ಗಮನಿಸಬೇಕಿದೆ.

ಬಂಡವಾಳದ ಬಲವರ್ಧನೆ

ಶ್ರಮ ಮಾರುಕಟ್ಟೆಯ ಸುಧಾರಣೆಗಳು ಅಗತ್ಯವೆಂದು ಕಾರ್ಪೊರೇಟ್‌ಗಳು ಪಟ್ಟು ಹಿಡಿದಿವೆ. ಇದು ಹುರುಳಿಲ್ಲದ್ದು. ಏಕೆಂದರೆ, ಸ್ವಲ್ಪ ಮಟ್ಟಿನ ಕೆಲಸದ ಭದ್ರತೆ ಒದಗಿಸುವ ಕಾನೂನಿನ ವ್ಯಾಪ್ತಿಗೆ ಒಳಪಟ್ಟಿರುವ ಕಾರ್ಮಿಕರ ಸಂಖ್ಯೆಯು ಒಟ್ಟು ಶ್ರಮ ಶಕ್ತಿಯ ಶೇ.4 ಭಾಗ ಮಾತ್ರ. ಕೆಲಸದ ಭದ್ರತೆ ಇರುವ ವಲಯಗಳಲ್ಲೂ ಯಾವ ಹಕ್ಕುಗಳೂ ಅಥವಾ ಸೌಲಭ್ಯಗಳೂ ಇಲ್ಲದ ದಿನಗೂಲಿ ಕೆಲಸಗಾರರ ಸಂಖ್ಯೆಯು ಕಾಯಂ ಕೆಲಸಗಾರರ ಸಂಖ್ಯೆಗಿಂತ ದೊಡ್ಡದಿದೆ. ಆದ್ದರಿಂದ, ಸ್ವಲ್ಪ ಮಟ್ಟಿನ ಕೆಲಸದ ಭದ್ರತೆ ಮತ್ತು ಸಣ್ಣ ಪುಟ್ಟ ಹಕ್ಕು–ಸೌಲಭ್ಯಗಳನ್ನು ಪಡೆದ ಕೇವಲ 4% ಕಾರ್ಮಿಕರು ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾಗಿದ್ದಾ–ರೆ ಎಂದು ಊಹಿಸಿಕೊಳ್ಳುವುದು ಅವಿವೇಕದ ಪರಮಾವಧಿಯಾಗುತ್ತದೆ.

ಬೇಕೆಂದಾಗ ಕೆಲಸಕ್ಕೆ ಸೇರಿಸಿಕೊಳ್ಳುವ, ಬೇಡವೆಂದಾಗ ಕೆಲಸದಿಂದ ಕಿತ್ತೊಗೆಯುವ ಸಂಪೂರ್ಣ ಸ್ವಾತಂತ್ರ್ಯವು ಮಾಲೀಕರಿಗೆ ಇಲ್ಲದ ಕಾರಣದಿಂದ ಆರ್ಥಿಕ ಬೆಳವಣಿಗೆ ನಿಂತಿದೆ ಎಂಬುದನ್ನು ಸಾಬೀತು ಪಡಿಸಲು ಎಳ್ಳಷ್ಟೂ ಸಾಕ್ಷಾಧಾರಗಳಿಲ್ಲ. ಈ ವಾಸ್ತವವನ್ನು ಅಲ್ಲಗಳೆಯಲು ಪ್ರಕಟಿಸಿದ ಕೆಲವು ಅಳಲೆಕಾಯಿ ಪಂಡಿತರ ಪ್ರತಿಯೊಂದು ಪ್ರಕಟಣೆಯೂ ಟೊಳ್ಳಾಗಿವೆ. ಮತ್ತು, ಮಾಲೀಕರಿಗೆ ಇಂತಹ ಸ್ವಾತಂತ್ರ್ಯ ಇಲ್ಲದಾಗ ಆರ್ಥಿಕ ಬೆಳವಣಿಗೆ ನಿಲ್ಲುತ್ತದೆ ಎನ್ನುವ ಸುಸಂಬದ್ಧ ತಾತ್ವಿಕ ವಾದ ಒಂದೂ ಇಲ್ಲ. ಆದರೂ ಈ ವಿಷಯದ ಬಗ್ಗೆ ಹಿಡಿದ ಪಟ್ಟು ಬಿಡುತ್ತಿಲ್ಲ.

ಕಾರ್ಮಿಕರನ್ನು ಬೇಕೆಂದಾಗ ವಜಾ ಮಾಡಲು ಕಾರ್ಮಿಕ ಕಾನೂನು ಅಡಚಣೆಯಾಗಿದ್ದರೆ, ಮತ್ತು ದಿನಗೂಲಿಯ ಮೇಲೆ ಕೆಲಸಗಾರರನ್ನು ನೇಮಕ ಮಾಡಿಕೊಳ್ಳುವ ಮೂಲಕ ಕಾರ್ಮಿಕ ಕಾನೂನುಗಳ ತೊಡಕುಗಳಿಂದ ಮಾಲೀಕರು ಪಾರಾಗಬಹುದಾದರೆ, ಕಾರ್ಮಿಕ ಕಾನೂನುಗಳನ್ನು ಕಿತ್ತೊಗೆಯಲು ಇಷ್ಟೊಂದು ಬೊಬ್ಬೆ ಹೊಡೆಯುವ ಅಗತ್ಯವಾದರೂ ಏನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಉತ್ತರ ಬಹಳ ಸರಳವಾಗಿದೆ. ತಮ್ಮ ಹಿತ ಕಾಪಾಡಿಕೊಳ್ಳಲು ಕಾರ್ಮಿಕರು ಸಂಘಟನೆಗಳನ್ನು ರಚಿಸಿಕೊಳ್ಳುವುದನ್ನು ತಡೆಯುವುದೇ ಶ್ರಮ ಮಾರುಕಟ್ಟೆ ಸುಧಾರಣೆಗಳ ಉದ್ದೇಶ. ಯಾರಾದರೂ ಯೂನಿಯನ್ ಕಟ್ಟುವ ಸಲುವಾಗಿ ಕಾರ್ಮಿಕರನ್ನು ಸಂಘಟಿಸುತ್ತಿರುವುದು ಕಂಡು ಬಂದರೆ ಅಂತಹ ವ್ಯಕ್ತಿಯನ್ನು ತಕ್ಷಣವೇ ಉದ್ಯೋಗದಿಂದ ವಜಾಮಾಡಲಾಗುತ್ತದೆ.

ಆರ್ಥಿಕ ಬೆಳವಣಿಗೆಗೆ ಶ್ರಮ ಮಾರುಕಟ್ಟೆಯ ಸುಧಾರಣೆಗಳ ಅಗತ್ಯವಿಲ್ಲ. ಬಂಡವಾಳದ ಬಲ ವರ್ಧನೆಗೆ ಅದರ ಅಗತ್ಯವಿದೆ, ಕಾರ್ಮಿಕರ ಹಕ್ಕುಗಳನ್ನು ಹತ್ತಿಕ್ಕುವ ಮೂಲಕ. ಯೂನಿಯನ್ ರಚಿಸಿಕೊಳ್ಳುವುದೂ ಸೇರಿದಂತೆ ಅನೇಕ ಹಕ್ಕುಗಳನ್ನು ಕಾರ್ಮಿಕರು ನೂರೈವತ್ತು ವರ್ಷಗಳ ಹೋರಾಟಗಳ ಮೂಲಕ ಗಳಿಸಿದ್ದಾರೆ. ಅಂತಹ ಹಕ್ಕುಗಳನ್ನು ಹತ್ತಿಕ್ಕುವುದು ಹೀನ ಸರ್ವಾಧಿಕಾರಿ ಕೃತ್ಯವಾಗುತ್ತದೆ.

ಬ್ಯಾಂಕ್‌ಗಳ ಖಾಸಗೀಕರಣ

ಬಾಸೆಲ್–3 ಶಿಫಾರಸುಗಳ (ಬಾಸೆಲ್ ನಗರದಲ್ಲಿರುವ ಬ್ಯಾಂಕ್‌ಗಳ ಮೇಲ್ವಿಚಾರಣಾ ಸಮಿತಿಯ ಶಿಫಾರಸುಗಳು) ಪಾಲನೆಯ ಸಲುವಾಗಿ ಬ್ಯಾಂಕ್‌ಗಳ ಖಾಸಗೀಕರಣ ಅಗತ್ಯವೆಂದು ಹೇಳಲಾಗಿತ್ತು. ಏಕೆ–ಂದರೆ, ಬ್ಯಾಂಕ್‌ಗಳ ಬಂಡವಾಳದ ಮಟ್ಟದ ಬಗ್ಗೆ ಬಾಸೆಲ್–3 ಶಿಫಾರಸುಗಳ ಪ್ರಕಾರ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಬೇಕಿತ್ತು. ಅಷ್ಟೊಂದು ಹಣವನ್ನು ಬಜೆಟ್ ಮೂಲಕ ಒದಗಿಸಲು ಸಾಧ್ಯವಿಲ್ಲವೆಂಬ ಕಾರಣದ ಮೇಲೆ ಸರ್ಕಾರವು ಖಾಸಗಿಯವರಿಗೆ 49% ಷೇರು ಮಾರಲು ತೀರ್ಮಾನಿಸಿದೆ. ಅವರ ಅಭಿಪ್ರಾಯದಲ್ಲಿ 51% ಷೇರುಗಳ ಒಡೆತನ ಸರ್ಕಾರದ ಬಳಿ ಇರುವುದರಿಂದ ಬ್ಯಾಂಕ್‌ಗಳ ಸಾರ್ವಜನಿಕ ಸ್ವರೂಪ ಬದಲಾಗುವುದಿಲ್ಲ. ಇದೊಂದು ಭ್ರಮೆ. ಏಕೆಂದರೆ, 49% ಪಾಲು ಹೊಂದಿರುವವರು ನೀತಿ–ನಿರ್ಧಾರಗಳ ಪ್ರಶ್ನೆ ಬಂದಾಗ ಸುಮ್ಮನೆ ಕೂರುವುದಿಲ್ಲ. ಹಾಗಾಗಿ ಇದೊಂದು ರೀತಿಯಲ್ಲಿ ನುಸುಳುವ ಖಾಸಗೀಕರಣವಾಗುತ್ತದೆ.

ಬಾಸೆಲ್ ಶಿಫಾರಸುಗಳ ಬಗ್ಗೆ ಸರ್ಕಾರದ ಸಮರ್ಥನೆ ತಪ್ಪಾಗಿದೆ. ಅವುಗಳ ಅನುಷ್ಠಾನ ಆಯಾ ದೇಶಗಳ ಮರ್ಜಿಗೆ ಒಳಪಟ್ಟಿದೆ. ಈ ಶಿಫಾರಸುಗಳನ್ನು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಅನುಸರಿಸುವ ಅಗತ್ಯವಿಲ್ಲ. ಹೇಗಿದ್ದರೂ, ಸರ್ಕಾರ ಈ ಬ್ಯಾಂಕ್‌ಗಳನ್ನು ರಕ್ಷಿಸಲು ಬದ್ಧವಾಗಿದೆ. ಒಂದು ವೇಳೆ ಬಂಡವಾಳ ಹೆಚ್ಚಿಸುವ ಇರಾದೆ ಇದ್ದರೆ ಅದನ್ನು ಬಜೆಟ್ ಮೂಲಕ ಒದಗಿಸಬೇಕು. ಅಥವಾ, ರಿಸರ್ವ್ ಬ್ಯಾಂಕಿನಿಂದ ಸಾಲ ಪಡೆಯಬಹುದು. ಇದರಿಂದ ಅರ್ಥವ್ಯವಸ್ಥೆಯ ಮೇಲೆ ಯಾವ ಅಡ್ಡ ಪರಿಣಾಮವೂ ಆಗುವುದಿಲ್ಲ.

ಈಗಿನ ದಿನಗಳಲ್ಲಿ ಒಂದು ಹೊಸ ವಿವಾದ ಸುತ್ತಾಡುತ್ತಿದೆ. ಸಾರ್ವಜನಿಕ ವಲಯದಲ್ಲಿ ಸುಧಾರಣೆಗಳು ಅವಶ್ಯವಾಗಿವೆ. ಏಕೆಂದರೆ, ಅಲ್ಲಿ ಬಾಬುಗಳು ಕೆಲಸ ಮಾಡುವುದೇ ಇಲ್ಲ. ಒಡೆತನ ಖಾಸಗಿಯವರ ಬಳಿ ಇದ್ದಿದ್ದರೆ ಅವರನ್ನು ಸುಮ್ಮನೇ ವಜಾ ಮಾಡಲಾಗುತ್ತಿತ್ತು. ಇಂತಹ ವಾದ ಮಂಡಿಸುವವರನ್ನು ವಜಾ ಮಾಡಲು ಆಗುವುದಿಲ್ಲ. ಏಕೆಂದರೆ, ಅವರು ಅಮೆರಿಕಾದ ಯೂನಿವರ್ಸಿಟಿಗಳಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್‌ಗಳು!

ಒಳ ಉದ್ದೇಶಗಳಿಂದ ಕೂಡಿರುವ ಇಂಥಹ ವಾದಗಳೂ ಸ್ಥೈರ್ಯಗೆಡಿಸುತ್ತವೆ. ಆದ್ದರಿಂದ, ಎಡ ವಿಚಾರಧಾರೆಯವರು ಈ ಎಲ್ಲ ವಾದಗಳನ್ನು ಎಡೆಬಿಡದೆ ಎದುರಿಸಬೇಕು, ಜನತೆಯ ಹಿತದೃಷ್ಟಿಯಿಂದ.

ಭಾವಾನುವಾದ: ಕೆ.ಎಂ.ನಾಗರಾಜ್



ಸೆಪ್ಟೆಂಬರ್ 2, 2016

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?

ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2 ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ?

ಕಳೆದ ಸಂಚಿಕೆಗಳಲ್ಲಿ ರೂ.18,000 ಕನಿಷ್ಟ ಕೂಲಿ, ಉದ್ಯೋಗಾವಕಾಶ ನಿರ್ಮಾಣ ಕಾರ್ಮಿಕ ಕಾನೂನುಗಳಿಗೆ ತರಬೇಕೆಂದಿರುವ ಎಲ್ಲ ಬದಲಾವಣೆಗಳನ್ನು ರದ್ದು ಮಾಡಬೇಕು ಮತ್ತು ಗುತ್ತಿಗೆ ಕಾರ್ಮಿಕರ ಶೋಷಣೆಯನ್ನು ನಿಲ್ಲಿಸಬೇಕು ಮತ್ತು ಸಾರ್ವಜನಿಕ ವಲಯದಲ್ಲಿ ಶೇರು ಹಿಂಪಡಿಕೆ, ಎಫ್‌ಡಿಐಗೆ ಹೆಚ್ಚೆಚ್ಚು ಅವಕಾಶ ನೀಡುವುದನ್ನು ನಿಲ್ಲಿಸಬೇಕು ಎಂಬ ಬೇಡಿಕೆಗಳನ್ನು ಪರಿಶೀಲಿಸಲಾಗಿತ್ತು.

ಈ ಸಂಚಿಕೆಯಲ್ಲಿ ಕಾರ್ಮಿಕರನ್ನು ಮಾತ್ರವಲ್ಲ, ಜನಸಾಮಾನ್ಯರನ್ನೆಲ್ಲ ಬಾಧಿಸುವ ಒಂದು ಪ್ರಮುಖ ಪ್ರಶ್ನೆಯಾದ ಬೆಲೆಯೇರಿಕೆಯ ಮೇಲೆ ಹತೋಟಿ ಹಾಕಬೇಕು ಮತ್ತು ಒಟ್ಟು ಉತ್ಪಾದನಾ ಪ್ರಕ್ರಿಯೆಯಲ್ಲಿ ದುಡಿಮೆಯ ಘನತೆಯನ್ನು ನಿರಾಕರಿಸುವಂತಹ ವಿವಿಧ ಸೌಲಭ್ಯಗಳ ಮೇಲಿನ ತರ್ಕಹೀನ ಮಿತಿಗಳನ್ನು ತೆಗೆಯಬೇಕು ಎಂಬ ಇನ್ನೆರಡು ಬೇಡಿಕೆಗಳನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಪರಿಶೀಲಿಸಿದ್ದಾರೆ.

ಬೆಲೆಯೇರಿಕೆ ನಿಯಂತ್ರಣಕ್ಕಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಜಾರಿ ಮಾಡಬೇಕು ಮತ್ತು ಸರಕು ಮಾರುಕಟ್ಟೆಯ ಸಟ್ಟಾ ವ್ಯವಹಾರ ತಡೆಗಟ್ಟಬೇಕು

ಕಾರ್ಮಿಕ ಚಳುವಳಿಗಳ ಹೋರಾಟಗಳು ಅಂದರೆ ಕೇವಲ ಸಂಬಳ ಸವಲತ್ತುಗಳಿಗಾಗಿ ನಡೆಯುವ ಹೋರಾಟ ಎಂಬ ಹಣೆಪಟ್ಟಿಯಿದೆ. ಆದರೆ ಕಾರ್ಮಿಕ ಚಳುವಳಿಗಳು ಈ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸಿರುವುದು ಇತಿಹಾಸದಲ್ಲಿ ದಾಖಲಾಗಿದೆ; ಆಳುವ ದೊರೆಗಳು ದುಡಿಯುವ ಜನತೆಯ, ಸಾಮಾನ್ಯ ಜನತೆಯ ವಿರುದ್ಧದ ಧೋರಣೆಗಳನ್ನು ಕೈಗೊಂಡ ಸಂದರ್ಭದಲ್ಲಿಯೂ ಕಾರ್ಮಿಕ ವರ್ಗ ಹೋರಾಟಗಳನ್ನು ನಡೆಸಿದೆ. ಹಾಗೆಯೇ ಇತ್ತೀಚೆಗೆ ನಡೆಯುತ್ತಿರುವ ಮುಷ್ಕರಗಳಲ್ಲಿ "ಬೆಲೆಯೇರಿಕೆಯನ್ನು ತಡೆಗಟ್ಟಿ" ಎಂಬ ಬೇಡಿಕೆಯನ್ನು ಪ್ರಮುಖವಾಗಿ ಇಡಲಾಗಿದೆ.

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಸರ್ಕಾರ ಎಲ್‌ಡಿಎಫ್ ಅಧಿಕಾರಕ್ಕೆ ಬಂದ ಕೂಡಲೇ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ಕಠಿಣ ಕ್ರಮಗಳನ್ನು ಕೈಗೊಂಡಿದೆ. 150 ಕೋಟಿ ರೂ.ಗಳನ್ನು ಮೀಸಲಿರಿಸಿ ಮಾವೇಲಿ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಅಗತ್ಯವಸ್ತುಗಳನ್ನು 3ನೇ ಒಂದು ಭಾಗ ಬೆಲೆಗಳಲ್ಲಿ ಒದಗಿಸಲಾಗುತ್ತಿದೆ. ಉದಾ: 181 ರೂ.ಗಳಿಗೆ ಮಾರಾಟವಾಗುವ ಬೇಳೆ ಕಾಳು ಮಾವೇಲಿ ಅಂಗಡಿಯಲ್ಲಿ 63 ರೂ.ಗಳಿಗೆ ಸಿಗುತ್ತಿದೆ. ಆಸ್ಪತ್ರೆಗಳಿಗೆ ಅಗತ್ಯವಾಗಿರುವಷ್ಟು ಔಷಧಿಗಳನ್ನು ಒದಗಿಸಿ ಅದರ ಕೊರತೆಯನ್ನು ನೀಗಿಸಿದೆ.

'ಅಚ್ಛೇದಿನ್ ಆನೇ ವಾಲೇ ಹೈಂ' ಎಂಬ ಘೋಷಣೆಯನ್ನು ಕೊಟ್ಟಂತಹ ಸರ್ಕಾರ ಇಂದಿಗೆ ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗುತ್ತಿವೆ. ಆದರೆ ಬೆಲೆಯೇರಿಕೆಯನ್ನು ತಡೆಗಟ್ಟುವ ಬದಲಿಗೆ ಹೆಚ್ಚು ಮಾಡಲಾಗುತ್ತಿದೆ.

ಬೆಲೆಯೇರಿಕೆಗೆ ಮುಖ್ಯ ಕಾರಣಗಳು:

1. ಪೆಟ್ರೋಲ್ – ಡೀಸೆಲ್‌ಗಳ ಬೆಲೆಯೇರಿಕೆ : ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳ ಪ್ರಕಾರ ಒಂದು ಲೀಟರ್ ಪೆಟ್ರೋಲ್‌ಗೆ 26 ರೂ., ಒಂದು ಲೀಟರ್ ಡೀಸೆಲ್‌ಗೆ 16.75 ಪೈಸೆ ಆಗಬೇಕು. ಆದರೆ ಮಾರುಕಟ್ಟೆಯಲ್ಲಿ 70–75 ರೂ.ಗಳು ಒಂದು ಲೀಟರ್‌ಗೆ ಮಾರಾಟ ಮಾಡಲಾಗುತ್ತಿದೆ. ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 19 ಬಾರಿ ಡೀಸೆಲ್ ದರ, 16 ಬಾರಿ ಪೆಟ್ರೋಲ್ ದರ 5 ಬಾರಿ ಅಡುಗೆ ಗ್ಯಾಸ್ ದರಗಳನ್ನು ಹೆಚ್ಚು ಮಾಡಿದೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಗಳು ಇಳಿಕೆಯಾದರೂ ಸರ್ಕಾರ ಹಾಕಿರುವ ತೆರಿಗೆ, ಸೆಸ್ ಮತ್ತು ಲೆವಿಗಳನ್ನು ಹೆಚ್ಚಿಸುತ್ತಲೇ ಇದೆ.
2. ತೈಲ ಬೆಲೆ ಹೆಚ್ಚಿರುವುದಿಂದ ಸರಕು–ಸಾಗಾಣಿಕಾ ದರಗಳು ಹೆಚ್ಚುತ್ತವೆ.
3. ಆದರೆ ಇನ್ನೊಂದೆಡೆಯಲ್ಲಿ ರೈತರು ಬೆಳೆಯುವ ಬೆಳೆಗಳಿಗೆ ವೈಜ್ಞಾನಿಕವಾದ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಮಾಡದಿರುವುದರಿಂದ ರೈತರು ತಾವು ಬೆಳೆದ ಬೆಳೆಗಳಿಗೆ ಪಡೆಯುವ ಬೆಲೆಗಳು ಕುಸಿಯುತ್ತಿವೆ. ರೈತರ ಸಾಲ ಭಾದೆ ಹೆಚ್ಚಾಗುತ್ತಿದೆ.
4. ಬರಗಾಲದಿಂದಾಗಿ ಕೃಷಿ ಉತ್ಪಾದನೆ ಕಡಿತಗೊಂಡಿರುವಾಗ ಅಗತ್ಯ ಆಹಾರ ವಸ್ತುಗಳ ಬೆಲೆಯೆರಿಕೆಯಾಗದಂತೆ ಅಗತ್ಯ ಕ್ರಮ ವಹಿಸುವ ಬದಲು ಕಾಳಸಂತೆಯ ಮೇಲೆ ಕ್ರಮವಹಿಸಲು ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರದಂತೆ ಅಗತ್ಯವಾದ ದಾಸ್ತಾನನ್ನು ಆಮದು ಮಾಡಿಕೊಳ್ಳಲು ಸರ್ಕಾರ ನಿರಾಕರಿಸುತ್ತಿದೆ. ಬೇಳೆಕಾಳುಗಳ ಬೆಲೆಗಳು 140% ರಷ್ಟು ಹೆಚ್ಚಾಗಿವೆ, ಕಳೆದ 3 ತಿಂಗಳಲ್ಲಿ ತರಕಾರಿ ಬೆಲೆಗಳು 120%ರಷ್ಟು ಹೆಚ್ಚಾಗಿದೆ.
5. ಅದೇ ಸಂದರ್ಭದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಬದಲು ದುರ್ಬಲಗೊಳಿಸಲು ನಗದು ವರ್ಗಾವಣೆ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.
6. ಸಿರಿವಂತರಿಂದ ವಸೂಲು ಮಾಡಬೆಕಾದ ನೇರ ತೆರಿಗೆಗಳನ್ನು ಕಡಿಮೆ ಮಾಡಿ ಜನಸಾಮಾನ್ಯರಿಂದ ವಸೂಲು ಮಾಡುವ ಅಪ್ರತ್ಯಕ್ಷ ತೆರಿಗೆಗಳನ್ನು ಹೆಚ್ಚು ಮಾಡಿರುವುದು, ಅಗತ್ಯ ವಸ್ತುಗಳ ಮತ್ತು ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ವಿದ್ಯುಚ್ಛಕ್ತಿ ಮುಂತಾದ ಮೂಲಭೂತ ಸೇವೆಗಳ ಖಾಸಗೀಕರಣ ಮಾಡುತ್ತಿರುವುದು ಬೆಲೆಯೇರಿಕೆಗೆ ಮತ್ತೊಂದು ಪ್ರಮುಖ ಕಾರಣವಾಗಿದೆ.
7. ಆದ್ದರಿಂದ ಬೆಲೆಯೇರಿಕೆಯನ್ನು ನಿಯಂತ್ರಿಸಿ 14 ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಪಡಿತರ ವಿತರಣಾ ವ್ಯವಸ್ಥೆ ಜಾರಿ ಮಾಡಬೇಕೆಂದೂ ಸಪ್ಟಂಬರ್ 2ರ ಮುಷ್ಕರ ಆಗ್ರಹಿಸುತ್ತಿದೆ.

ಬೋನಸ್, ಭವಿಷ್ಯನಿಧಿ, ಉಪಧನ ಕಾಯ್ದೆಗಳಲ್ಲಿನ ಮಿತಿ ಹೆಚ್ಚಳ ಮಾಡಬೇಕು

ಒಂದು ಕೈಗಾರಿಕೆಯಲ್ಲಿ ಬರುವ ಒಟ್ಟು ಲಾಭಾಂಶದ ಒಂದು ಭಾಗವನ್ನು ಇದಕ್ಕೆ ಕಾರಣವಾಗಿರುವ ಕಾರ್ಮಿಕರಿಗೂ ಸಲ್ಲಬೇಕಾದ ಪಾಲಾಗಿ ಶೇ.8.11 ಕನಿಷ್ಟ ಬೋನಸ್ಸನ್ನು ಕೊಡಲಾಗುತ್ತದೆ. ಆದರೆ ಈ ಬೋನಸ್ಸನ್ನು ಪಡೆಯಲು ವೇತನದ ಮಿತಿಯನ್ನು ಹಾಕಲಾಗಿದೆ.

ಒಂದು ಉದ್ದಿಮೆ ಸಂಸ್ಥೆಯಲ್ಲಿನ ಲಾಭ ಮತ್ತು ಬೋನಸ್‌ಗಳೆರೆಡು ಕಾರ್ಮಿಕರ ಉತ್ಪಾದನಾ ಚಟುವಟಿಕೆಗಳ ಫಲಿತಾಂಶವೇ ಆಗಿವೆ. ಲಾಭಕ್ಕೆ ಯಾವುದೇ ಮಿತಿ ಹಾಕದಿರುವಾಗ ಬೋನಸ್‌ಗೆ ಮಾತ್ರ ಮಿತಿ ಏಕೆ? ಸಾಕಷ್ಟು ಉದ್ಯಮಗಳು 40%ಕ್ಕಿಂತ ಹೆಚ್ಚು ಲಾಭ ಪಡೆಯುತ್ತಿವೆ. ಆದರೆ ಇದಕ್ಕೆ ಕೊಡುಗೆ ನೀಡಿರುವ ಕಾರ್ಮಿಕರ ನೈಪುಣ್ಯತೆ ಮತ್ತು ಕೌಶಲ್ಯತೆಗಳಿಗೆ ಪ್ರತಿಯಾಗಿ ಕೊಡಬೇಕಾಗಿರುವ ಬೋನಸ್ಸನ್ನು ಬೋನಸ್ ಅರ್ಹತೆಗೆ ಆದಾಯ ಮಿತಿಗಳನ್ನು ಹಾಕುವ ಮೂಲಕ ನಿರಾಕರಿಸಲಾಗಿದೆ.

ಇದು ಕೇವಲ ಬೋನಸ್ ಪಾವತಿಯ ಪ್ರಶ್ನೆ ಮಾತ್ರವಲ್ಲ, ಜೊತೆಗೆ ಅದು ಕಾರ್ಮಿಕರ ಘನತೆ ಗೌರವದ ಪ್ರಶ್ನೆಯನ್ನೊಳಗೊಂಡಿದೆ. ಎಲ್ಲಾ ಬಗೆ–ಯ ಮಿತಿಗಳನ್ನು ತೆಗೆದು ಹಾಕಬೇಕು ಎಂಬ ಬೇಡಿಕೆಯನ್ನು ನಿರಾಕರಿಸುವ ಮೂಲಕ ಸರ್ಕಾರವು ಇಡೀ ಉತ್ಪಾದನಾ ಪ್ರಕ್ರಿಯೆಯಲ್ಲಿ ಶ್ರಮಶಕ್ತಿಯ ಕೊಡುಗೆಗೆ ಅಗೌರವವನ್ನು ತೋರಿಸುತ್ತಿದೆ. ಇದನ್ನು ಸಹಿಸದೇ ವಿರೋಧಿಸಬೇಕಾಗಿದೆ. ●

ಕಾಂ.ವಿಮಲ ನಿಧನ



ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಪರವಾಗಿ ನಿರಂತರವಾಗಿ ಹೋರಾಟ ನಡೆಸಿದ ಬಂಟ್ವಾಳ ತಾಲ್ಲೂಕಿನ ಸಂಗಾತಿ ವಿಮಲರವರು ಆಗಸ್ಟ್ 08 ರಂದು ನಿಧನರಾಗಿದ್ದಾರೆ. ಬೀಡಿ ಕಾರ್ಮಿಕರ ಚಳುವಳಿಯೊಂದಿಗೆ ದುಡಿಯುವ ಮಹಿಳೆಯರ ಹಕ್ಕುಗಳಿಗಾಗಿ ಶ್ರಮಿಸಿದ ವಿಮಲರವರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾಗಿ ದುಡಿದಿದ್ದಾರೆ. ಅವರಿಗೆ ದಕ್ಷಿಣ ಕನ್ನಡ ಜಿಲ್ಲೆ ಸಿಪಿಐ(ಎಂ) ಪಕ್ಷ ಮತ್ತು ಕಾರ್ಮಿಕ ಸಂಘಟನೆ, ಮಹಿಳಾ ಸಂಘಟನೆ ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸಿದೆ.

ಶಿಕ್ಷಕರ ವರ್ಗಾವಣೆ ವಿರೋಧಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಸಮಾನ ಮನಸ್ಕರ ಸಂಘಟನೆ

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ ಎಂಬ ಕಾರಣ ನೀಡಿ, ಸರಕಾರಿ ಶಾಲೆಗಳಲ್ಲಿ ಅವಶ್ಯಕವಿರುವ ಶಿಕ್ಷಕರನ್ನು ಹೆಚ್ಚುವರಿಯೆಂದು ಪರಿಗಣಿಸಿ ಬೇರೆ ದೂರದ ಶಾಲೆಗಳಿಗೆ ವರ್ಗಾವಣೆ ಮಾಡುವ ರಾಜ್ಯ ಸರಕಾರದ ನೀತಿಯ ವಿರುದ್ಧ ಎಸ್‌ಎಫ್‌ಐ ಸಂಘಟನೆ ದ.ಕ.ಜಿಲ್ಲೆಯ ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳು, ಪೋಷಕರನ್ನು ಒಳಗೊಂಡು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದೆ.

ಇದೀಗ ಜಿಲ್ಲೆಯ ಸಾರ್ವಜನಿಕರು, ವಿದ್ಯಾರ್ಥಿ ಸಂಘಗಳು, ಎಸ್‌ಎಂಸಿ ಸದಸ್ಯರು, ಸರಕಾ–ರೇತರ ಸಂಸ್ಥೆಗಳು, ಶಿಕ್ಷಣಾಸಕ್ತರನ್ನು ಒಳಗೊಂಡು ದ.ಕ.ಸಮಾನ ಮನಸ್ಕ ಶಿಕ್ಷಣಾಸಕ್ತರ ವೇದಿಕೆಯನ್ನು ರಚಿಸಿಕೊಂಡಿದ್ದು ಆಗಸ್ಟ್ 8ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ದಯಾನಂದ ಶೆಟ್ಟಿ, ಚೈಲ್ಡ್ ಲೈನ್ ನಿರ್ದೇಶಕ ರೆನ್ನಿ ಡಿಸೋಜ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು, ಎಸ್‌ಎಫ್‌ಐನ ದ. ಕ.ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್ ಮಾತನಾಡಿದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಚರಣ್ ಪಂಜಿಮೊಗರು, ಮಯೂರಿ ಬೋಳಾರ್, ಶಿಕ್ಷಣ ತಜ್ಞರಾದ ನ್ಯಾಯವಾದಿ ದಿನೇಶ್ ಹೆಗ್ಡೆ ಉಳೇಪಾಡಿ, ಲೋಲಾಕ್ಷ, ಮಕ್ಕಳ ಪೋಷಕರು ಹಾಗೂ ವಿವಿಧ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಮ್ಮ ಚುರು-ಟ್ವೀಟ್

@SitaramYechury

ನೂತನ ಶಿಕ್ಷಣ ನೀತಿ ಮೂರು C ಗಳ ಬಗ್ಗೆ ಇದೆ: ಸೆಂಟ್ರಲೈಸೇಶನ್, ಕಮರ್ಶಿಯಲೈಸೇಶನ್, ಕಮ್ಯುನಲೈಸೇಶನ್. ಬೇಕಾಗಿರುವುದು ಸಾರ್ವತ್ರಿಕ ಸಾರ್ವಜನಿಕ ಶಿಕ್ಷಣ, ಅಂಗಡಿಗಳಲ್ಲ

ಕ್ವಾಲಿಟಿ, ಕ್ವಾಂಟಿಟಿ, ಇಕ್ವಿಟಿ (ಗುಣಮಟ್ಟ, ಸಂಖ್ಯಾಬಲ, ಸಮಾನತೆ) – ಶಿಕ್ಷಣ ನೀತಿ ಈ ಮೂರರ ನಡುವೆ ಸಮತೋಲನ ಸಾಧಿಸಬೇಕು. ನೂತನ ಶಿಕ್ಷಣ ನೀತಿಯಲ್ಲಿ ಈ ಮೂರೂ ಇಲ್ಲ

–ಸೀತಾರಾಂ ಯೆಚುರಿ

'ಮಾಲೀಕರ ದುರಾಸೆ ವಿರುದ್ಧ ಕಾರ್ಮಿಕರ ಹೋರಾಟ ಅನಿವಾರ್ಯ'

ಸಿಐಟಿಯು ಚಿಕ್ಕಬಳ್ಳಾಪುರ ಜಿಲ್ಲಾ 3ನೇ ಸಮ್ಮೇಳನ



ಸಿಐಟಿಯುನ ಚಿಕ್ಕಬಳ್ಳಾಪುರ ಜಿಲ್ಲಾ 3ನೇ ಸಮ್ಮೇಳನವು 2016, ಜುಲೈ 8–9ರಂದು ಗೌರಿಬಿದನೂರಿನಲ್ಲಿ ನಡೆಯಿತು. ಜುಲೈ 9ರಂದು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಜಿ.ಸಿದ್ದಗಂಗಪ್ಪ ಧ್ವಜಾರೋಹಣ ಮಾಡಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಸಮ್ಮೇಳನ ಉದ್ಘಾಟಿಸಿ "ದೇಶ ಬೇಗ ಅಭಿವೃದ್ಧಿ ಆಗುತ್ತಿದೆ ಎಂದು ಮೋದಿ ವಿದೇಶದಲ್ಲಿ ಹೋಗಿ ಭಾಷಣ ಮಾಡುತ್ತಾರೆ. ಡಿಜಿಟಲ್ ಇಂಡಿಯಾ ಅಂತಾರೆ. ಆದರೆ ಬೆಲೆ ಏರಿಕೆ ಹಾಗೇ ಅಭಿವೃದ್ಧಿ ಆಗಿ ಜನ ಸಾಮಾನ್ಯರ ಬದುಕಿನ ಮೇಲೆ ದಾಳಿ ಮಾಡಿದೆ. ಎಣ್ಣೆ, ಬೇಳೆಕಾಳು, ಅಕ್ಕಿ ತರಕಾರಿ ಎಲ್ಲಾ ಬೆಲೆ ಏರಿಕೆ ಆಗಿದೆ. ಬೆಲೆ ಏರಿಕೆ ತಡೆಯುವುವಲ್ಲಿ ಸರ್ಕಾರ ವಿಫಲವಾಗಿದೆ. ಗುತ್ತೆದಾರಿ ಪರವಾಗಿ ನಿಯಂತ್ರಣ ಆಗುತ್ತಿದೆ. ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಇಳಿಕೆ ಆದ್ರು ತೈಲಬೆಲೆಯಲ್ಲಿ ಇಳಿಕೆ ಆಗಿಲ್ಲ. ಸಿಐಟಿಯು ಬೇಡಿಕೆ ದುಡಿಯುವ ವರ್ಗದ ಬೇಡಿಕೆ ಇದು ಜಾರಿ ಆಗಬೇಕು. ದೇಶದಲ್ಲಿ ಗುತ್ತಿಗೆಯಲ್ಲಿ ದುಡಿಸುವುದು ಹೆಚ್ಚಾಗಿ ಕಾಯಂ ಹುದ್ದೆ ಇಲ್ಲವಾಗಿದೆ. ಕಾರ್ಮಿಕರ ಆದಾಯ ಕಡಿಮೆ ಆಗಿದೆ. ಮಾಲೀಕರ ಆದಾಯ ಹೆಚ್ಚಾಗಿದೆ. ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರ ಕಾನೂನಾಗಿ ತಿದ್ದುಪಡಿ ಮಾಡುವ ಹುನ್ನಾರ ನಡೆದಿದೆ. ಒಂದೆಡೆ ಕಾಂಟ್ರಾಕ್ಟ್ ಪದ್ಧತಿ, ಕಾರ್ಮಿಕ ಕಾನೂನು ತಿದ್ದುಪಡಿ, ಬೆಲೆ ಏರಿಕೆ, ಜನರನ್ನು ಬಾದಿಸುತ್ತಿದೆ. ಸೆಪ್ಟಂಬರ್ 2 ರಂದು ಜನಸಾಮಾನ್ಯರು ಹಾಗೂ ದುಡಿಯುವ ವರ್ಗ ಸರ್ಕಾರಕ್ಕೆ ಎಚ್ಚರಿಕೆ ನೀಡಬೇಕಿದೆ. ಹೋರಾಟ ಪ್ರತಿ ಹಳ್ಳಿ ಹಳ್ಳಿಗಳನ್ನು ಬಂದ್ ಆಗುವ ರೀತಿ ತಯಾರಿ ನಡೆಸಲು ಆಗಬೇಕಿದೆ" ಎಂದು ಅವರು ಕರೆ ನೀಡಿದರು.

ನಂತರ ಪ್ರಗತಿಪರ ಚಿಂತಕರು ಮತ್ತು ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಗಂಗಾಧರ ಮೂರ್ತಿ ಮಾತನಾಡಿ "ಕಳೆದ 25 ವರ್ಷಗಳಿಂದ ದೇಶದಲ್ಲಿ ಜಾರಿಯಾಗುತ್ತಿರುವ ಉದಾರೀಕರಣ ನೀತಿಗಳಿಂದ ಬೆವರು ಮತ್ತು ಶ್ರೀಮಂತರ ನಡುವಿನ ಅಸಮಾನತೆ ಹೆಚ್ಚಾಗಿದೆ. ಪರಿಣಾಮವಾಗಿ ದೇಶದಲ್ಲಿ ಮಿಲಿಯಾಧಿಪತಿಗಳ ಸಂಖ್ಯೆ ಏರಿಕೆಯಾಗಿದೆ. ಆದರೆ ಇನ್ನೊಂದಡೆ ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರು ದಿನನಿತ್ಯದ ಬದುಕಿಗಾಗಿ ಸಂಘರ್ಷ ನಡೆಸುವಂತಾಗಿದೆ. ಈ ನೀತಿಗಳ ವಿರುದ್ದ ದುಡಿಯುವ ವರ್ಗ ಚಳವಳಿ ನಡೆಸದೇ ಅನ್ಯ ಮಾರ್ಗವಿಲ್ಲವೆಂದರು.

ಆ ನಂತರ ಪ್ರತಿನಿಧಿ ಅಧಿವೇಶನ ಪ್ರಾರಂಭವಾಯಿತು. ಮೊದಲಿಗೆ ಅಧಿವೇಶನ ನಡೆಸಿಕೊಡಲು ಅಧ್ಯಕ್ಷೀಯ ಮಂಡಳಿ, ನಿರ್ಣಯ ಮಂಡಳಿ, ಪರಿಚಯಪತ್ರ ಮಂಡಳಿ ಸಮಿತಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿಗಳಾದ ಜಿ.ಲಕ್ಷ್ಮೀದೇವಮ್ಮ ವರದಿ ಮಂಡಿಸಿದರು. ನಂತರ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಎಲ್ಲಾ ತಾಲೂಕುಗಳ ಸಂಗಾತಿಗಳು ಭಾಗವಹಿಸಿದ್ದರು. ಸಂಘಟನೆ ಬಗ್ಗೆ ಉತ್ತಮ ರೀತಿಯಲ್ಲಿ ಚರ್ಚೆ ನಡೆಯಿತು. ನಂತರ ಎರಡನೇ ದಿನ ಚರ್ಚೆಗೆ ಕಾರ್ಯದರ್ಶಿಗಳಿಂದ ಉತ್ತರವನ್ನು ಕೊಡಲಾಯಿತು. ಆ ನಂತರ ಲೆಕ್ಕ ಪತ್ರವನ್ನು ಜಿಲ್ಲಾ ಖಜಾಂಚಿಗಳಾದ ಮುಸ್ತಾಫರವರು ಮಂಡಿಸಿದರು ಮತ್ತು ಅನುಮೋದನೆ ಪಡೆಯಲಾಯಿತು. ಕೆಲವು ನಿರ್ಣಯಗಳನ್ನು ಮಂಡಿಸಲಾಯಿತು. ಪರಿಚಯ ಪತ್ರ ಮಂಡನೆ ಮಾಡಲಾಯಿತು.

ಸಮ್ಮೇಳನದ ಕಲಾಪಗಳ ಮುಕ್ತಾಯದ ಬಳಿಕ ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಗಾಂಧಿ ಚೌಕದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಮೀನಾಕ್ಷಿಸುಂದರಂ ಮಾತನಾಡಿದರು.

ನೂತನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಸಿದ್ಧಗಂಗಪ್ಪರವರು ಮಾತನಾಡಿ ರಾಜ್ಯದಲ್ಲಿ ಕಾರ್ಮಿಕ ಕಾನೂನುಗಳ ಉಲ್ಲಂಘನೆ ವರ್ಷಂಪ್ರತಿ ಹೆಚ್ಚುತ್ತಿವೆ. ಕಾರ್ಮಿಕ ಅಧಿಕಾರಿಗಳು ನಡೆಸಿದ ಒಟ್ಟು ತಪಾಸಣೆಯ 25 ಶೇಕಡ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲೆ ಆಗಿದೆ. ಹೂಡಲಾದ ಮೊಕದಮೆಗಳು, ಶಿಕ್ಷೆಗೆ ಒಳಪಟ್ಟ ಸಂಸ್ಥೆಗಳು ಮತ್ತು ವಿಧಿಸಿದ ದಂಡಗಳ ಮೊತ್ತದಲ್ಲೂ ಅವುಗಳದೆ ಹೆಚ್ಚು ಪಾಲಿದೆ. ಆದರೆ ಕಾರ್ಮಿಕ ಸಂಘಗಳು ಇಲ್ಲದಿರುವುದು ಸಹಾ ಇದೇ ವಿಭಾಗದಲ್ಲಿ ಎಂಬುದನ್ನು ಸಹಾ ಗಮನಿಸಬೇಕಿದೆ. ಗುತ್ತಿಗೆ ಕಾರ್ಮಿಕರ ಕಾಯ್ದೆಯಡಿ ಉಲ್ಲಂಘನೆಯನ್ನು ತಪಸಾಣೆ ನಡೆಸಲಾದ ಸಂಸ್ಥೆಗಳು, ಹೂಡಲಾದ ಮೊಕದ್ದಮೆಗಳು, ಶಿಕ್ಷೆ ಹಾಗು ವಿಧಿಸಿದ ದಂಡನ ಮೊತ್ತ ಪರಿಶೀಲಿಸಿದಲ್ಲಿ ಸಮಸ್ಯೆಯ ಪ್ರಮಾಣಕ್ಕೆ ಹೋಲಿಸಿದಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿದೆ.

ರಾಜ್ಯದಲ್ಲಿ ಪ್ರತಿ ವರ್ಷ ಮಾಲೀಕರು ಮತ್ತು ಕಾರ್ಮಿಕರ ನಡುವಿನ ತಿಕ್ಕಾಟ ಹೆಚ್ಚುತ್ತಿದೆ. ವಿವಾದಗಳು ಸೌಹಾರ್ದಯುತವಾಗಿ ಬಗೆಹರಿಯುತ್ತಿಲ್ಲ. ಪರಿಣಾಮವಾಗಿ ಕಾರ್ಮಿಕರಲ್ಲಿ ಅತೃತ್ತಿ ಆಕ್ರೋಶ ಹೆಚ್ಚುತಿದೆ. ಅದರ ಆಂಶಿಕ ಸ್ಫೋಟವಾಗಿ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಹೊರಹೊಮ್ಮಿದೆ. ಬೆಂಗಳೂರು ಮತಿತರೆ ಕಡೆ ಕಾರ್ಮಿಕರು ಸಂಘಟಿ–ತರಾಗುತ್ತಿದ್ದು ಮಾಲೀಕರು ಇಂತಹ ಸೂಪರ್ ಲಾಭಗಳಿಗಾಗಿ ಚಿಕ್ಕಬಳ್ಳಾಪುರ, ಗೌರಿಬಿದನೂರು ಮತ್ತಿತರೆ ಕಡೆ ಕಾರ್ಖಾನೆ ಆರಂಭಿಸಿ ಕಾರ್ಮಿಕರನ್ನು ಶೋಷಿಸಲು ಆರಂಭಿಸಿದ್ದಾರೆ. ದುಡಿಯುವ ವರ್ಗ ಇಂತಹ ನೀತಿಗಳ ವಿರುದ್ದ ಸಂಘಟಿತವಾಗಿ ಚಳವಳಿ ನಡೆಸಬೇಕಿದೆ ಎಂದರು. ಸಭೆಯಲ್ಲಿ ನೂತನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ ಸಿದ್ದಗಂಗಪ್ಪ, ಅಧ್ಯಕ್ಷರಾದ ಲಕ್ಷ್ಮೀ ದೇವಮ್ಮ ಮೊದಲಾದವರು ಮಾತನಾಡಿದರು. ಬಹಿರಂಗ ಸಭೆಯಲ್ಲಿ ಸಾವಿರಾರು ಜನ ಭಾಗವಹಿಸಿದ್ದರು.

ಅಧ್ಯಕ್ಷರಾಗಿ ಜಿ.ಲಕ್ಷ್ಮೀದೇವಮ್ಮ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ಸಿದ್ದಗಂಗಪ್ಪ, ಖಜಾಂಚಿಯಾಗಿ ಕೆ.ಎನ್.ಪಾಪಣ್ಣ ಹಾಗೂ 16 ಜನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ವರದಿ : ಕೆ.ಎನ್.ಪಾಪಣ್ಣ/ಸಿದ್ದಗಂಗಪ್ಪ

'ಬೇಡಿಕೆ ಈಡೇರಿಸಲು ಕಾರ್ಮಿಕ ಚಳವಳಿ ಬಲಪಡಿಸಿ'

ಚಿತ್ರದುರ್ಗ ಜಿಲ್ಲಾ 5 ನೇ ಸಿಐಟಿಯು ಸಮ್ಮೇಳನ ಕರೆ



ಟಿ. ತಿಪ್ಪೇಸ್ವಾಮಿ



ಡಿ.ಎಂ. ಮಲಿಯಪ್ಪ



ಸಿ. ಕೆ. ಗೌಸ್‌ಪೀರ್

ಅಕ್ಷರ ದಾಸೋಹ, ಹಮಾಲಿ ಕಾರ್ಮಿಕರು ಮತ್ತು ಗ್ರಾಮಪಂಚಾಯ್ತಿ ನೌಕರರು ತಮ್ಮ ಮೂಲ ಬೇಡಿಕೆಗಳನ್ನು ಈಡೇರಿಕೊಳ್ಳಬೇಕಾದರೆ ಸಿಐಟಿಯು ನೇತೃತ್ವದ ಕಾರ್ಮಿಕ ಚಳವಳಿಯನ್ನು ಜಿಲ್ಲೆಯಲ್ಲಿ ಬಲಪಡಿಸುವ ಅವಶ್ಯಕತೆ ಇದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಸೈಯದ್ ಮುಜೀಬ್ ಕರೆ ನೀಡಿದರು.

ಜುಲೈ 30ರಂದು ಚಿತ್ರದುರ್ಗ ಜಿಲ್ಲೆಯ 5 ನೇ ಸಿಐಟಿಯು ಸಮ್ಮೇಳನವನ್ನು ಹಿರಿಯೂರಿನ ಗುರುಭವನದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು "ಬರಪೀಡಿತ ಚಿತ್ರದುರ್ಗ ಜಿಲ್ಲೆಯಲ್ಲಿ ಅಸಂಘಟಿತ ಕಾರ್ಮಿಕರು, ಕೃಷಿ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೃಷಿ ಆಧಾರಿತವಾದ ಈ ಜಿಲ್ಲೆ ಸದಾ ಬರಗಾಲಕ್ಕೆ ತುತ್ತಾಗುತ್ತಿದೆ. ಇಲ್ಲಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿ ಹೇಳಿಯೇ ಹತ್ತಾರು ಜನ ಶಾಸಕರು ಸಚಿವರು ಆಗುತ್ತಾರಾದರೂ ಈ ಜಿಲ್ಲೆಯ ಜನರ ಬವಣೆ ಮಾತ್ರ ತಪ್ಪಿಲ್ಲ. ಇಂತಹ ಸನ್ನಿವೇಶದಲ್ಲಿ ಜನರ ಸಂಕಟಗಳನ್ನು ಬಗೆಹರಿಯಬೇಕಾದರೆ ಕಾರ್ಮಿಕ ಚಳವಳಿ ತನ್ನ ಪಾತ್ರವನ್ನು ನಿರ್ವಹಿಸಬೇಕು ಈ ನಿಟ್ಟಿನಲ್ಲಿ ಸಿಐಟಿಯು ಜಿಲ್ಲಾ ಸಮ್ಮೇಳನ ಸೂಕ್ತ ತೀರ್ಮಾನ ಕೈಗೊಳ್ಳಲಿ ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ ಜಿಲ್ಲಾ ಸಿಐಟಿಯು ಗೌರವಧ್ಯಕ್ಷರಾದ ಕೆ.ಎಲ್.ಭಟ ಮಾತನಾಡಿ "ಎರಡು ವರ್ಷಗಳ ಕೆಳಗೆ ಒಳ್ಳೆಯ ದಿನಗಳನ್ನು ನೀಡುವುದಾಗಿ ಅಧಿಕಾರಕ್ಕೆ ಬಂದ ಮೋದಿ ಸರಕಾರ ಎಲಾ ಅಗತ್ಯ ವಸ್ತುಗಳ ಬೆಲೆಗಳನ್ನು ಏರಿಸುವ ಮೂಲಕ ಜನಸಾಮನ್ಯರ ಬದುಕಿನ ಮೇಲೆ ಗದಾಪ್ರಹಾರ ನಡೆಸಿದೆ. ಈ ನೀತಿಗಳು ಬದಲಾಗದ ಹೊರತು ಕಾರ್ಮಿಕರಿಗೆ ಉತ್ತಮ ಭವಿಷ್ಯವಿಲ್ಲ. ಆದ್ದರಿಂದ ದೇಶದ ಕಾರ್ಮಿಕ ಚಳವಳಿಗಳು ಸೇರಿ ಕರೆ ನೀಡಿರುವ ಸೆಪ್ಟೆಂಬರ್ 2ರ 17ನೇ ಸಾರ್ವತ್ರಿಕ ಮುಷ್ಕರವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಅವರು ಕರೆ ನೀಡಿದರು.

ಸಮಾರಂಭದಲ್ಲಿ ದಾವಣಗೆರೆ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಶ್ರೀನಿವಾಸಮೂರ್ತಿ, ಜಿಲ್ಲಾ ಕಾರ್ಯದರ್ಶಿ ಓ.ತಿಪ್ಪೇಸ್ವಾಮಿ. ಚಿತ್ರದುರ್ಗ ಜಿಲ್ಲಾ ಅಧ್ಯಕ್ಷರಾದ ಸಿ.ಕೆ.ಗೌಸ್‌ಪೀರ್ ಉಪಾಧ್ಯಕ್ಷರಾದ ಡಿ.ಎಂ.ಮಲಿಯಪ್ಪ, ಹಮಾಲಿ ಕಾರ್ಮಿಕ ಫೆಡರೇಷನ್ ಜಿಲ್ಲಾ ಮುಖಂಡರಾದ ವೀರಭದ್ರಪ್ಪ, ನಿಂಗಣ್ಣ, ರಾಮಣ್ಣ, ಗ್ರಾಮ ಪಂಚಾಯ್ತಿ ನೌಕರರ ಸಂಘದ ಮುಖಂಡರಾದ ಮಾರಪ್ಪ, ಶಶಿಕುಮಾರ್, ಅಕ್ಷರ ದಾಸೋಹ ನೌಕರರ ಮುಖಂಡರಾದ, ನಿಂಗಮ್ಮ, ವಿಜಯಮ್ಮ, ಶಿವಮ್ಮ ಮತ್ತು ಬಾಲಮ್ಮ ಮೊದಲಾದವರು ಉಪಸ್ಥಿತರಿದ್ದರು.

ಜುಲೈ 30ರಂದು ಮಹಾದಾಯಿ ನೀರು ಹಂಚಿಕೆ ಕುರಿತು ನ್ಯಾಯಾಲಯ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದ್ದನ್ನು ವಿರೋಧಿಸಿ ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿತ್ತು. ಆದಾಗ್ಯೂ ಜಿಲ್ಲೆಯ ವಿವಿಧ ತಾಲೂಕುಗಳಿಂದ ಸುಮಾರು 600ಕ್ಕೂ ಹೆಚ್ಚಿನ ಹಮಾಲಿ ಕಾರ್ಮಿಕರು, ಅಕ್ಷರ ದಾಸೋಹ ಹಾಗೂ ಗ್ರಾಮ ಪಂಚಾಯ್ತಿ ನೌಕರರು ಸಮ್ಮೇಳನದ ಅಂಗವಾಗಿ ಮೆರವಣಿಗೆಯಲ್ಲಿ ನಡೆಸಿದರು ಮತ್ತು ಮಹಾದಾಯಿ ವಿಚಾರದಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಲು ಅಗತ್ಯ ಕ್ರಮವನ್ನು ರಾಜ್ಯ ಮತ್ತು ಕೇಂದ್ರ ಸರಕಾರಗಳು ಕೈಗೊಳ್ಳಬೇಕೆಂದು ಆಗ್ರಹಪಡಿಸಲಾಯಿತು.

ಎರಡನೇ ದಿನ ಪ್ರತಿನಿಧಿಗಳ ಕಲಾಪ ನಡೆಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಟಿ.ತಿಪ್ಪೇಸ್ವಾಮಿ ಮಂಡಿಸಿದ ವರದಿ ಮೇಲೆ ಹತ್ತಕ್ಕೂ ಹೆಚ್ಚಿನ ಸಂಗಾತಿಗಳು ಚರ್ಚೆ ನಡೆಸಿದರು. ಬರಪೀಡಿತ ಜಿಲ್ಲೆಗೆ ಶಾಶ್ವತ ನೀರಾವರಿ ಜಾರಿ ಸೇರಿದಂತೆ ಹಲವಾರು ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು. ಮುಂದಿನ ಮೂರು ವರ್ಷಗಳ ಅವಧಿಗೆ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಸಮ್ಮೇಳನದ ಸಮಾರೋಪ ಭಾಷಣವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ ಮಾಡುತ್ತಾ "ಅತಿ ಹೆಚ್ಚಿನ ಸಂಖ್ಯೆಯಲ್ಲಿ ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗದ ಜನರನ್ನು ಹೊಂದಿರುವ ಚಿತ್ರದುರ್ಗ ಜಿಲ್ಲೆ ಮೊದಲಿನಿಂದಲೂ ಬಲಾಢ್ಯ ರಾಜಕೀಯದ ದಾಳವಾಗಿದೆ. ಈ ವಿಭಾಗಗಳ ಹೆಚ್ಚಿನ ಭೂಮಿಯನ್ನು ಹೊಂದಿದ್ದರೂ ಅವರಿಗೆ ಕೃಷಿ ಮಾಡಲು ನೀರಾವರಿ ಸೌಲಭ್ಯವಿಲ್ಲದಂತಾಗಿದೆ. ಕೇವಲ ಮಳೆ ಆಶ್ರಯ ಹೊಂದಿರುವ ಈ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ಕೃಷಿಕೂಲಿಕಾರರು, ಬಡ ರೈತರು ಮತ್ತು ಅಸಂಘಟಿತ ಜನವಿಭಾಗಗಳಿವೆ. ಈ ವಿಭಾಗಗಳನ್ನು ಚಳವಳಿಗೆ ಇಳಿಸುವ ಜವಬ್ದಾರಿ ನಮ್ಮ ಮೇಲಿದೆ. ಈ ಕೆಲಸವನ್ನು ಹೊಸದಾಗಿ ಆಯ್ಕೆಯಾಗಿರುವ ಜಿಲ್ಲಾ ಸಮಿತಿ ಮುಂದಿನ ದಿನಗಳಲ್ಲಿ ಮಾಡಲು ಸಂಕಲ್ಪ ಮಾಡಬೇಕು ಆ ಮೂಲಕ ನಮ್ಮಿಂದ ದೂರವಿರುವ ಜನರನ್ನು ತಲುಪುವ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಅಧ್ಯಕ್ಷರು : **ಟಿ. ತಿಪ್ಪೇಸ್ವಾಮಿ**
ಪ್ರಧಾನ ಕಾರ್ಯದರ್ಶಿ: **ಡಿ.ಎಂ. ಮಲಿಯಪ್ಪ**
ಖಜಾಂಚಿ : **ಸಿ. ಕೆ. ಗೌಸ್‌ಪೀರ್**

ವರದಿ: ಡಿ.ಎಂ ಮಲಿಯಪ್ಪ

PÉÃ½ZÀÁY

ನಕಲಿ ಗೋರಕ್ಷಕರಿಗೆ ಶಿಕ್ಷೆಯಾಗುವುದು ಎಷ್ಟು ಮುಖ್ಯವೋ, ಅಸಲಿ ಗೋರಕ್ಷಕರಿಗೆ ಸರಕಾರದ ಭದ್ರತೆ ಮತ್ತು ಪ್ರೋತ್ಸಾಹ ಸಿಗುವುದು ಅಷ್ಟೇ ಮುಖ್ಯ. ನರೇಂದ್ರ ಮೋದಿಯವರು ನಕಲಿ ಗೋರಕ್ಷಕರನ್ನು ಗುರುತಿಸಿದಂತೆ, ಅಸಲಿ ಗೋರಕ್ಷಕರು ಯಾರು ಎನ್ನುವುದನ್ನೂ ಗುರುತಿಸಿ ಅವರಿಗೆ ಸರಕಾರದ ಸೌಲಭ್ಯಗಳು ತಲುಪುವಂತೆ ಮಾಡಬೇಕು. ..ಅಂದ ಹಾಗೆ ಈ ನಿಜವಾದ ಗೋರಕ್ಷಕರು ಇನ್ನಾರೂ ಅಲ್ಲ. ಯಾರೆಲ್ಲ ತಮ್ಮ ತಮ್ಮ ಹಟ್ಟಿಗಳಲ್ಲಿ ಗೋವನ್ನು ಸಾಕುತ್ತಿದ್ದಾರೆಯೋ ಆ ರೈತರೇ ನಿಜವಾದ ಗೋರಕ್ಷಕರು. ಇಂದು ತಮ್ಮ ಗೋವುಗಳನ್ನು ಯಾರಿಗೆ ಮಾರಬೇಕು, ಮಾರಬಾರದು ಎಂದು ತೀರ್ಮಾನಿಸುವ ಹಕ್ಕಿರುವುದೂ ಇವರಿಗೆ. ತಾನು ಸಾಕಿ ಬೆಳೆಸಿದ ಗೋವುಗಳನ್ನು ಅದು ಹಾಲುಕೊಡದೇ ಇದ್ದಾಗ ಏನು ಮಾಡಬೇಕು ಎನ್ನುವುದನ್ನು ನಿರ್ಧರಿಸುವವರೂ ಇವರೇ ಆಗಿದ್ದಾರೆ. ಸಾಕಿ ಬೆಳೆಸಿದ ಗೋವುಗಳನ್ನು ಏನು ಮಾಡಬೇಕು ಎನ್ನೋದನ್ನು, ರಾತ್ರಿ ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸುವ ನಕಲಿ ಗೋರಕ್ಷಕರಿಂದ ಇವರು ಕಲಿಯಬೇಕಾಗಿಲ್ಲ. ಆದುದರಿಂದ ಗೋವುಗಳನ್ನು ಹೇಗೆ ಉಳಿಸುವುದು, ಬೆಳೆಸುವುದು ಎನ್ನುವ ಸಲಹೆಗಳನ್ನು ಸರಕಾರ ನಿಜವಾದ ಗೋರಕ್ಷಕರಿಂದ ಪಡೆಯ ಬೇಕಾಗಿದೆ.

– ವಾರ್ತಾಭಾರತಿ ಸಂಪಾದಕೀಯ

JANASHAKTHI KANNADA VARA PATRIKE AUG 21, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Saturday
Licensed to Post without prepayment License No. WPP-283

ಸೆಪ್ಟಂಬರ್ 2 ರ ಮುಷ್ಕರದತ್ತ

ಆಗಸ್ಟ್ 9ರಂದು ರಾಜ್ಯಾದ್ಯಂತ ಬೇಡಿಕೆ ದಿನಾಚರಣೆ







ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವತಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ, ಹಾಗೂ ಜನವಿರೋಧಿ ನೀತಿಗಳಾದ ಜಾಗತೀಕರಣ–ಉದಾರೀಕರಣ–ಖಾಸಗೀಕರಣ ನೀತಿಗಳ ವಿರುದ್ಧ ಮತ್ತು ಕಾರ್ಮಿಕರ ಮುಖ್ಯ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಆಗಸ್ಟ್ 09ರಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ತರುವ ಮೂಲಕ ಕೇಂದ್ರ ಸರಕಾರ ತನ್ನ ನಿಲುವಿನಿಂದ ಹಿಂದೆ ಸರಿಯಬೇಕು, ಕಾರ್ಮಿಕರ ಕನಿಷ್ಠ ವೇತನವನ್ನು ಹದಿನೆಂಟು ಸಾವಿರಕ್ಕೆ ಹೆಚ್ಚಿಸುವುದು, ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದುಗೊಳಿಸಲು, ವಿವಿಧ ಬೇಡಿಕೆಗಳನ್ನು ಪ್ರತಿಭಟನೆ ಮೂಲಕ ಆಗ್ರಹಿಸಲಾಯಿತು.

ಇತ್ತೀಚಿಗೆ ನಡೆದ ಗಾರ್ಮೆಂಟ್ ನೌಕಕರ ಮುಷ್ಕರ ಹಾಗೂ ಜುಲೈ ಮಾಸಾಂತ್ಯದಲ್ಲಿ ಜರುಗಿದ ಸಾರಿಗೆ ನೌಕಕರ ಮುಷ್ಕರ ಕಾರ್ಮಿಕ ವರ್ಗದ ಹೋರಾಟದ ಮನೋಪ್ರವೃತ್ತಿಯನ್ನು ನೆನಪಿಸುತ್ತದೆ ಹಾಗೂ ಜೆಸಿಟಿಯು ಸಂಘಟನೆಯು ದೀರ್ಘ ಕಾಲದಿಂದ ನಡೆಸುತ್ತಿರುವ ಹೋರಾಟದ ಭಾಗವಾಗಿವೆ. ಈ ಎರಡು ಹೋರಾಟಗಳು ಸಹ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಮಿಕರ ಬಗ್ಗೆ ಇರುವ ನಿಷ್ಕಾಳಜಿಯನ್ನು ಮತ್ತು ದುಡಿಯುವ ಜನತೆ ತೀವ್ರ ಸಂಕಷ್ಟದಲ್ಲಿರುವುದನ್ನು ತೋರಿವೆ.

ಬೆಂಗಳೂರು: ನಗರ ರೈಲ್ವೇ ನಿಲ್ದಾಣದಿಂದ ಹೊರಟ ಕಾರ್ಮಿಕರ ಮೆರವಣಿಗೆಯು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು. ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ರಾಜ್ಯ ಕಾರ್ಯದರ್ಶಿ ಕೆ.ಎನ್.ಉಮೇಶ್, ಖಜಾಂಚಿ ಪಿ.ಕೆ.ಪರಮೇಶ್ವರ್, ಐಎನ್‌ಟಿಯುಸಿ ಸಂಘಟನಾ ಕಾರ್ಯದರ್ಶಿ ಶಾಮಣ್ಣ ರೆಡ್ಡಿ, ಎಐಟಿಯುಸಿ ಅಧ್ಯಕ್ಷರಾದ ಅನಂತಸುಬ್ಬರಾವ್, ಟಿಯುಸಿಸಿ ಅಧ್ಯಕ್ಷರಾದ ಜಿ.ಆರ್.ಶಿವಶಂಕರ್ ಮುಂತಾದವರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ ಕಳೆದ ವರ್ಷವೂ ಬೇಡಿಕೆಗಳನ್ನು ಈಡೇರಿಸಬೇಕೆಂದು ಮಹಾ ಮುಷ್ಕರ ನಡೆಸಿದರೂ ಕೇಂದ್ರ ಸರ್ಕಾರವು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದೆ ಇರುವ ಪರಿಣಾಮ ದೇಶದ ಕಾರ್ಮಿಕರ ಮತ್ತೆ ಮುಷ್ಕರಕ್ಕೆ ಮುಂದಾಗಿದ್ದಾರೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ಎಐಟಿಯುಸಿ ಜಿಲ್ಲಾ ಅಧ್ಯಕ್ಷರಾದ ಎಚ್.ವಿ.ರಾವ್ ಎಚ್‌ಎಂಎಸ್ ಸಂಘಟನೆಯ ರಾಜ್ಯ ಮುಖಂಡರಾದ ವೆಂಕಟರಾಮ್, ಐಎನ್‌ಟಿಯುಸಿ ಜಿಲ್ಲಾ ಮುಖಂಡರಾದ ಸದಾಶಿವ ಶೆಟ್ಟಿ, ಬಿಎಸ್‌ಎನ್‌ಎಲ್ ನೌಕರರ ಸಂಘಟನೆಯ ಮುಖಂಡರಾದ ಕೃಷ್ಣ, ಜೆಸಿಟಿಯು ಜಿಲ್ಲಾ ಸಂಚಾಲಕರಾದ ಸಿಐಟಿಯು ಮುಖಂಡ ಜೆ. ಬಾಲಕೃಷ್ಣ ಶೆಟ್ಟಿರವರು ಮಾತನಾಡಿದರು. ಎಐಟಿಯುಸಿ ಮುಖಂಡ ಬಿ. ಸುರೇಶ ಧನ್ಯವಾದವಿತ್ತರು. ವಿಮಾ ನೌಕರ ಸಂಘಟನೆ, ಎಐಸಿಸಿಟಿಯು ಮುಖಂಡರೂ ಸಭೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಮಿನಿವಿಧಾನ ಸೌಧದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಕಾರ್ಮಿಕರ ಬೃಹತ್ ಮೆರವಣಿಗೆ ನಡೆಯಿತು.



ತುಮಕೂರು ಜಿಲ್ಲೆಯ ಬಿಎಸ್‌ಎನ್‌ಎಲ್ ಕಛೇರಿ ಮುಂಭಾಗ ಮಾನವ ಸರಪಳಿ ನಡೆಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕಾರ್ಮಿಕರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ಮಾತನಾಡಿದರು. ಎಐಟಿಯುಸಿಯ ಜಿಲ್ಲಾ ಉಪಾಧ್ಯಕ್ಷ ಕಂಬೇಗೌಡ, ಎ.ಐ.ಯು.ಟಿ.ಯು.ಸಿಯ ಎಸ್.ಎನ್.ಸ್ವಾಮಿ, ಸಿಐಟಿಯುನ ಎನ್.ಕೆ.ಸುಬ್ರಮಣ್ಯ, ಎಐಟಿಯುಸಿಯ ಗಿರೀಶ್ ರವರು ಮಾತನಾಡಿದರು. ಸಿಐಟಿಯುನ ಜಿಲ್ಲಾ ಖಜಂಚಿ ಎ.ಲೋಕೇಶ್, ಕಟ್ಟಡ ಕಾರ್ಮಿಕರ ಸಂಘದ ಘಟಕ ಅಧ್ಯಕ್ಷ ರಾಮಚಂದ್ರು, ರಾಮಣ್ಣ, ಕಾಳೇಶ್ವರಿಯ ಮುತ್ತುರಾಜ್, ಎಐಟಿಯುಸಿಯ ಅಶ್ವಥ್‌ನಾರಾಯಣ, ನಾಗಣ್ಣ, ಎಐಯುಟಿಯುಸಿಯ ಮಂಜುಳ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಹುಬ್ಬಳಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಖಂಡರಾದ ಸಂಚಾಲಕರಾದ ಮಹೇಶ ಪತ್ತಾರ, ಎಐಟಿಯುಸಿ ಯ ಎನ್.ಎ.ಖಾಜಿ, ಎಐಯುಟಿಯುಸಿ ತಾಯಿದಾಸ್, ಟಿಯುಸಿಸಿಯ ಉಮೇಶ ಬಸಿದೋಣಿ ಸಿಐಟಿಯುವಿನ ಗುರುಸಿದ್ದಪ್ಪ ಅಂಬಿಗೇರ, ಎಐಐಇಎನ ಬಿ.ಎನ್.ಪೂಜಾರಿ, ಕಟ್ಟಡ ಕಾರ್ಮಿಕ ಸಂಘಟನೆಯ ಎಂ.ಎಚ್.ಮುಲ್ಲಾ, ಆಟೋ ಚಾಲಕರ ಸಂಘದ ಶೇಖರಯ್ಯ ಮಠಪತಿ, ಬಿಎಸ್‌ಎನ್‌ಎಲ್‌ಇಯು ಹರೀಶ ದೊಡ್ಡಮನಿ ಮತ್ತು ಪುಂಡಲೀಕ ಬಡಿಗೇರ, ಭಾಗವಹಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಮೆರವಣಿಗೆ ನಡೆಸಿದ ಸಿಐಟಿಯು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್, ಜಿಲ್ಲಾಧ್ಯಕ್ಷರಾದ ತಿಲಕಗೌಡ, ಪ್ರಧಾನ ಕಾರ್ಯದರ್ಶಿ ಸಿ.ಆರ್.ಶಾನಬಾಗ್, ಖಜಾಂಚಿ ಉದಯ್ ನಾಯಕ್ ಮುಂತಾದವರು ಭಾಗವಹಿಸಿದ್ದರು.

ರಾಯಚೂರು, ಕೊಪ್ಪಳ, ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮೆರವಣಿಗೆ ನಡೆಸಿದ ನೂರಾರು ಕಾರ್ಯಕರ್ತರು ಸರಕಾರಿ ಕಛೇರಿ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು



ಚಿತ್ರದುರ್ಗ ವರದಿ ಪುಟ 15ರಲ್ಲಿ



ದಾವಣಗೆರೆ ವರದಿ ಪುಟ 6ರಲ್ಲಿ



ಚಿಕ್ಕಬಳ್ಳಾಪುರ ವರದಿ ಪುಟ 15ರಲ್ಲಿ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**